بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 02

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 46

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

18 ನವೆಂಬರ್ 2021, 18 ನಬುವ್ವತ್ 1400 ತಬ್‌ಲೀಗ್ ಹಿಜರಿ ಶಮ್‌ಸಿ,
12 ರಬೀಉಸ್ಸಾನಿ 1443 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

يٰۤاَيُّهَا الَّذِيْنَ اٰمَنُوْا عَلَيْكُمْ اَنْفُسَكُمْ ۚ
لَا يَضُرُّكُمْ مَّنْ ضَلَّ اِذَا اهْتَدَيْتُمْ ۗ
اِلَى اللّٰهِ مَرْجِعُكُمْ جَمِيْعًا فَيُنَبِّئُكُمْ
بِمَا كُنْتُمْ تَعْمَلُوْنَ (سورة المائدة:106)

**(ಅಲ್‌ಮಾಇದಃ : 106)**

ಅಂದರೆ: ಎಲೈ ವಿಶ್ವಾಸಿಗಳೇ, ನಿಮ್ಮ ಬಗ್ಗೆ ನೀವು ಜಾಗ್ರತೆವಹಿಸಿಕೊಳ್ಳಿರಿ. ನೀವು ಸತ್ಪಥವನ್ನು ಗಳಿಸಿದ್ದರೆ, ದಾರಿತಪ್ಪಿದವರು ನಿಮಗೇನೂ ಹಾನಿಯುಂಟು ಮಾಡಲಾರರು. ಅಲ್ಲಾಹನ ಬಳಿಗೇ ನಿಮ್ಮೆಲ್ಲರ ಮರಳಿಕೆ. ಆಗ ನೀವೇನು ಮಾಡಿದ್ದೀರೆಂದು ನಿಮಗೆ ತಿಳಿಸಿಕೊಡಲಾಗುವುದು.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಭಿಕ್ಷೆ ಬೇಡಲು ಖಂಡನೆ ಮತ್ತು ಅದರಿಂದ ದೂರವಿರಲು ಉತ್ತೇಜನ.

(1480) ಹಝ್‌ರತ್ ಅಬೂಹುರ್ರೈರ(ರ) ವರದಿ ಮಾಡುತ್ತಾರೆ. ನಬಿ ಕರೀಂ(ಸ) ನುಡಿದರು. ನಿಮ್ಮಲ್ಲಿ ಯಾರು ತನ್ನ ಹಗ್ಗ ತೆಗೆದುಕೊಂಡು ಮುಂಜಾನೆ ಗುಡ್ಡಗಾಡಿಗೆ ಹೋಗಿ ಸೌದೆಯನ್ನು ಸಂಗ್ರಹಿಸಿ ಅದನ್ನು ಮಾರಾಟ ಮಾಡಿ ಜೀವನ ಸಾಗಿಸುತ್ತಾರೋ, ಮತ್ತು ಅದರಲ್ಲಿ ಸದಖಾ (ದಾನ) ನೀಡುತ್ತಾರೋ ಅದು ಭಿಕ್ಷೆ ಬೇಡುವುದಕ್ಕಿಂತ ಉತ್ತಮವಾಗಿದೆ.

### ತನ್ನ ಸದಖಾ ಮಾಡಿದ ವಸ್ತುವನ್ನು ಖರೀದಿಸುವುದು ನಿಷಿದ್ಧವಾಗಿದೆ.

(1489) ಹಝ್‌ರತ್ ಅಬ್ದುಲ್ಲ ಬಿನ್ ಉಮರ್(ರ) ವರದಿ ಮಾಡುತ್ತಾರೆ. ಹಝ್‌ರತ್ ಉಮರ್ ಬಿನ್ ಖತ್ತಾಬ್(ರ) ಅಲ್ಲಾಹನ ಮಾರ್ಗದಲ್ಲಿ ಒಂದು ಕುದುರೆಯನ್ನು ಸದಖಾ (ದಾನ) ಮಾಡಿದರು. ಮತ್ತೆ ಆ ಕುದುರೆ ಮಾರಾಟವಾಗುತ್ತಿರುವುದನ್ನು ನೋಡಿ ಅದನ್ನು ಖರೀದಿಸಬಯಸಿದರು. ಅವರು ನಬಿ(ಸ) ರವರ ಬಳಿಗೆ ಬಂದು ಪ್ರವಾದಿಯವರೊಂದಿಗೆ(ಸ) ಅನುಮತಿ ಯಾಚಿಸಿದರು. ಆಗ ನೆಬಿ(ಸ) ನುಡಿದರು. ತನ್ನ ಸದಖಾ (ದಾನ) ವನ್ನು ಹಿಂಪಡೆಯಬೇಡಿರಿ.

**(ಸಹೀಹ್ ಬುಖಾರಿ, ಸಂಪುಟ–3, ಕಿತಾಬುಝ್ಝಕಾತ್, ಮುದ್ರಣ ಖಾದಿಯಾನ್ 2008)**

**ನಾನು ಸತ್ಯವಾಗಿ ಹೇಳುತ್ತೇನೆ. ಅನುಮಾನಪಡುವುದು ಬಹಳ ಕೆಟ್ಟ ಗುಣವಾಗಿದೆ. ಮನುಷ್ಯನ ವಿಶ್ವಾಸವನ್ನು ಧ್ವಂಸಗೊಳಿಸುತ್ತದೆ ಮತ್ತು ಸತ್ಯ ಪ್ರಮಾಣಿಕತೆಯಿಂದ ದೂರ ಮಾಡುತ್ತದೆ. ಮಿತ್ರರನ್ನು ಶತ್ರುಗಳನ್ನಾಗಿ ಮಾಡುತ್ತದೆ.**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಅನುಮಾನದ ಸ್ವಭಾವವು ಸತ್ಯದ ಬೇರನ್ನು ಕಡಿದುಹಾಕುತ್ತದೆ.

ಈ ಮಾತನ್ನು ಸರಿಯಾಗಿ ನೆನಪಿಡಿರಿ. ಎಲ್ಲಾ ಕೆಡುಕುಗಳು ಮತ್ತು ಪಾಪಗಳು ಅನುಮಾನ ಸ್ವಭಾವದಿಂದ ಉಂಟಾಗುತ್ತದೆ. ಆದುದರಿಂದ ಅಲ್ಲಾಹನು ಅದರಿಂದ ಉಳಿದಿರಲು ಆದೇಶಿಸುತ್ತಾನೆ **'ಇನ್ನ ಬಅದಝ್ಝನ್ನೇ ಇಸ್‌ಮುನ್'** (ಅಲ್‌ಹುಜುರಾತ್–13). ಮೌಲ್ವಿಗಳು ನಮ್ಮನ್ನು ಅನುಮಾನಿಸದಿರುತ್ತಿದ್ದರೆ ಸತ್ಯ ಸ್ಥಿರತೆಯಿಂದ ನಮ್ಮ ಮಾತುಗಳನ್ನು ಆಲಿಸುತ್ತಿದ್ದರು. ನಮ್ಮ ಗ್ರಂಥಗಳನ್ನು ಅಧ್ಯಯನ ಮಾಡುತ್ತಿದ್ದರು ಮತ್ತು ನಮ್ಮ ಬಳಿ ಬಂದು ನಮ್ಮ ಆಗುಹೋಗುಗಳನ್ನು ಕಾಣುವವರಾದರೆ ಅವರು ನಮ್ಮ ಮೇಲೆ ಆರೋಪಗಳನ್ನು ಮಾಡುತ್ತಿರಲಿಲ್ಲ. ಆದರೆ ಅವರು ಅಲ್ಲಾಹನ ಈ ವಚನವನ್ನು ಕಡೆಗಾಣಿಸಿದರು. ಅದರ ಪ್ರಕಾರ ನಡೆಯಲಿಲ್ಲ, ಅದರ ಪರಿಣಾಮವಾಗಿ ನನ್ನ ಮೇಲೆ ಅನುಮಾನಪಟ್ಟರು ಮತ್ತು ನನ್ನ ಜಮಾಅತಿನ ಮೇಲೂ ಅನುಮಾನಪಡುತ್ತಾ ಮಿಥ್ಯ ಆರೋಪಗಳನ್ನು ಮಾಡಲು ಪ್ರಾರಂಭಿಸಿದರು. ಎಲ್ಲಿಯವರೆಗೆ ಎಂದರೆ ಕೆಲವರು ಎಷ್ಟೊಂದು ಭಂಡತನ ತೋರಿಸಿದರು ಎಂದರೆ "ಇದು ನಾಸ್ತಿಕರ ಜಮಾಅತ್ ಆಗಿದೆ, ಇವರು ನಮಾಝ್ ನಿರ್ವಹಿಸುವುದಿಲ್ಲ, ಉಪವಾಸ ಮಾಡುವುದಿಲ್ಲ. ಇತ್ಯಾದಿ ಇತ್ಯಾದಿ. ಅವರು ಈ ಅನುಮಾನದಿಂದ ದೂರ ಉಳಿಯುವವರಾಗುತ್ತಿದ್ದರೆ ಈ ಸುಳ್ಳಿನ ಶಾಪಕ್ಕೆ ಒಳಗಾಗುತ್ತಿರಲಿಲ್ಲ. ನಾನು ಸತ್ಯವಾಗಿ ಹೇಳುತ್ತೇನೆ. ಅನುಮಾನಪಡುವುದು ಬಹಳ ಕೆಟ್ಟ ಗುಣವಾಗಿದೆ. ಮನುಷ್ಯನ ವಿಶ್ವಾಸವನ್ನು ಧ್ವಂಸಗೊಳಿಸುತ್ತದೆ ಮತ್ತು ಸತ್ಯ ಹಾಗೂ ಪ್ರಾಮಾಣಿಕತೆಯಿಂದ ದೂರ ಮಾಡುತ್ತದೆ. ಮಿತ್ರರನ್ನು ಶತ್ರುಗಳನ್ನಾಗಿ ಮಾಡುತ್ತದೆ. ಸತ್ಯಸಂಧರ ಮಹಾನತೆ ಪಡೆಯಬಯಸುವುದಾದರೆ ಮನುಷ್ಯನು ಅನುಮಾನದಿಂದ ದೂರ ಉಳಿಯುವುದು ಅವಶ್ಯವಾಗಿದೆ. ಒಬ್ಬರ ಬಗ್ಗೆ ಅನುಮಾನ ಉಂಟಾದರೆ ಹೆಚ್ಚೆಚ್ಚು 'ಅಸ್ತಗ್ಫಾರ್' (ಪಶ್ಚಾತ್ತಾಪ) ಪಡಬೇಕು ಮತ್ತು ಅಲ್ಲಾಹನೊಂದಿಗೆ ಪ್ರಾರ್ಥನೆ ಮಾಡಬೇಕು. ಅಲ್ಲಾಹನು ಅದರ ದುಷ್ಪರಿಣಾಮಗಳಿಂದ ರಕ್ಷಿಸಲಿ ಎಂದು. ಅದನ್ನು ಎಂದೂ ಸಣ್ಣ ವಿಷಯ ಎಂದು ಭಾವಿಸಬೇಡಿರಿ, ಇದು ಅತ್ಯಂತ ಅಪಾಯಕರ ರೋಗವಾಗಿದೆ. ಅದರಿಂದ ಮನುಷ್ಯನು ಬಹುಬೇಗ ನಾಶಹೊಂದುತ್ತಾನೆ.

ಅಂತೂ ಅನುಮಾನದ ಸ್ವಭಾವವು ಮನುಷ್ಯನನ್ನು ನಾಶಗೊಳಿಸುತ್ತದೆ. ಎಲ್ಲಿಯವರೆಗೆ ಎಂದರೆ ನರಕವಾಸಿಗಳಿಗೆ ನರಕದಲ್ಲಿ ಹಾಕಲ್ಪಟ್ಟಾಗ ಅಲ್ಲಾಹನು ಅವರಿಗೆ ಹೇಳುವನು. ಅದಕ್ಕೆ ನಿಮ್ಮ ಅಲ್ಲಾಹನ ಮೇಲೆ ಅನುಮಾನದ ಸ್ವಭಾವವೇ ಕಾರಣವಾಗಿದೆ. ಕೆಲ ಜನರು ಅಲ್ಲಾಹನು ತಪ್ಪಿತಸ್ಥರನ್ನು ಕ್ಷಮಿಸುತ್ತಾನೆ ಮತ್ತು ಸಜ್ಜನರನ್ನು ಶಿಕ್ಷಿಸುತ್ತಾನೆ ಎಂದು ಭಾವಿಸುತ್ತಾರೆ. ಇದು ಸಹ ಅಲ್ಲಾಹನ ಮೇಲೆ ಸಂಶಯವಾಗಿದೆ. ಆದುದರಿಂದ ಅದರ ಪರಿಣಾಮ ನ್ಯಾಯಕ್ಕೆ ವಿರುದ್ಧ ಹೋದಂತಾಗುತ್ತದೆ. ಪವಿತ್ರ ಖುರ್‌ಆನ್‌ನಲ್ಲಿ ವ್ಯಕ್ತಪಡಿಸಿದ ಪುಣ್ಯ ಕಾರ್ಯಗಳ ಪರಿಣಾಮಗಳಿಂದ ವಂಚಿತನಾಗುವಂತಾಗುತ್ತದೆ. ಆದುದರಿಂದ ನೆನಪಿಡಿರಿ. ಸಂಶಯದ ಪರಿಣಾಮ ನರಕವಾಗಿದೆ. ಅದನ್ನು ಸಾಧಾರಣದ ರೋಗ ಎಂದು ಭಾವಿಸಬೇಡಿರಿ. ಸಂಶಯದಿಂದ ನಿರಾಶೆ, ನಿರಾಶೆಯಿಂದ ಅಪರಾಧಗಳು ಮತ್ತು ಅಪರಾಧಗಳಿಂದ ನರಕ ಲಭ್ಯವಾಗುತ್ತದೆ. ಅದು ಸತ್ಯದ ಬೇರನ್ನು ಕಡಿದು ಹಾಕುವ ವಸ್ತುವಾಗಿದೆ. ಆದುದರಿಂದ ನೀವು ಅದರಿಂದ ದೂರವಿರಿ ಮತ್ತು ಸತ್ಯಸಂಧರ ಮಹಾನತೆಯನ್ನು ಪಡೆಯಲು ಪ್ರಾರ್ಥಿಸುತ್ತಿರಿ. (ಮಲ್ಫೂಝಾತ್ ಸಂಪುಟ–1, ಪುಟ–336, ಮುದ್ರಣ 2018 ಖಾದಿಯಾನ್)

**ಮನುಷ್ಯನ ಜೀವನ ಕೇವಲ ಇಹಲೋಕಕ್ಕೆ ಅಂತ್ಯವಾಗುವುದಿದ್ದರೆ, ಈ ಬ್ರಹ್ಮಾಂಡ ಅಲ್ಲಾಹನು ಕೇವಲ ಊಟೋಪಚರಕ್ಕಾಗಿ ಸೃಷ್ಟಿಸಿದ್ದಾನೆಂದರೆ, ಈ ಭಾವನೆ ವಿವೇಕಕ್ಕೆ ದೂರವಾದುದಾಗಿದೆ.**

ಸಯ್ಯದ್‌ನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ಸೂರಃ ಅಲ್‌ಹಿಜರ್ ವಚನ 86 **ವಮಾ ಖಲಖನಸ್ಸಮಾವಾತಿ ವಲ್‌ಅರ್‌ಝ ವಮಾ ಬೈನಹುಮಾ ಇಲ್ಲಾ ಬಿಲ್‌ಹಖ್ಖಿ, ವ ಇನ್ನಸ್ಸಾಅತ ಲಆಯತುನ್ ಫಸ್‌ಫಹಿಸ್ಸಫ್‌ಹಲ್ ಜಮೀಲ್** ರ ವ್ಯಾಖ್ಯಾನದಲ್ಲಿ ನುಡಿಯುತ್ತಾರೆ.

ಭೂಮ್ಯಾಕಾಶಗಳ ಸೃಷ್ಟಿಯನ್ನು ಅವಲೋಕಿಸಿದರೆ ಅದೇನು ಉದ್ದೇಶರಹಿತ ಎಂದು ಕಾಣುತ್ತದೆಯೇ? ಈ ಕಾರ್ಯಾಂಗದ ಮೇಲೆ ದೃಷ್ಟಿ ಬೀರಿದರೆ ಪ್ರತಿಯೊಬ್ಬ ವಿವೇಕವಂತನು ತಿಳಿಯಬಹುದು. ಅಷ್ಟೊಂದು ಬೃಹತ್ ವ್ಯವಸ್ಥೆ ಯಾವ ಉದ್ದೇಶಕ್ಕಾಗಿದೆ? ಅದರಿಂದ ಪರಿಣಾಮ ಊಹಿಸಬಹುದು? ಅಂತಿಮ ಘಳಿಗೆ (ಅಂತ್ಯದ ಸಮಯ) ಎಂದೂ ಆಗಬಹುದು. ಈ ವಾಗ್ದತ್ತ ಘಳಿಗೆ, ಪ್ರವಾದಿಗಳನ್ನು ಧಿಕ್ಕರಿಸುವವರಿಗೆ ನಾಶವಾಗಿ ಮತ್ತು ಅದನ್ನು ನಂಬುವವರ ಪ್ರಗತಿಗಾಗಿ ನಿಗದಿಯಾಗಿರುತ್ತದೆ.

*(ಪುಟ ಸಂಖ್ಯೆ–10 ರಲ್ಲಿ ಮುಂದುವರಿಸಲಾಗಿದೆ)*

لَآ اِلٰهَ اِلَّا اللّٰهُ مُحَمَّدٌ رَّسُوْلُ اللّٰه

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرٌّ مَا فِی الْعَالَمِ ✿ شَرَّ السُّمُوْمِ عَدَاوَةُ الصُّلَحَاءِ

**ಯಾವುದೇ ಕ್ರೈಸ್ತ ಆಥಮನ ಕುರಿತಾದ ಭವಿಷ್ಯವಾಣಿ ಸುಳ್ಳಾಯಿತು ಎಂದು ಭಾವಿಸಿದರೆ ಮತ್ತು ಇಸ್ಲಾಂ ಹಾಗೂ ಕ್ರೈಸ್ತ ಧರ್ಮದಲ್ಲಿ ಯಾವುದು ಸತ್ಯಧರ್ಮ ಎಂದು ತಿಳಿಯ ಬಯಸುವುದಾದರೆ ನನ್ನೊಡನೆ ಮುಬಾಹಲ ಮಾಡಿಕೊಳ್ಳಲಿ, ಎರಡೂ ಮುಬಾಹಲಕ್ಕಾಗಿ ಎರಡು ಸಾವಿರ ರೂಪಾಯಿಗಳ ಬಹುಮಾನ ನೀಡುವೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ಬಹುಮಾನದ ಪಂಥಾಹ್ವಾನ ನಾವು ಅವರ ಗ್ರಂಥ "ಅಂಜಾಮೆ ಆಥಮ್" ರೂಹಾನಿ ಖಝಾಯಿನ್ ಸಂಪುಟ 11 ರಿಂದ ಪ್ರಸ್ತುತಪಡಿಸುತ್ತಿದ್ದೆವೆ. ಪಾದರಿ ಅಬ್ದುಲ್ಲ ಆಥಮ್ ಮತ್ತು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ರವರ ನಡುವೆ ಆದ ಅಮೃತಸರ ಚರ್ಚೆಯ ಕುರಿತು ಈ ಮೊದಲೇ ನಾವು ಸವಿವರವಾಗಿ ಬೆಳಕು ಚೆಲ್ಲಿರುತ್ತೇವೆ. ಈ ಚರ್ಚೆ 22 ಮೇ 1893 ರಿಂದ 5 ಜೂನ್ 1893 ಹದಿನೈದು ದಿನಗಳವರೆಗೆ ಅಮೃತ್ಸರದಲ್ಲಿ ನಡೆದಿತ್ತು. ಚರ್ಚೆಯ ಅಂತಿಮ ದಿನವಾದ 5 ಜೂನ್ 1893 ರಂದು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಆಥಮರ ಮರಣದ ಕುರಿತು ಭವಿಷ್ಯವಾಣಿ ನುಡಿದರು. **"ಈ ಚರ್ಚೆಯಲ್ಲಿ ಉಭಯ ಪಕ್ಷಗಳಲ್ಲಿ ಯಾವ ಪಕ್ಷ ಸುಳ್ಳನ್ನು ನೆಚ್ಚಿಕೊಳ್ಳುವರೋ ಮತ್ತು ಸತ್ಯವಂತನಾದ ಅಲ್ಲಾಹನನ್ನು ಬಿಟ್ಟು ದುರ್ಬಲ ಮನುಷ್ಯನೊಬ್ಬನನ್ನು ದೇವನನ್ನಾಗಿ ಮಾಡುವರೋ, ಈ ಚರ್ಚೆಯ ದಿನದಿಂದ, ಒಂದು ತಿಂಗಳಿನಿಂದ ಹಿಡಿದು 15 ತಿಂಗಳುಗಳಲ್ಲಿ ಹಾವಿಯಾ ಎಂಬ ನರಕದಲ್ಲಿ ಬೀಳುವನು ಮತ್ತು ಅವನಿಗೆ ಘೋರವಾದ ಅಪಮಾನ ತಟ್ಟುವುದು. ಶರತ್ತೇನೆಂದರೆ ಸತ್ಯದೊಡನೆ (ದೇವನೊಡನೆ) ರುಜುಪಡಿಸಿಕೊಳ್ಳಬಾರದು."** ಈ ಭವಿಷ್ಯವಾಣಿಯು ಶರತ್ತನ್ನು ಒಳಗೊಂಡಿದ್ದು ಸ್ಪಷ್ಟವಾಗುತ್ತದೆ. ಆಥಮನು ಸತ್ಯದೊಡನೆ ರುಜುಪಡಿಸಿಕೊಂಡನು ಮತ್ತು ಈ ಶರತ್ತಿನ ಪ್ರಯೋಜನ ಪಡೆದನು' ಯಾವ ಸಮಯ ಹಝ್ರತ್ ಮಸೀಹ್ ಮೌಊದ್(ಅ) ಈ ಭವಿಷ್ಯವಾಣಿ ನುಡಿದಿದ್ದರು. ಅದೇ ಸಮಯದಿಂದ ಆಥಮನ ಮೇಲೆ ಪಶ್ಚಾತ್ತಾಪ ಮತ್ತು ರುಜುಮಾಡಿಕೊಂಡಿದ್ದ ಕುರುಹುಗಳು ಗೋಚರಿಸುತ್ತಿದ್ದವು. ನಂತರ ಈ ಇಸ್ಲಾಮಿ ಭವಿಷ್ಯವಾಣಿಯ ಪ್ರಭಾವ ಎಷ್ಟರಮಟ್ಟಿಗೆ ಅವನ ರಕ್ತನಾಳಗಳಲ್ಲಿ ಸೇರಿಕೊಂಡಿದ್ದವು ಎಂದರೆ ಪೂರ್ಣ ಹದಿನೈದು ತಿಂಗಳು ಅವನು ಗಂಭೀರ ಅಸಮಾಧಾನ ಮತ್ತು ಕಳವಳದಲ್ಲಿ ಅಳುತ್ತ ಕಳೆದನು. ಹೀಗೆ ಪೂರ್ಣ ಹದಿನೈದು ತಿಂಗಳು ಅತ್ಯಂತ ಭಯಭೀತಿಯ ಹಾವಿಯಾದಲ್ಲಿ ಬಿದ್ದಿದ್ದನು. ಆಥಮನು ಎಷ್ಟರಮಟ್ಟಿಗೆ ಸತ್ಯದೆಡೆ ರುಜುಮಾಡಿಕೊಂಡಿದ್ದ ಎಂದರೆ ಅದು ಜಗಜಾಹಿರವಾಗಿತ್ತು. ಈ ಬಗ್ಗೆ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಕೆಲ ಅಧ್ಯಾಪನೆಗಳನ್ನು ಪ್ರಸ್ತುತಪಡಿಸುತ್ತಿದ್ದೇವೆ.

**ಹದಿನೈದು ತಿಂಗಳವರೆಗೆ ಆಥಮನು ತಲೆತಗ್ಗಿಸಿಕೊಂಡಿದ್ದನು. ಈ ಅವಧಿಯಲ್ಲಿ ಕ್ರೈಸ್ತಮತ ಪರವಾಗಿಯಾಗಲಿ ಮತ್ತು ಇಸ್ಲಾಮಿನ ವಿರುದ್ಧವಾಗಲಿ ಚಕಾರ ಎತ್ತಿರಲಿಲ್ಲ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಆಥಮನು ಒಬ್ಬ ಭಯಭೀತ ಪುಕ್ಕಲ ಮನುಷ್ಯನ ಹಾಗೆ ಅವಶ್ಯವಾಗಿ ಸತ್ಯದೆಡೆ ಮುಖ ತಿರುಗಿಸಿಕೊಂಡಿದ್ದನು. ನಾನು ಈ ಘಟನೆಯನ್ನು ಸ್ವೀಕರಿಸುತ್ತೇನೆ. ಅವನು ಭವಿಷ್ಯವಾಣಿಗಿಂತ ಮೊದಲು ಕ್ರೈಸ್ತನಾಗಿದ್ದಂತೆಯೇ ಭವಿಷ್ಯವಾಣಿಯ ಅವಧಿ ಮುಗಿದ ನಂತರವು ಕ್ರೈಸ್ತ ಮತದಲ್ಲಿದ್ದನು. ಆದರೆ ಯಾರಾದರೂ ಈ ಮಾತಿಗೆ ಸಾಕ್ಷಿ ನೀಡಬಹುದೆ. ಅವನು ಭವಿಷ್ಯವಾಣಿಯ ದಿನಗಳಲ್ಲಿ ಬರಹ ಮೂಲಕವಾಗಲಿ, ಭಾಷಣ ಮೂಲಕವಾಗಲಿ, ಕ್ರೈಸ್ತಮತದ ಪರವಾಗಿ ಉತ್ಸುಕತೆ ತೋರೆದನೆ, ಮೊದಲು ಅವನು ಉಗ್ರವಾಗಿ ಕ್ರೈಸ್ತಮತ ಪರವಾಗಿ ಉತ್ಸುಕತೆ ತೋರಿದನೇಕೆ? ಸತ್ಯ ಹೇಳಬೇಕಾದರೆ ಆ ಅವಧಿಯೆಲ್ಲ ಅವನು ಕ್ರೈಸ್ತಮತದ ವೇಷವನ್ನು ಕಳಚಿ ಯಥಾರ್ಥ ದೇವನ ಮುಂದೆ ಕಳವಳ ತೋರಿದನು. ಆ ಪೈಕಿ ಎಷ್ಟು ಸಾಕ್ಷ್ಯಗಳಿವೆ. (ಅಂಜಾಮೇ ಆಥಮ್, ರೂಹಾನಿ ಖಝಾಈನ್ ಸಂಪುಟ–11, ಪುಟ–24)

ಪರಮ ದಯವಂತನೂ ಕರುಣಾನಿಧಿಯೂ ಆದ ಅಲ್ಲಾಹನು ಆಥಮ್ ರುಜು ಮತ್ತು ಪಶ್ಚಾತ್ತಾಪ ನೋಡಿ ತನ್ನ ವಾಗ್ದಾನದನ್ವಯ ಅವನಿಗೆ ರಿಯಾಯಿತಿ ನೀಡಿದನು ಮತ್ತು ತಕ್ಷಣದ ಮರಣದಿಂದ ರಕ್ಷಿಸಿದನು. ಆದರೆ ಈಗ ಭವಿಷ್ಯವಾಣಿ ಸುಳ್ಳಾಗಿದೆ ಎಂದು ಆರೋಪಿಸುವುದು ಮತ್ತು ಆಥಮನು ಮರಣ ಹೊಂದಿಲ್ಲ ಎನ್ನುವುದು ಅತ್ಯಂತ ಅನ್ಯಾಯಕರ ಮತ್ತು ನಾಚಿಕೆಗೇಡಿನ ಆರೋಪವಾಗಿದೆ. ಕ್ರೈಸ್ತರಂತೂ ಆಕ್ಷೇಪವೆತ್ತುವುದು ಸಹಜ. ಆದರೆ ಮುಸ್ಲಿಂ ಪಂಡಿತರು ಸಹ ಈ ಆಕ್ಷೇಪಗಳಲ್ಲಿ ಶಾಮೀಲಾದರು ಮತ್ತು ಕ್ರೈಸ್ತರನ್ನು ವಿಜಯಿ, ಇಸ್ಲಾಂ ಧರ್ಮವನ್ನು ಪರಾಜಿತ ಎಂದರು. ಏಕೆಂದರೆ ಜಂಗೆ ಮುಖದ್ದಸ್ ಎಂಬ ಹೆಸರಿನಿಂದ ಪ್ರಸಿದ್ಧಗೊಂಡ ಈ ಯುದ್ಧ ಮಸೀಹ್ ಮೌಊದ್ ಮತ್ತು ಆಥಮನ ಯುದ್ಧ ಆಗಿರಲಿಲ್ಲ. ಬದಲು ಇಸ್ಲಾಂ ಮತ್ತು ಕ್ರೈಸ್ತಮತದ ಯುದ್ಧವಾಗಿತ್ತು. ಆದುದರಿಂದ ಕ್ರೈಸ್ತರಿಗಿಂತ ಮುಸಲ್ಮಾನ ಪಂಡಿತರ (ಉಲಮಾ) ಮೇಲೆ ವಿಷಾದ ಎನಿಸುತ್ತದೆ. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಶತ್ರುತ್ವದಲ್ಲಿ ಇಸ್ಲಾಂ ಧರ್ಮದ ಪರಾಜಯವನ್ನು ಅವರು ಸ್ವೀಕರಿಸಿದರು.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಗ್ರಂಥ ಅನ್ವಾರುಲ್ ಇಸ್ಲಾಂ ಮತ್ತು ಝಿಯಾಉಲ್–ಹಖ್ ನಲ್ಲಿ ನಿರಾಕರಿಸಲಾಗದಂತಹ ಪುರಾವೆಗಳೊಂದಿಗೆ ಆಥಮನು ಸತ್ಯವನ್ನು ರುಜುಪಡಿಸಿಕೊಂಡಿದ್ದನು ಎಂದು ಸಾಬೀತುಗೊಳಿಸಿದರು. ಆದುದರಿಂದಲೇ ಅವನು ಮರಣದಿಂದ ಉಳಿದನು. ಭವಿಷ್ಯವಾಣಿಯ ಸತ್ಯತೆಯನ್ನು ಸಾಬೀತುಪಡಿಸಲು ಒಂದು ಸರಳವಾದ ವಿಧಾನ, ಅವರು ಹುಡುಕಿದ್ದೇನೆಂದರೆ. ಆಥಮನು ಆಣೆವಹಿಸಿ ಹೇಳಲಿ. ನಾನು ಭವಿಷ್ಯವಾಣಿಯಿಂದ ಭಯಭೀತನಾಗಲಿಲ್ಲ. ಆಣೆವಹಿಸಿದ ನಂತರ ಅವರು ಒಂದು ವರ್ಷ ತನಕ ಉಳಿದರೆ ನಾನು ಸುಳ್ಳುಗಾರ ಹಾಗೂ ನನ್ನ ಭವಿಷ್ಯವಾಣಿ ಸುಳ್ಳು ಎಂದು. ಆದರೆ ಅವನು ಒಂದು ವರ್ಷದೊಳಗೆ ತೀರಿಹೋದರೆ ಸಾಬೀತಾಗುವುದು ಭವಿಷ್ಯವಾಣಿಯು ಸತ್ಯವಾಗಿತ್ತು ಎಂದು. ಈ ಸಲ ಒಂದು ವರ್ಷದ ಅವಧಿಯಲ್ಲಿ ಯಾವ ಶರತ್ತು ಇಲ್ಲ. ಹಝ್ರತ್ ಮಸೀಹ್ ಮೌಊದ್(ಅ) ಅದಕ್ಕಾಗಿ ಭಗಿರತ ಪ್ರಯತ್ನ ನಡೆಸಿದರು. ಆಥಮನು ಜನಸಾಮಾನ್ಯರ ಹಿತದೃಷ್ಟಿಯಿಂದ ಸತ್ಯಸಾಕ್ಷ್ಯವನ್ನು ನುಡಿಯುವಂತಾಗಲಿ ಎಂದು ಮತ್ತು ಸಾಕ್ಷ್ಯ ನೀಡಲಿ. ಅವನು ಪಶ್ಚಾತ್ತಾಪಟ್ಟು ಸತ್ಯದೆಡೆ ಹಿಂತಿರುಗಿದ್ದನು. ಇಲ್ಲವಾಗಿದ್ದಲ್ಲಿ ಆಣೆವಹಿಸಿ ಹೇಳಲಿ. ನಾನು ಇಸ್ಲಾಮಿ ಭವಿಷ್ಯವಾಣಿಯಿಂದ ಯಾವ ರೀತಿಯಲ್ಲೂ ಹೆದರಿಕೊಂಡಿಲ್ಲ ಎಂದು. ನಂತರ ಒಂದು ವರ್ಷದೊಳಗೆ ತನ್ನ ಪರಿಣಾಮ ನೋಡಿಕೊಳ್ಳಲಿ. ಆದರೆ ಭಗೀರಥ ಪ್ರಯತ್ನ, ಉಪದೇಶದ ನಂತರವೂ ಆಥಮನು ಆಣೆವಹಿಸಲಿಲ್ಲ. ಆಥಮನು ಆಣೆವಹಿಸಿಕೊಂಡರೆ ಒಂದು ಸಾವಿರ, ಎರಡು ಸಾವಿರ, ಮೂರು ಸಾವಿರ ಹಾಗೂ ನಾಲ್ಕು ಸಾವಿರ ಹೀಗೆ ಬಹುಮಾನದ ಮೊತ್ತ ಭಾರಿ ಏರಿಕೆ ಮಾಡಿ ನಿಗದಿಪಡಿಸಿದರು. ಮತ್ತು ಎಲ್ಲ ರೀತಿಯಿಂದ ಅವನ ಸ್ವಾಭಿಮಾನಕ್ಕೆ ಸವಾಲು ಒಡ್ಡಿದರು. ಅವನ ಪ್ರಭುವಾದ ಈಸ ಮಸೀಹರಿಗಾಗಿ ಆದರೂ ಆಣೆವಹಿಸಲು ಹೇಳಿದರು. ಆದರೆ ಆಥಮನು ಕಿಂಚಿತ್ತೂ ಅಲುಗಾಡಲಿಲ್ಲ. ಹಝ್ರತ್ ಮಸೀಹ್ ಮೌಊದ್(ಅ) ಸರ್ವ ರೀತಿಯಿಂದ ಕರೆ ನೀಡಬಯಸಿದರು. ಆದರೆ ಅವನು ಓಗೊಡಲಿಲ್ಲ. ಏಕೆಂದರೆ ಇಸ್ಲಾಮಿ ಭವಿಷ್ಯವಾಣಿಯ ಪ್ರಭಾವದಿಂದ ಅವನು ನಾಶಹೊಂದಿದ್ದ. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೀಗೂ ಹೇಳಿದರು. ಒಂದು ವೇಳೆ ಆಥಮನ ಪ್ರಭು ಯೇಸು ಮಸೀಹ್ ಅವನನ್ನು ಒಂದು ವರ್ಷ ತನಕ ಉಳಿಸಲು ಶಕ್ತನಲ್ಲ ಎಂದಾದರೆ ಮೂರು ದಿನಕ್ಕಾದರೂ ಅವನು ಒಪ್ಪಿಕೊಳ್ಳಲಿ. ನಾವು ಮೂರು ದಿನಗಳ ಶರತ್ತಿಗೂ ಒಪ್ಪುವೆವು. ಅಂದರೆ ಆಣೆ ವಹಿಸಿದ ಮೂರು ದಿನದೊಳಗೆ ಮರಣ ಹೊಂದಲಿಲ್ಲ ಎಂದರೆ ನಾವು ಸುಳ್ಳುಗಾರರು ಮತ್ತು ನಮ್ಮ ಭವಿಷ್ಯವಾಣಿ ಸಹ ಸುಳ್ಳು ಆದರೆ ಆಥಮನ ಶವ ಆಗಲೂ ಅಲ್ಲಾಡಲಿಲ್ಲ. ಅವರು ಹೇಳಿದರು. ಸತ್ಯ ಸಾಕ್ಷ್ಯಕ್ಕಾಗಿ ನಮಗೆ ಯಾರಾದರೂ ಹತ್ತು ವರ್ಷದ ಶರತ್ತು ಒಡ್ಡಿದರು. ನಾವು ಹತ್ತು ವರ್ಷ ತನಕ ಜೀವಿತವಿರುವ ಆಣೆವಹಿಸಿಕೊಳ್ಳಬಹುದಾಗಿದೆ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಒಂದು ಸಲ ಅಲ್ಲ. ಬದಲು ಹಲವು ಸಹ ಹೇಳಿ ಆಗಿತ್ತು ಆಥಮನ ಸತ್ಯವನ್ನು ಅಡಗಿಸಿದರೆ ಅವನಿಗೆ ದೊರೆತ ರಿಯಾಯಿತಿಯಿಂದ ಹೆಚ್ಚು ಸಮಯ ಪ್ರಯೋಜನ ಪಡೆಯಲಾರನು. ಬಹು ಬೇಗ ಸಾವು ಅವನನ್ನು ಹಿಡಿದುಕೊಳ್ಳುವುದು. ಅಂದಹಾಗೆ ಅವರ ಭವಿಷ್ಯವಾಣಿಗಳಂತೆಯೇ ಆಥಮನು ಜನರ ಮತುಗಳ ಕಡೆ ವಾಲಿಕೊಂಡಾಗ ಇನ್ನಷ್ಟು ತಲೆ ಎತ್ತರಿಸಿ ಗರ್ವ ತೋರಿಸಿದಾಗ ತಕ್ಷಣದಿಂದ ಸಾವು ಅವನನ್ನು ಹಿಡಿದುಕೊಂಡಿತು. 27 ಜುಲೈ 1896 ರಂದು ಫೇರೋಝ್‌ಪುರದಲ್ಲಿ ನಿಧನಗೊಂಡರು. ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು.

**ಆಥಮನು ಸತ್ಯವನ್ನು ಮರೆಮಾಚಿದನು. ಅಲ್ಲಾಹನು ಅವನ ಅಸ್ತಿತ್ವವನ್ನೇ ಅವನ ಸಹಧರ್ಮೀಯರ ಕಣ್ಣುಗಳಿಂದ ಮಾಯವಾಗಿಸಿದನು.**

ಪ್ರೇಕ್ಷಕರೇ ನೆನಪಿಡಿರಿ. ಆಥಮನಿಗೆ ತಲುಪಿಸಿದ ಕೊನೆಯ ಸಂದೇಶ 30 ಡಿಸೆಂಬರ್ 1895 ರಂದು ಆಗಿತ್ತು. ಅದರಲ್ಲಿ ಸ್ವಾಭಿಮಾನಕ್ಕೆ ಉತ್ತೇಜನದ

*(ಪುಟ 08 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಭಯಗೊಳ್ಳುವಂತಹ ಯಾವುದೇ ವಿಪತ್ತು ಖಲೀಫರಿಗೆ ಬಂದಿಲ್ಲ. ಹಾಗೇನಾದರೂ ಬಂದರೂ ಕೂಡ ಅಲ್ಲಾಹನು ಅದನ್ನು ನೆಮ್ಮದಿಯಾಗಿ ಬದಲಾಯಿಸುತ್ತಾನ**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಫಾರೂಖೇ ಆಝಮ್ ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಹಝ್ರತ್ ಉಮರ್(ರ)ರವರ ಶಹಾದತ್ತಿನ ಘಟನೆಯ ವಿವರಾತ್ಮಕ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **15-10-2021** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರತ್ ಉಮರರ(ರ) ಶಹಾದತಿನ ಘಟನೆ ಕಳೆದ ಖುತ್ಬದಲ್ಲಿ ಹೇಳಲಾಗಿತ್ತು. ಈ ಕುರಿತು ಹೇಳಬೇಕಾಗಿರುವ ಕೆಲವು ಹೆಚ್ಚಿನ ಸಂಗತಿಗಳಿವೆ. ಸಹೀಹ್ ಬುಖಾರಿಯಲ್ಲಿ ವಿವರಿಸಲಾದ ವರದಿಯಿಂದ ಗೊತ್ತಾಗುವುದೇನೆಂದರೆ, ಹಝ್ರತ್ ಉಮರ್(ರ) ಮೇಲೆ ಹಲ್ಲೆ ನಡೆಸಲಾದಾಗ ನಿರ್ವಹಿಸಲಾಗುತ್ತಿದ್ದ ಫಜ್ರ್ ನಮಾಝನ್ನು ಪೂರ್ತಿ ಮಾಡಲಾಯಿತು ಮತ್ತು ಆ ಸಮಯದಲ್ಲಿ ಹಝ್ರತ್ ಉಮರ್(ರ) ಮಸೀದಿಯಲ್ಲೇ ಇದ್ದರು. ಆದರೆ ಕೆಲವು ವರದಿಗಳ ಪ್ರಕಾರ ಹಝ್ರತ್ ಉಮರ್‌ರನ್ನು(ರ) ಬೇಗನೇ ಮನೆಗೆ ಕೊಂಡುಹೋಗಲಾಯಿತು ಮತ್ತು ನಮಾಝನ್ನು ನಂತರ ಪೂರ್ತಿ ಮಾಡಲಾಯಿತು. ಸಹೀಹ್ ಬುಖಾರಿಯ ವ್ಯಾಖ್ಯಾನಗಾರ ಅಲ್ಲಾಮ ಇಬ್ನು ಹಜರ್‌ರವರು ಬುಖಾರಿಯ ವರದಿಯ ಕೆಳಗೆ ಮತ್ತೊಂದು ವರದಿಯನ್ನು ನಕಲು ಮಾಡುತ್ತಾ ಬರೆಯುತ್ತಾರೆ: ಹಝ್ರತ್ ಇಬ್ನು ಅಬ್ಬಾಸ್(ರ) ಹೇಳುತ್ತಾರೆ: ಹಝ್ರತ್ ಉಮರರ(ರ) ದೇಹದಿಂದ ರಕ್ತ ಬಹಳವಾಗಿ ಸುರಿಯಲು ತೊಡಗಿದ ನಂತರ ಅವರು ಪ್ರಜ್ಞಾಹೀನರಾದರು. ನಾನು ಅವರನ್ನು ಜನರ ಸಹಾಯದಿಂದ ಎತ್ತಿ ಮನೆಗೆ ತಲುಪಿಸಿದೆ. ಸೂರ್ಯೋದಯವಾಗುವ ವರೆಗೂ ಅವರು ಪ್ರಜ್ಞಾಹೀನರಾಗಿದ್ದರು. ಅವರಿಗೆ ಪ್ರಜ್ಞೆ ಬಂದಾಗ ಅವರು ಕೇಳಿದರು: ಜನರು ನಮಾಝ್ ನಿರ್ವಹಿಸಿದರೇ? ಹೌದೆಂದು ನಾನು ಹೇಳಿದೆ. ಆಗ ಅವರು ಹೇಳಿದರು: ನಮಾಝನ್ನು ಉಪೇಕ್ಷಿಸುವವನ ಒಳಗೆ ಇಸ್ಲಾಂ ಇಲ್ಲ. ಅನಂತರ ಅವರು ವುಝೂ ಮಾಡಿ ನಮಾಝ್ ನಿರ್ವಹಿಸಿದರು. (ಫತ್‌ಹಲ್ ಬಾರಿ, ಸಂಪುಟ-7, ಪುಟ-64, ಶರಹ್ ಹದೀಸ್ ಸಂಖ್ಯೆ-3700, ದಾರುಲ್ ಮಾರಿಫ ಬೈರೂತ್) (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ-3, ಪುಟ-263, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಇದಲ್ಲದೇ ತಬ್‌ಕಾತುಲ್ ಖುಬ್ರದಲ್ಲೂ ಹೀಗೆ ಬರೆಯಲಾಗಿದೆ: ಹಝ್ರತ್ ಉಮರರನ್ನು ಎತ್ತಿ ಮನೆಗೆ ತಲುಪಿಸಲಾಯಿತು ಮತ್ತು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ನಮಾಝಿಗೆ ಇಮಾಮತ್ ವಹಿಸಿದರು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಪವಿತ್ರ ಖುರ್‌ಆನಿನ ಸಣ್ಣ ಅಧ್ಯಾಯಗಳಾದ ಸೂರತುಲ್ ಅಸ್ರ್ ಮತ್ತು ಸೂರತುಲ್ ಕೌಸರ್ ಓದಿದರು ಎಂದೂ ವರದಿಯಿದೆ. ಮತ್ತೊಂದೆಡೆ ಸೂರತುಲ್ ಅಸ್ರ್ ಮತ್ತು ಸೂರತುಲ್ ಕಾಫಿರೂನ್ ಓದಿದ್ದಾಗಿ ಪ್ರಸ್ತಾಪಿಸಲಾಗಿದೆ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ-3, ಪುಟ-266, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ಉಮರ್‌ರ(ರ) ಕೊಲೆಗಾರನ ಬಗ್ಗೆ ಪ್ರಸ್ತಾಪಿಸುತ್ತಾ ತಬ್ಖಾತುಲ್ ಕುಬ್ರದಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಉಮರ್‌ರ(ರ) ಮೇಲೆ ಹಲ್ಲೆ ನಡೆದಾಗ ಅವರು ಹಝ್ರತ್ ಅಬ್ದುಲ್ಲಾಹ್ ಬಿನ್ ಅಬ್ಬಾಸ್‌ರೊಡನೆ ಹೇಳಿದರು: ಹೋಗು, ಯಾರು ನನ್ನನ್ನು ಕೊಲ್ಲಲು ಶ್ರಮಿಸಿದ್ದನು ಎಂದು ಪತ್ತೆಹಚ್ಚು. ಹಝ್ರತ್ ಅಬ್ದುಲ್ಲಾಹ್ ಬಿನ್ ಅಬ್ಬಾಸ್(ರ) ಹೇಳುತ್ತಾರೆ: ನಾನು ಹೊರಟು ಮನೆಯ ಬಾಗಿಲನ್ನು ತೆರೆದೆ. ಹೊರಗೆ ಜನರು ಒಟ್ಟು ಸೇರಿದ್ದರು. ಅವರಿಗೆ ಹಝ್ರತ್ ಉಮರರ(ರ) ಸ್ಥಿತಿಯ ಬಗ್ಗೆ ಅರಿವಿರಲಿಲ್ಲ. ಹಝ್ರತ್ ಅಮೀರುಲ್ ಮೂಮಿನೀನ್‌ರನ್ನು ಚೂರಿಯಿಂದ ಹಲ್ಲೆ ನಡೆಸಿದ್ದು ಯಾರೆಂದು ನಾನು ಕೇಳಿದೆ. ಅವರು ಹೇಳಿದರು: ಅಲ್ಲಾಹನ ಶತ್ರು ಅಬುಲ್ ಲುಅ್‌ಲು ಹಲ್ಲೆ ನಡೆಸಿದ್ದನು. ಅವನು ಮುಗ್ಶೈರ ಬಿನ್ ಶೂಬನ ಗುಲಾಮನಾಗಿರುವನು. ಅವನು ಬೇರೆ ಜನರನ್ನು ಕೂಡ ಗಾಯಾಳುಗೊಳಿಸಿದನು. ಅವನನ್ನು ಹಿಡಿಯಲಾದಾಗ ಅವನು ಅದೇ ಚೂರಿಯಿಂದ ಆತ್ಮಹತ್ಯೆ ಮಾಡಿದನು. (ಅತ್ತಬಖಾತುಲ್ ಕುಬ್ರ, ಸಂಪುಟ-3, ಪುಟ-263, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರತ್ ಉಮರರ(ರ) ಕೊಲೆಯ ಹಿಂದೆ ಷಡ್ಯಂತ್ರವಿತ್ತೋ ಅಥವಾ ಆ ವ್ಯಕ್ತಿಗೆ ಇದ್ದ ವೈಯಕ್ತಿಕ ಶತ್ರುತ್ವವಾಗಿತ್ತೋ ಎಂಬುದರ ಬಗ್ಗೆ ನಂತರದ ಚರಿತ್ರೆಗಾರರು ಹೀಗೆ ಬರೆದಿರುವರು: ಹಝ್ರತ್ ಉಮರರ(ರ) ಶಹಾದತ್ ಯಾವುದೇ ವ್ಯಯಕ್ತಿಕ ಹಗೆಯ ಕಾರಣದಿಂದ ಮಾತ್ರವಾಗಿರಲಿಲ್ಲ. ಬದಲಾಗಿ ಇದು ಒಳಸಂಚಾಗಿತ್ತು. ಹೇಗಿದ್ದರೂ ನಾವು ಅವರ ಅಭಿಪ್ರಾಯಗಳನ್ನು ಸಹ ನೋಡೋಣ. ಹಝ್ರತ್ ಉಮರ್‌ರಂತಹ ಧೈರ್ಯಶಾಲಿ ಖಲೀಫರನ್ನು ಶಹೀದ್ ಮಾಡಿದ ಘಟನೆಯ ಬಗ್ಗೆ ಚರಿತ್ರೆಗಾರರು ಜೀವನಚರಿತ್ರೆ ಬರೆಯುವವರು ವಿಶದವಾಗಿ ಬರೆದ ನಂತರ ಸುಮ್ಮನಾಗುತ್ತಾರೆ. ಅಬುಲೂಲು ತನ್ನ ತಾತ್ಕಾಲಿಕ ಆವೇಶ ಮತ್ತು ಕೋಪದ ಕಾರಣದಿಂದ ಹಝ್ರತ್ ಉಮರ್‌ರನ್ನು(ರ) ಶಹೀದ್ ಮಾಡಿದ್ದರು ಎಂದು ಭಾಸವಾಗುತ್ತದೆ. ಆದರೆ ಈಗಿನ ಚರಿತ್ರೆಗಾರರು ಮತ್ತು ಜೀವನಚರಿತ್ರೆ ಬರೆಯುವವರು ಈ ಬಗ್ಗೆ ವಿಶದವಾಗಿ ಚರ್ಚೆ ನಡೆಸುತ್ತಾ ಹೇಳುವುದೇನೆಂದರೆ, ಇದು ಒಬ್ಬ ವ್ಯಕ್ತಿಗೆ ಇದ್ದ ಕೋಪದ ಕಾರಣದಿಂದ ಉಂಟಾದ ಪ್ರತಿಕಾರ ಕಾರ್ಯಚರಣೆ ಆಗಿರಲಿಕ್ಕೆ ಸಾಧ್ಯವಿಲ್ಲ. ಬದಲಾಗಿ ಇದು ಒಂದು ಸಂಚಾಗಿತ್ತು ಮತ್ತು ಮೊದಲೇ ಸರಿಯಾಗಿ ತೀರ್ಮಾನಸಲಾದ ಯೋಜನೆಯ ಪ್ರಕಾರ ಹಝ್ರತ್ ಉಮರ್‌ರನ್ನು(ರ) ಕೊಲೆ ಮಾಡಲಾಗಿತ್ತು. ಈ ಷಡ್ಯಂತ್ರದಲ್ಲಿ ಬಾಹ್ಯವಾಗಿ ಮುಸ್ಲಿಮನಾಗಿ ಮದೀನದಲ್ಲಿ ನೆಲೆಸಿದ್ದ ಪ್ರಸಿದ್ಧ ಇರಾನಿ ಸೇನಾಧಿಪತಿಯಾದ ಹರ್‌ಮಝಾನ್ ಇದ್ದಾನೆ ಎಂದು ಅವರು ಅಭಿಪ್ರಾಯ ಪಡುತ್ತಾರೆ. ಈ ಕೊಲೆ ಒಳಸಂಚಾಗಿತ್ತೇ ಎಂಬುದರ ಬಗ್ಗೆ ಹಿಂದಿನ ಚರಿತ್ರೆಗಾರರು ಏಕೆ ವಿಶದವಾಗಿ ಚರ್ಚಿಸಲಿಲ್ಲವೆಂದು ಈಗಿನ ಚರಿತ್ರೆಗಾರರು ಅವರ ಬಗ್ಗೆ ದೂರುತ್ತಾರೆ.

ಜೀವನಚರಿತ್ರೆ ಮತ್ತು ಚರಿತ್ರೆಯ ಮುಖ್ಯ ಗ್ರಂಥವಾದ ಕಿತಾಬುಲ್ ಬದಾಯ ವ ನಿಹಾಯದಲ್ಲಿ ಕೇವಲ ಹೀಗೆ ಬರೆಯಲಾಗಿದೆ: ಹಝ್ರತ್ ಉಮರ್‌ರ(ರ) ಕೊಲೆಯಲ್ಲಿ ಹರ್‌ಮಝಾನ್ ಮತ್ತು ಜಫೀನನ ಕೈವಾಡವಿತ್ತು ಎಂದು ಸಂಶಯಿಸಲಾಗುತ್ತದೆ. (ಅಲ್‌ಬಿದಾಯ ವನ್ನಹಾಯ, ಸಂಪುಟ-4, ಪುಟ-144, ದಾರುಲ್ ಕುತುಬ್ ಇಲ್‌ಮಿಯ) ಇದೇ ಸಂಶಯದ ಆಧಾರದಲ್ಲಿ ಹಝ್ರತ್ ಉಮರ್‌ರ(ರ) ಜೀವನಚರಿತ್ರೆ ಬರೆದವರು ವಿಶದವಾಗಿ ಚರ್ಚಿಸುವಾಗ ಈ ಕೊಲೆಯನ್ನು ಒಂದು ಸಂಚೆಂದು ಹೇಳುತ್ತಾರೆ.

ಈ ಚರಿತ್ರೆಗಾರರಲ್ಲಿ ಒಬ್ಬರಾದ ಮುಹಮ್ಮದ್ ರಝಾ ಸಾಹಿಬ್ ತನ್ನ ಪುಸ್ತಕವಾದ ಸೀರತ್ ಉಮರ್ ಫಾರೂಖ್‌ನಲ್ಲಿ ಬರೆಯುತ್ತಾರೆ: ಪ್ರೌಢ ವಯಸ್ಸಿಗೆ ತಲುಪಿದ ಯಾವನೇ ಕೈದಿಯನ್ನು ಮದೀನಕ್ಕೆ ಪ್ರವೇಶಿಸಲು ಹಝ್ರತ್ ಉಮರ್(ರ) ಅನುಮತಿ ಕೊಡುತ್ತಿರಲಿಲ್ಲ. ಆದರೆ ಹಝ್ರತ್ ಮುಗ್ಶೈರ ಬಿನ್ ಶೂಬ ಹಝ್ರತ್ ಉಮರ್‌ರಿಗೆ ಹೀಗೆ ಪತ್ರ ಬರೆದರು: ಅವರ ಬಳಿ ಒಬ್ಬ ಗುಲಾಮನಿದ್ದಾನೆ. ಅವನು ಬಹಳ ನಿಪುಣನು. ಅವನಿಗೆ ಅನುಮತಿ ಕೊಡಿರಿ. ಅವನು ಅನೇಕ ಕೆಲಸಗಳನ್ನು ಬಲ್ಲನು, ಜನರಿಗೆ ಅವನಿಂದ ಪ್ರಯೋಜನವಾಗುವುದು, ಅವನೊಬ್ಬ ನಿಪುಣ ಕಮ್ಮಾರ, ಶಿಲ್ಪಿ

ಮತ್ತು ಬಡಗಿಯಾಗಿರುವನು. ಹಝ್ರತ್ ಉಮರ್(ರ) ಆ ಗುಲಾಮನಿಗೆ ಮದೀನ ಬರಲು ಅನುಮತಿ ಕೊಡುತ್ತಾ ಮುಗೈರನಿಗೆ ಪತ್ರ ಬರೆದರು. ಹಝ್ರತ್ ಉಮರ್(ರ) ಅವನಿಗೆ ಮಾಸಿಕ ನೂರು ದಿರ್ಹಂ ಟೇಕ್ಸ್ ನಿಶ್ಚಯಿಸಿದರು. ಅವನು ಹಝ್ರತ್ ಉಮರರ(ರ) ಸನ್ನಿಧಿಯಲ್ಲಿ ಹಾಜರಾದನು. ಪಾವತಿ ಮಾಡಬೇಕಾದ ತೆರಿಗೆ ಹೆಚ್ಚೆಂದು ದೂರಿದನು. ಹಝ್ರತ್ ಉಮರ್(ರ) ಕೇಳಿದರು: ನೀನು ಯಾವ ಕೆಲಸ ಉತ್ತಮವಾಗಿ ಮಾಡುತ್ತೀ? ಅವನಿಗೆ ಹೆಚ್ಚು ನೈಪುಣ್ಯವಿದ್ದ ಕೆಲಸದ ಬಗ್ಗೆ ಅವನು ಹೇಳಿದನು. ಹಝ್ರತ್ ಉಮರ್(ರ) ಹೇಳಿದರು: ನಿನಗೆ ಕೆಲಸದಲ್ಲಿ ಇರುವ ನೈಪುಣ್ಯದ ಪ್ರಕಾರ ನೀನು ಪಾವತಿ ಮಾಡಬೇಕಾದ ಕಂದಾಯ ಹೆಚ್ಚೇನಲ್ಲ. ಅವನು ನಿರಾಶೆಗೊಂಡು ಮರಳಿ ಹೋದನು. ಹಝ್ರತ್ ಉಮರ್(ರ) ಸ್ವಲ್ಪ ಸುಮ್ಮನಿದ್ದರು. ಒಂದು ದಿನ ಆ ಗುಲಾಮನು ಹಝ್ರತ್ ಉಮರ್‌ರ(ರ) ಸಮೀಪದಿಂದ ಹೋಗುತ್ತಿದ್ದಾಗ ಅವರು ಅವನನ್ನು ಕರೆದು ಹೀಗೆ ಕೇಳಿದರು: ನೀನು ಬೀಸುಕಲ್ಲನ್ನು ಉತ್ತಮವಾಗಿ ತಯಾರುಮಾಡುತ್ತೀ ಎಂದು ನನಗೆ ಮಾಹಿತಿ ಲಭಿಸಿದೆ. ಆ ಗುಲಾಮನು ಕೋಪದಿಂದ ಮತ್ತು ಅನಿಷ್ಟತೆಯಿಂದ ಹಝ್ರತ್ ಉಮರರ ಕಡೆಗೆ ನೋಡುತ್ತಾ ಹೀಗೆ ಹೇಳಿದನು: ನಾನು ನಿಮಗೊಂದು ಬೀಸುಗಲ್ಲನ್ನು ತಯಾರುಮಾಡುವನು. ಅದರ ಬಗ್ಗೆ ಜನರು ಸದಾ ಚರ್ಚಿಸುತ್ತಿರುವರು. ಆ ಗುಲಾಮನು ಹಿಂತಿರುಗಿದಾಗ ಹಝ್ರತ್ ಉಮರ್(ರ) ಹೇಳಿದರು: ಈ ಗುಲಾಮನು ನನಗೆ ಈಗಷ್ಟೆ ಬೆದರಿಕೆ ಹಾಕಿದ್ದಾನೆ. ಕೆಲವು ದಿನಗಳು ಕಳೆದುವು. ಅಬುಲೂಲು ತನ್ನ ಹೊದಿಕೆಯಲ್ಲಿ ಇರುಭಾಗಗಳು ಚೂಪಾದ ಕತ್ತಿಯನ್ನು ಅಡಗಿಸಿದ್ದನು. ಅದರ ಹಿಡಿ ಅದರ ಮಧ್ಯದಲ್ಲಾಗಿತ್ತು. ಶಹಾದತಿನ ಘಟನೆಯಲ್ಲಿ ವಿವರಿಸಿದ ರೀತಿಯಲ್ಲಿ ಅವನು ಹಝ್ರತ್ ಉಮರ್‌ರ(ರ) ಮೇಲೆ ಹಲ್ಲೆ ನಡೆಸಿದನು. ಅದರ ಒಂದು ಏಟು ಹೊಕ್ಕಳಿನ ಕೆಳಗೆ ತಗುಲಿತ್ತು. ಅಬುಲೂಲಿನಿಗೆ ಹಝ್ರತ್ ಉಮರ್‌ರೊಂದಿಗೆ ಒಂದು ಅರ್ಥದಲ್ಲಿ ಮೊದಲೇ ಹಗೆ ಮತ್ತು ದ್ವೇಷವಿತ್ತು. ಏಕೆಂದರೆ, ಅರೇಬಿಯರು ಅವನ ಪ್ರದೇಶವನ್ನು ಜಯಿಸಿದ್ದರು ಮತ್ತು ಅವನನ್ನು ಬಂಧಿಸಿದ್ದರು. ಅಲ್ಲಿಯ ಅರಸನಿಗೆ ನಿಂದಿತನಾಗಿ ದೇಶ ಬಿಟ್ಟು ಹೋಗಬೇಕಾಯಿತು. ಅವನು ಕೈದಿಯಾದ ಕಿರಿ ವಯಸ್ಸಿನ ಬಾಲಕರನ್ನು ಕಾಣುವಾಗ, ಅವರ ಬಳಿಗೆ ಹೋಗಿ ಅವರ ತಲೆಯನ್ನು ಕೈಯಿಂದ ಸವರುತ್ತಾ ಹೀಗೆ ಹೇಳುತ್ತಿದ್ದನು: ಅರೇಬಿಯರು ನನ್ನ ಪ್ರಿಯಕಂದನನ್ನು ತಿಂದು ಬಿಟ್ಟರು. ಹಝ್ರತ್ ಉಮರ್‌ರನ್ನು(ರ) ಕೊಲ್ಲಲು ಅಬುಲೂಲು ದೃಢನಿಶ್ಚಯ ಮಾಡಿದಾಗ ಅವನು ಇರುಭಾಗಗಳು ಚೂಪಾದ ಚೂರಿಯನ್ನು ತಯಾರು ಮಾಡಿದನು. ಅದನ್ನು ಚೂಪುಗೊಳಿಸಿದನು ಮತ್ತು ಅದನ್ನು ವಿಷಪೂರಿತಗೊಳಿಸಿದನು. ಅದನ್ನು ತೆಗೆದುಕೊಂಡು ಹರ್ಮಾಝಾನಿನ ಬಳಿಗೆ ಬಂದು ಹೀಗೆ ಕೇಳಿದನು: ಈ ಚೂರಿಯ ಬಗ್ಗೆ ನಿನ್ನ ಅಭಿಪ್ರಾಯವೇನು? ಅವನು ಹೇಳಿದನು: ಇದರಿಂದ ಯಾರ ಮೇಲೆ ಹಲ್ಲೆ ನಡೆಸಿದರೂ ಅವನು ಸತ್ತುಬಿಡುವನು ಎಂದಾಗಿದೆ ನನ್ನ ಅನಿಸಿಕೆ. ಹರ್ಮಾಝಾನ್ ಇರಾನಿಯರ ಸೇನಾಧಿಪತಿಯರಲ್ಲಿ ಒಬ್ಬನಾಗಿದ್ದನು. ಮುಸ್ಲಿಮರು ಅವನನ್ನು ತುಸ್ತರ್ ಎಂಬ ಪ್ರದೇಶದಲ್ಲಿ ಕೈದಿ ಮಾಡಿದ್ದರು ಮತ್ತು ಅವನನ್ನು ಮದೀನಕ್ಕೆ ಕಳುಹಿಸಿದರು. ಅವನು ಹಝ್ರತ್ ಉಮರ್‌ರನ್ನು ನೋಡಿದಾಗ, ಅವರ ಕಾವಲುಗಾರರು ಎಲ್ಲಿ ಎಂದು ಅವನು ಕೇಳಿದನು. ಹಝ್ರತ್ ಉಮರ್‌ರಿಗೆ(ರ) ಯಾವನೇ ಕಾವಲುಗಾರನಿಲ್ಲವೆಂದು ಸಹಾಬರು ಹೇಳಿದರು. ಹಾಗಾದರೆ, ಇವರು ನಬಿಯಾಗಿರಬೇಕು ಎಂದು ಹರ್ಮಾಝಾನ್ ಹೇಳಿದನು. ಹೇಗಿದ್ದರೂ ಅವನು ಮುಸ್ಲಿಮನಾದನು ಮತ್ತು ಹಝ್ರತ್ ಉಮರ್(ರ) ಅವನಿಗಾಗಿ ಎರಡು ಸಾವಿರ ದಿರ್ಹಂ ನಿಶ್ಚಯಿಸಿದರು. ಅವನನ್ನು ಮದೀನದಲ್ಲಿ ನೆಲೆಸುವಂತೆ ಮಾಡಿದರು.

ತಬ್ಕಾತ್ ಇಬ್ನು ಸಅದಿನಲ್ಲಿ ನಾಫಿಅ್‌ರ ಮುಖಾಂತರ ಬಂದ ಒಂದು ವರದಿಯಿದೆ: ಹಝ್ರತ್ ಉಮರ್‌ರನ್ನು(ರ) ಶಹೀದ್ ಮಾಡಲಾದ ಚೂರಿಯನ್ನು ಹಝ್ರತ್ ಅಬ್ದುರ್ರಹ್ಮಾನ್  ನೋಡಿದರು. ಅವರು ಹೇಳಿದರು: ನಾನು ನಿನ್ನೆ ಈ ಚೂರಿಯನ್ನು ಹರ್ಮಾಝಾನ್ ಮತ್ತು ಜುಫೈನನ ನನ್ನ ಬಳಿ ನೋಡಿದ್ದೆ. ಚೂರಿಯಿಂದ ಏನು ಮಾಡುತ್ತೀಯ ಎಂದು ನಾನು ಅವರೊಡನೆ ಕೇಳಿದೆ: ಅವರಿಬ್ಬರೂ ಹೇಳಿದರು: ನಾವು ಇದರ ಮೂಲಕ ಮಾಂಸವನ್ನು ತುಂಡು ಮಾಡುತ್ತೇವೆ. ಏಕೆಂದರೆ, ನಾವು ಮಾಂಸವನ್ನು ಕೈಯಿಂದ ಮುಟ್ಟುವುದಿಲ್ಲ. ಆಗ ಹಝ್ರತ್ ಉಬೈದುಲ್ಲಾಹ್ ಬಿನ್ ಉಮರ್ ಹಝ್ರತ್ ಉಬೈದುಲ್ಲಾಹ್‌ರೊಡನೆ ಕೇಳಿದರು: ನೀವು ಈ ಚೂರಿಯನ್ನು ಅವರಿಬ್ಬರ ಬಳಿಯೂ ನೋಡಿದ್ದೀರಾ? ಹೌದೆಂದು ಅವರು ಹೇಳಿದರು. ಹಝ್ರತ್ ಉಬೈದುಲ್ಲಾಹ್ ಬಿನ್ ಉಮರ್(ರ) ತನ್ನ ಖಡ್ಗವನ್ನು ಹಿಡಿದು ಅವರಿಬ್ಬರ ಬಳಿಗೆ ಹೋಗಿ ಅವರನ್ನು ಕೊಂದುಹಾಕಿದರು. ಹಝ್ರತ್ ಉಬೈದುಲ್ಲಾಹ್‌ರನ್ನು ಹಝ್ರತ್ ಉಸ್ಮಾನ್(ರ) ಕರೆಸಿದರು. ಅವರು ಹಝ್ರತ್ ಉಸ್ಮಾನ್‌ರ ಬಳಿಗೆ ಬಂದರು. ಅವರಿಬ್ಬರನ್ನೂ ಕೊಲ್ಲಲು ನಿನ್ನನ್ನು ಏನು ಪ್ರೇರೇಪಿಸಿತ್ತು. ಅವರಿಬ್ಬರೂ ನಮ್ಮ ಅಭಯದಲ್ಲಿದ್ದರು. ಇದನ್ನು ಕೇಳಿದ ಕೂಡಲೇ ಹಝ್ರತ್ ಉಬೈದುಲ್ಲಾಹ್ ಹಝ್ರತ್ ಉಸ್ಮಾನ್‌ರನ್ನು ಹಿಡಿದು ನೆಲಕ್ಕೆ ಹಾಕಿದರು. ಕೊನೆಗೆ ಹಝ್ರತ್ ಉಸ್ಮಾನ್‌ರನ್ನು ಹಝ್ರತ್ ಉಬೈದುಲ್ಲಾಹ್‌ರಿಂದ ಜನರು ರಕ್ಷಿಸಿದರು. ಅವರನ್ನು ಹಝ್ರತ್ ಉಸ್ಮಾನ್(ರ) ಕರೆದಾಗ ಅವರು ತನ್ನ ಸೊಂಟದಲ್ಲಿ ಖಡ್ಗವನ್ನು ಇಟ್ಟಿದ್ದರು. ಆದರೆ ಅದನ್ನು ಜೊತೆಗೆ ಕೊಂಡುಹೋಗದಿರಲು ಹಝ್ರತ್ ಅಬ್ದುರ್ರಹ್ಮಾನ್(ರ) ಶಕ್ತವಾಗಿ ತಾಕೀತು ಮಾಡಿದರು. ಆದ್ದರಿಂದ ಅವರು ಅದನ್ನು ಕಳಚಿ ಹೋಗಿದ್ದರು. ಇದು ಎಷ್ಟರ ಮಟ್ಟಿಗೆ ಸರಿಯೆಂದು ಅಲ್ಲಾಹನೇ ಸರಿಯಾಗಿ ಬಲ್ಲನು.

ಆದರೆ ಹೇಗಿದ್ದರೂ ಕೊಲೆಯ ಘಟನೆ ಬೇರೆಡೆ ಸಹ ವರದಿಯಾಗಿದೆ. ಸಈದ್ ಬಿನ್ ಮುಸಯ್ಯಬ್‌ರಿಂದ ಒಂದು ವರದಿಯಿದೆ. ಹಝ್ರತ್ ಉಮರ್(ರ) ಶಹೀದ್ ಆದಾಗ ಅಬ್ದುರ್ರಹ್ಮಾನ್ ಬಿನ್ ಅಬೂಬಕರ್(ರ) ಹೇಳಿದರು: ನಾನು ಹಝ್ರತ್ ಉಮರಿನ ಹಂತಕನಾದ ಅಬೂಲುಅ್‌ಲುವಿನ ಬಳಿಗೆ ಹೋಗಿದ್ದೆ. ಆಗ ಜುಫೈನ ಮತ್ತು ಹರ್ಮಾಝಾನ್ ಸಹ ಅವನೊಂದಿಗೆ ಇದ್ದರು. ಅವರು ರಹಸ್ಯವಾಗಿ ಮಾತನಾಡುತ್ತಿದ್ದರು. ನಾನು ಅಚಾನಕ್ಕಾಗಿ ಅವರ ಸಮೀಪದಿಂದ ಹೋದಾಗ ಅವರು ಪರಾರಿಯಾದರು. ಅವರ ನಡುವೆ ಒಂದು ಚೂರಿ ಬಿತ್ತು. ಅದಕ್ಕೆ ಇರುಭಾಗವಿತ್ತು. ಅದರ ಹಿಡಿ ಮಧ್ಯದಲ್ಲಾಗಿತ್ತು. ಹಝ್ರತ್ ಉಮರ್‌ರನ್ನು ಶಹೀದ್ ಮಾಡಲಾದ ಚೂರಿ ಹೇಗಿತ್ತು ಎಂದು ನೋಡಿರಿ. ಆ ಚೂರಿಯನ್ನು ನೋಡಿದಾಗ ಅದು ಅಬ್ದುರ್ರಹ್ಮಾನ್ ಬಿನ್ ಅಬೂಬಕರ್(ರ) ವಿವರಿಸಿದ ರೀತಿಯಲ್ಲೇ ಇತ್ತು.

ಇದನ್ನು ಹಝ್ರತ್ ಉಬೈದುಲ್ಲಾಹ್ ಬಿನ್ ಉಮರ್ ಕೇಳಿದಾಗ ಅವರು ತನ್ನ ಖಡ್ಗವನ್ನು ಹಿಡಿದು ಹೊರಟರು. ಹರ್ಮಾಝಾನನ್ನು ಕೂಗಿ ಕರೆದರು. ಹರ್ಮಾಝಾನ್ ಅವರ ಬಳಿಗೆ ಬಂದಾಗ ಅವರೊಡನೆ ಹೀಗೆ ಹೇಳಿದರು: ಕುದುರೆಯನ್ನು ನೋಡಲು ಹೋಗುವ. ಸ್ವತಃ ಸ್ವಲ್ಪ ಹಿಂದೆ ನಿಂತರು. ಹರ್ಮಾಝಾನ್ ಮುಂದೆ ನಡೆಯಲು ಶುರುಮಾಡಿದಾಗ ಅವನ ಮೇಲೆ ಖಡ್ಗದಿಂದ ಹಲ್ಲೆ ನಡೆಸಿದರು. ಹಝ್ರತ್ ಉಬೈದುಲ್ಲಾಹ್ ಬಿನ್ ಉಮರ್(ರ) ಹೇಳುತ್ತಾರೆ: ಅವನು ಖಡ್ಗದ ಹಲ್ಲೆಯನ್ನು ಅನುಭವಿಸಿದಾಗ ಅವನು ಲಾ ಇಲಾಹ ಇಲ್ಲಲ್ಲಾಹ್ ಎಂದು ಉಚ್ಚರಿಸಿದನು. ಹಝ್ರತ್ ಉಬೈದುಲ್ಲಾಹ್ ಹೇಳುತ್ತಾರೆ: ನಾನು ಜುಫೈನನ್ನು ಕರೆದೆ. ಅವನು ಹೀರಾದ ಕ್ರೈಸ್ತರಲ್ಲಿ ಒಬ್ಬ ಕ್ರೈಸ್ತನಾಗಿದ್ದನು. ಅವನು ಸಅದ್ ಬಿನ್ ಅಬೀವಖಾಸ್‌ನ ಸಹಾಯಕನಾಗಿದ್ದನು. ಜುಫೈನನ ಮೇಲೆ ಖಡ್ಗ ಚಲಾಯಿಸಿದಾಗ ಅವನು ತನ್ನ ಕಣ್ಣುಗಳ ಮುಂದೆ ಶಿಲುಬೆಯ ರೂಪದಲ್ಲಿ ಸಂಕೇತ ಮಾಡಿದನು. ಹಝ್ರತ್ ಉಬೈದುಲ್ಲಾಹ್ ಮುಂದಕ್ಕೆ ಧಾವಿಸಿ ಅಬುಲುಅ್‌ಲಿನ ಮಗಳನ್ನೂ ಕೊಂದುಹಾಕಿದರು. ಅವಳು ತಾನು ಮುಸ್ಲಿಮಳೆಂದು ಹೇಳುತ್ತಿದ್ದಳು. ಮದೀನದಲ್ಲಿ ಯಾವನೇ ಕೈದಿಯನ್ನು ಜೀವಂತವಾಗಿ ಬಿಡುವುದಿಲ್ಲ ಎಂದು ಹಝ್ರತ್ ಉಬೈದುಲ್ಲಾಹ್ ನಿರ್ಧರಿಸಿದರು. ಮುಹಾಜಿರರು ಅವರ ವಿರುದ್ಧ ಒಟ್ಟುಗೂಡಿದರು. ಅವರನ್ನು ಇದರಿಂದ ತಡೆದರು. ಅವರನ್ನು ಬೆದರಿಸಿದರು. ಆದರೆ ಉಬೈದುಲ್ಲಾಹ್ ಹೇಳಿದರು: ಅಲ್ಲಾಹನಾಣೆ ನಾನು ಅವರನ್ನು ಖಂಡಿತ ಕೊಲ್ಲುವೆನು. ಮುಹಾಜಿರರ ಮಾತಿಗೆ ಬೆಲೆ ಕೊಡಲಿಲ್ಲ. ಕೊನೆಗೆ ಹಝ್ರತ್ ಉಮರ್ ಬಿನ್ ಆಸ್(ರ) ಅವರೊಡನೆ ಚರ್ಚಿಸುತ್ತಾ ಹೋದರು. ಕೊನೆಗೆ ಅವರು ತನ್ನ ಖಡ್ಗವನ್ನು ಹಝ್ರತ್ ಉಮರ್ ಬಿನ್ ಆಸ್‌ರಿಗೆ ಒಪ್ಪಿಸಿದರು. ತದನಂತರ ಹಝ್ರತ್ ಸಅದ್ ಬಿನ್ ಅಬಿ ವಖ್ವಾಸ್(ರ) ಅವರ ಬಳಿಗೆ ಬಂದರು ಆಗ ಅವರಿಬ್ಬರು ಒಬ್ಬರನ್ನೊಬ್ಬರ ಹಣೆಯ ಕೂದಲುಗಳನ್ನು ಹಿಡಿದುಕೊಂಡರು. ಹೀಗೆ ಅವರು ಹುರ್‌ಮುಝಾನ್, ಜುಫೈನ, ಮತ್ತು ಅಬು ಲುಲೂನ ಪುತ್ರಿಯನ್ನು ವಧಿಸಿದರು.

ಹಝ್ರತ್ ಉಮರರ ಕೊಲೆ ಒಂದು ಸಂಚಾಗಿತ್ತು ಎಂದು ಹೇಳುವವರು ಬರೆಯುತ್ತಾರೆ: ಹಝ್ರತ್ ಉಮರ್‌ರನ್ನು ಕೊಲ್ಲಲು ಅಬೂಲೂಲುವನ್ನು ಪ್ರೇರೇಪಿಸಲಾಗಿತ್ತು ಎಂಬ ಎಲ್ಲ ಸಂಗತಿಗಳು ಈಗ ಈ ಚರ್ಚೆಯಲ್ಲಿ ಬಂದಿವೆ. ಹಝ್ರತ್ ಉಮರರ ಕೊಲೆ ಒಂದು ಸಂಚಾಗಿತ್ತು ಎಂದು ನಮಗೆ ತಲುಪಿರುವ ವರದಿಗಳಿಂ ರುಜುವಾತಾಗುತ್ತದೆ. ಈ ಎಲ್ಲ ಯೋಜನೆಯನ್ನು ಹರ್ಮುಝಾನ್ ಮಾಡಿದನು. ಹಝ್ರತ್ ಉಮರರ ವಿರುದ್ಧ ಅಬೂಲುಅ್‌ಲುವಿನಿಗೆ ಇದ್ದ ಹಗೆ ಮತ್ತು ದ್ವೇಷವನ್ನು ಅವನು ಹೆಚ್ಚಿಸಿದನು. ಅವರಿಬ್ಬರೂ ಅರೇಬಿಯೇತರರಾಗಿದ್ದರು. ಹರ್ಮುಝಾನನ್ನು ಬಂಧಿ ಮಾಡಿದ ನಂತರ ಅವನನ್ನು ಮದೀನಕ್ಕೆ ಕಳುಹಿಸಲಾಯಿತು. ಖಲೀಫರು ಅವರನ್ನು ಕೊಲ್ಲಲು ಆದೇಶ ನೀಡುವರು ಎಂಬ ಭಯದ ಕಾರಣದಿಂದ ಅವನು ಇಸ್ಲಾಂ ಧರ್ಮವನ್ನು ಸ್ವೀಕರಿಸಿದನು.

ತಬ್ಕಾತ್ ಇಬ್ನು ಸಅದಿನಲ್ಲಿರುವ ನಾಫಿಅ್‌ರ ವರದಿ ಪ್ರಕಾರ ಹಝ್ರತ್ ಉಮರ್‌ರನ್ನು(ರ) ಶಹೀದ್ ಮಾಡಲಾದ ಚೂರಿಯನ್ನು ಹರ್ಮಾಝಾನ್ ಮತ್ತು ಜುಫೈನನ ಬಳಿ ಇದ್ದದ್ದಾಗಿ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ನೋಡಿದ್ದರು. ತಬರಿಯಲ್ಲಿ ಪ್ರಸ್ತಾಪಿಸಲಾಗಿರುವ ಮುಸಯ್ಯಬ್‌ರ ವರದಿ ಪ್ರಕಾರ ಅಬೂಲುಅ್‌ಲು, ಜುಫೈನ ಮತ್ತು ಹರ್ಮಾಝಾನ್ ನಡುವೆ ಬಿದ್ದ ಚೂರಿಯನ್ನು ಅಬ್ದುರ್ರಹ್ಮಾನ್ ಬಿನ್ ಅಬೂಬಕರ್(ರ) ನೋಡಿದ್ದರು. ಹಝ್ರತ್ ಉಬೈದುಲ್ಲಾಹ್ ಬಿನ್ ಉಮರ್‌ರಿಗೆ ಇದರ ಬಗ್ಗೆ ಗೊತ್ತಾದಾಗ, ಅವರು ತನ್ನ ಖಡ್ಗದಿಂದ ಇಬ್ಬರನ್ನೂ ಕೊಂದು ಹಾಕಿದರು. ಅವರು ಅಷ್ಟಕ್ಕೆ ಸುಮ್ಮನಾಗಲಿಲ್ಲ. ಪ್ರತೀಕಾರದ ಆವೇಶದಲ್ಲಿ ಮುಳುಗಿ ಅಬುಲುಅ್‌ಲುವಿನ ಮಗಳನ್ನೂ ಕೊಂದುಹಾಕಿದರು. ಹಝ್ರತ್ ಉಮರ್‌ರನ್ನು ಶಹೀದ್ ಮಾಡಿದ್ದು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಅಬೂಬಕರ್(ರ) ವಿವರಿಸಿದ ಅದೇ ಚೂರಿಯಿಂದಾಗಿತ್ತು. ಹರ್ಮಾಝಾನ್ ಮತ್ತು ಜಫೀನನ್ನು ಕೊಲೆ ಮಾಡಲು ಹಝ್ರತ್ ಉಬೈದುಲ್ಲಾಹ್ ಬಿನ್ ಉಮರ್(ರ) ತ್ವರೆ ಮಾಡಿರದಿದ್ದರೆ, ಅವರಿಬ್ಬರನ್ನೂ ಸಂಗತಿಯ ತನಿಖೆಗಾಗಿ ಕರೆಯಬಹುದಾಗಿತ್ತು. ಈ ರೀತಿಯಲ್ಲಿ ಈ ಸಂಚು ಬಯಲಾಗುತ್ತಿತ್ತು. ಈ ಎಲ್ಲ ಸಂಗತಿಗಳನ್ನು ಮುಂದಿರಿಸುವಾಗ, ಇದು ಯೋಜನಾಬದ್ಧವಾದ ಸಂಚಾಗಿತ್ತು ಎಂದು ಸ್ಪಷ್ಟವಾಗಿ ತಿಳಿದುಬರುತ್ತದೆ. ಆ ಸಂಚನ್ನು ಕಾರ್ಯಗತಗೊಳಿಸಿ ಹಝ್ರತ್ ಉಮರ್‌ರನ್ನು ಕೊಲೆ ಮಾಡಿದ್ದ ವ್ಯಕ್ತಿ ಅಬೂಲುಅ್‌ಲು ಆಗಿತ್ತು. ಇದು ಸಂಚೆಂದು ಹೇಳುವವರ ಅಭಿಪ್ರಾಯವಾಗಿದೆ. (ಸೀರತ್ ಉಮರ್ ಫಾರೂಖ್, ಮುಹಮ್ಮದ್ ರಿಝಾ, ಅನುವಾದಕ ಮುಹಮ್ಮದ್ ಸರ್‌ವರ್ ಗೌಹರ್ ಸಾಹಿಬ್, ಪುಟ–340–344)

ಅದೇ ರೀತಿಯಲ್ಲಿ ಮತ್ತೋರ್ವ ಚರಿತ್ರೆಗಾರನಾದ ಡಾಕ್ಟರ್ ಮುಹಮ್ಮದ್ ಹುಸೈನ್ ಹೈಕಲ್ ತನ್ನ ಪುಸ್ತಕದಲ್ಲಿ ಬರೆಯುತ್ತಾರೆ: ಇರಾನಿ ಯಹೂದಿಯರಿಗೆ ಮತ್ತು ಕ್ರೈಸ್ತರಿಗೆ ಮುಸ್ಲಿಮರಿಂದ ಉಂಟಾದ ಹೀನಾಯ ಸೋಲಿನ ಕಾರಣದಿಂದ ಅವರು ಅರೇಬಿಯರ ವಿರುದ್ಧ ಸಾಮಾನ್ಯವಾಗಿಯೂ ಮತ್ತು ಹಝ್ರತ್ ಉಮರರ(ರ) ವಿರುದ್ಧ ವಿಶೇಷವಾಗಿಯೂ ತಮ್ಮ ಹೃದಯಗಳಲ್ಲಿ ಹಗೆ ಮತ್ತು ದ್ವೇಷದ ಭಾವನೆಗಳನ್ನು ಅಡಗಿಸಿಟ್ಟಿದ್ದರು. ಆ ಸಮಯದಲ್ಲಿ ಜನರು ತಮ್ಮ ಮಾತುಕತೆಗಳಲ್ಲಿ ಈ ಹಗೆ ಮತ್ತು ದ್ವೇಷದ ಬಗ್ಗೆ ಹೇಳುತ್ತಿದ್ದರು. ಅಬೂಲುಅ್‌ಲುವಿನ ಕೃತ್ಯವು ಮದೀನದಲ್ಲಿ ಇದ್ದ ಅಧರ್ಮಿಗಳಾದ ಸಣ್ಣ ಸಂಘದ ಕೋಪ ಮತ್ತು ಪ್ರತಿಕಾರದಿಂದ ತುಂಬಿದ ಸಂಚಿನ ಪರಿಣಾಮವಾಗಿರಬಹುದು.

ನಿಜಸ್ಥಿತಿಯನ್ನು ಅರಿಯಲಿಕ್ಕಾಗಿ ಹಝ್ರತ್ ಉಮರ್‌ರ ಮಕ್ಕಳು ಹೆಚ್ಚು ವ್ಯಾಕುಲಗೊಂಡಿದ್ದರು. ಅಬೂಲುಅ್‌ಲು ಆತ್ಮಹತ್ಯೆ ಮಾಡಿರದಿದ್ದರೆ ಈ ಒಳಸಂಚನ್ನು ಬಯಲು ಮಾಡಿ ಅದರ ನಿಜಸ್ಥಿತಿಯ ತನಕ ಹಝ್ರತ್ ಉಮರರ(ರ) ಮಕ್ಕಳಿಗೆ ತಲುಪಬಹುದಾಗಿತ್ತು. ಆದರೆ ಅವನು ಆತ್ಮಹತ್ಯೆ ಮಾಡಿದನು ಮತ್ತು ಆ ರಹಸ್ಯವನ್ನು ತನ್ನ ಜೊತೆಗೆ ಖಬರಿಗೆ ಕೊಂಡುಹೋದನು. ಇದರಿಂದ ಮಾತು ಕೊನೆಗೊಂಡಿತೇ? ಈ ರಹಸ್ಯವನ್ನು ಅರಿಯಲು ಬೇರೆ ಮಾರ್ಗವಿಲ್ಲವೇ? ಖಂಡಿತ ಇದೆ. ಅರೇಬಿಯದ ಒಬ್ಬ ಸರದಾರ ಈ ರಹಸ್ಯವನ್ನು ಅರಿಯುವಂತೆ ಅಲ್ಲಾಹನ ದೇವದೂತರು ಬಯಸಿದರು. ಈ ಸಂಚಿನ ನಿಜಸ್ಥಿತಿಯ ಕಡೆಗೆ ಬೊಟ್ಟು ಮಾಡಿದರು. ಅದು ಹೇಗೆಂದರೆ, ಹಝ್ರತ್ ಉಮರ್‌ರನ್ನು(ರ) ಶಹೀದ್ ಮಾಡಲಾದ ಚೂರಿಯನ್ನು ಕಂಡಾಗ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಅವರು ಹೇಳಿದರು: ನಾನು ನಿನ್ನೆ ಈ ಚೂರಿಯನ್ನು ಹರ್ಮಾಝಾನ್ ಮತ್ತು ಜುಫೈನನ ನನ ಬಳಿ ನೋಡಿದ್ದೆ. ಚೂರಿಯಿಂದ ಏನು ಮಾಡುತ್ತೀಯ ಎಂದು ನಾನು ಅವರೊಡನೆ ಕೇಳಿದೆ: ಅವರಿಬ್ಬರೂ ಹೇಳಿದರು: ನಾವು ಇದರ ಮೂಲಕ ಮಾಂಸವನ್ನು ತುಂಡು ಮಾಡುತ್ತೇವೆ. ಏಕೆಂದರೆ, ನಾವು ಮಾಂಸವನ್ನು ಕೈಯಿಂದ ಮುಟ್ಟುವುದಿಲ್ಲ. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಅಬೂಬಕರ್(ರ) ಹೇಳಿದರು: ನಾನು ಹಝ್ರತ್ ಉಮರಿನ ಹಂತಕನಾದ ಅಬೂಲುಅ್‌ಲುವಿನ ಬಳಿಯಿಂದ ದಾಟಿ ಹೋದೆ. ಆಗ ಜುಫೈನ ಮತ್ತು ಹರ್ಮಾಝಾನ್ ಸಹ ಅವನೊಂದಿಗೆ ಇದ್ದರು. ಅವರು ರಹಸ್ಯವಾಗಿ ಮಾತನಾಡುತ್ತಿದ್ದರು. ನಾನು ಅಚಾನಕ್ಕಾಗಿ ಅವರ ಸಮೀಪದಿಂದ ಹೋದಾಗ ಅವರು ಪರಾರಿಯಾದರು. ಅವರ ನಡುವೆ ಒಂದು ಚೂರಿ ಬಿತ್ತು. ಅದಕ್ಕೆ ಇರುಭಾಗವಿತ್ತು. ಅದರ ಹಿಡಿ ಮಧ್ಯದಲ್ಲಾಗಿತ್ತು. ಹಝ್ರತ್ ಉಮರ್‌ರನ್ನು ಶಹೀದ್ ಮಾಡಲಾದ ಚೂರಿ ಹೇಗಿತ್ತು ಎಂದು ನೋಡಿರಿ. ಆ ಚೂರಿಯನ್ನು ಜನರು ನೋಡಿದಾಗ ಅದು ಅಬ್ದುರ್ರಹ್ಮಾನ್ ಬಿನ್ ಅಬೂಬಕರ್(ರ) ವಿವರಿಸಿದ ರೀತಿಯಲ್ಲೇ ಇತ್ತು. ಅದು ಸಂಚಾಗಿತ್ತು ಎಂದು ಹೇಳುವವರು ಬರೆಯುತ್ತಾರೆ: ಈಗ ಈ ವಿಷಯದಲ್ಲಿ ಸಂಶಯಕ್ಕೆ ಯಾವುದೇ ಎಡೆಯಿಲ್ಲ. ಮುಸ್ಲಿಮರಲ್ಲಿ ಅತ್ಯಂತ ವಿಶ್ವಾಸಯೋಗ್ಯರಾದ ಇಬ್ಬರು ಅದಕ್ಕೆ ಸಾಕ್ಷ್ಯವಹಿಸುತ್ತಿದ್ದಾರೆ. ಹಝ್ರತ್ ಉಮರ್‌ರನ್ನು(ರ) ಶಹೀದ್ ಮಾಡಲಾದ ಚೂರಿಯನ್ನು ಹರ್ಮಾಝಾನ್ ಮತ್ತು ಜುಫೈನನ ಬಳಿ ಇತ್ತು ಎಂದು ಅವರು ಸಾಕ್ಷಿ ನುಡಿಯುತ್ತಾರೆ.

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್‌ರ ಮಾತನ್ನು ಹಝ್ರತ್ ಉಬೈದುಲ್ಲಾಹ್ ಬಿನ್ ಉಮರ್ ಕೇಳಿದಾಗ ಅವರು ಬೇಗನೇ ತನ್ನ ಖಡ್ಗವನ್ನು ಹಿಡಿದು ಹೊರಟರು. ಹರ್ಮಾಝಾನನ್ನು ಕೂಗಿ ಕರೆದರು. ಹರ್ಮಾಝಾನ್ ಅವರ ಬಳಿಗೆ ಬಂದಾಗ ಅವರೊಡನೆ ಹೀಗೆ ಹೇಳಿದರು: ಕುದುರೆಯನ್ನು ನೋಡಲು ಹೋಗುವ. ನಂತರ ಸ್ವತಃ ಸ್ವಲ್ಪ ಹಿಂದೆ ನಿಂತರು. ಹರ್ಮಾಝಾನ್ ಮುಂದೆ ನಡೆಯಲು ಶುರುಮಾಡಿದಾಗ ಅವನ ಮೇಲೆ ಖಡ್ಗದಿಂದ ಹಲ್ಲೆ ನಡೆಸಿದರು. ಹಝ್ರತ್ ಉಬೈದುಲ್ಲಾಹ್ ಬಿನ್ ಉಮರ್(ರ) ಹೇಳುತ್ತಾರೆ: ಅವನು ಖಡ್ಗದ ಹಲ್ಲೆಯನ್ನು ಅನುಭವಿಸಿದಾಗ ಅವನು ಲಾ ಇಲಾಹ ಇಲ್ಲಲ್ಲಾಹ್ ಎಂದು ಉಚ್ಚರಿಸಿದನು ಮತ್ತು ಅಲ್ಲೇ ಮೃತಪಟ್ಟನು. ಹಝ್ರತ್ ಉಬೈದುಲ್ಲಾಹ್ ಹೇಳುತ್ತಾರೆ: ನಾನು ಜುಫೈನನ್ನು ಕರೆದೆ. ಅವನು ಹೀರಾದ ಕ್ರೈಸ್ತರಲ್ಲಿ ಒಬ್ಬ ಕ್ರೈಸ್ತನಾಗಿದ್ದನು. ಅವನು ಸಅದ್ ಬಿನ್ ಅಬೀವಖಾಸ್‌ನ ಸಹಾಯಕನಾಗಿದ್ದನು. ಜುಫೈನನ ಮೇಲೆ ಖಡ್ಗ ಚಲಾಯಿಸಿದಾಗ ಅವನು ತನ್ನ ಕಣ್ಣುಗಳ ಮುಂದೆ ಶಿಲುಬೆಯ ರೂಪದಲ್ಲಿ ಸಂಕೇತ ಮಾಡಿದನು. ಹಝ್ರತ್ ಉಬೈದುಲ್ಲಾಹ್ ಇತರ ಸಹೋದರರು ಸಹ ತಮ್ಮ ತಂದೆಯನ್ನು ಶಹೀದ್ ಮಾಡಿದ ಕಾರಣದಿಂದ ಕೋಪಗೊಂಡಿದ್ದರು. ಉಮ್ಮುಲ್ ಮೂಮಿನೀನ್ ಹಝ್ರತ್ ಹಫ್ಸ(ರ) ಅತ್ಯಂತ ಹೆಚ್ಚು ಕೋಪಗೊಂಡಿದ್ದರು.

ಹೇಗಿದ್ದರೂ ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್(ರ) ಮಾಡಿದ ಕೃತ್ಯಕ್ಕೆ ನಿಯಮಪರವಾಗಿ ಅನುಮತಿಯಿರಲಿಲ್ಲ. ಪ್ರತೀಕಾರ ಮಾಡಲು ಸ್ವತಃ ತಯಾರಾಗಲು ಮತ್ತು ತನ್ನ ಹಕ್ಕನ್ನು ಸ್ವತಃ ಪಡೆಯಲು ಯಾವನೇ ವ್ಯಕ್ತಿಗೆ ಅಧಿಕಾರವಿಲ್ಲ. ವಿಷಯಗಳ ಬಗ್ಗೆ ಜನರ ನಡುವೆ ನ್ಯಾಯಯುತವಾಗಿ ತೀರ್ಮಾನ ಮಾಡಲು ಮತ್ತು ಅಪರಾಧಿ ವಿರುದ್ಧ ಪ್ರತಿಕ್ರಿಯಾ ದಂಡದ ಆದೇಶವನ್ನು ಹೊರಡಿಸಲು ಹಝ್ರತ್ ಪೈಗಂಬರ್‌ರಿಗೆ(ಸ) ಮತ್ತು ಅವರ ನಂತರ ಅವರ ಖಲೀಫರಿಗೆ ಮಾತ್ರ ಅಧಿಕಾರವಿರುತ್ತದೆ. ತಂದೆಯ ಕೊಲೆಯ ಬಗ್ಗೆಗಿನ ತೀರ್ಪನ್ನು ಹಝ್ರತ್ ಉಬೈದುಲ್ಲಾಹ್ ಅಮೀರುಲ್ ಮೂಮಿನೀನ್‌ರಿಂದ ಪಡೆಯಬೇಕಾಗಿತ್ತು. ಈ ಕೊಲೆಯು ಒಂದು ಯೋಜಿತ ಸಂಚಾಗಿರಬಹುದು ಎಂದು ಊಹಿಸಬಹುದಾಗಿದೆ.

(ಅಲ್‌ಫಾರೂಖ್ ಉಮರ್(ರ) ಮುಹಮ್ಮದ್ ಹುಸೈನ್ ಹೈಕಲ್, ಅನುವಾದಕ: ಹಬೀಬ್ ಅಶ್‌ಅರಿ, ಪುಟ–869–872, ಇಸ್ಲಾಮಿ ಕುತುಬ್ ಖಾನ ಲಾಹೋರ್)

ಇದರ ಕುರಿತು ಕೆಲವು ಚರಿತ್ರೆಗಾರರ ಪುರಾವೆಗಳು ಪ್ರಬಲವಾಗಿವೆ. ಏಕೆಂದರೆ ಹಝ್ರತ್ ಉಸ್ಮಾನ್(ರ) ಸಹ ಇದೇ ರೀತಿಯ ಒಳಸಂಚಿಗೆ ತುತ್ತಾದರು. ಇದರಿಂದ ಆ ಸಂಶಯವೂ ಪ್ರಬಲವಾಗುತ್ತದೆ. ಇಸ್ಲಾಮಿನ ವರ್ಧಿಸುತ್ತಿರುವ ಪ್ರಗತಿ ಮತ್ತು ವಿಜಯವನ್ನು ತಡೆಯಲು ಹಾಗೂ ತಮ್ಮ ಪ್ರತೀಕಾರದ ಬೆಂಕಿಯನ್ನು ನಂದಿಸಲು ಬಾಹ್ಯ ಶಕ್ತಿಗಳ ಒಂದು ಒಳಸಂಚಿನ ನೆರವಿನಿಂದ ಹಝ್ರತ್ ಉಮರ್‌ರನ್ನು ಶಹೀದ್ ಮಾಡಲಾಗಿತ್ತು ಎಂದು ಶಕ್ತವಾಗಿ ಸಂಶಯಿಸಬಹುದಾಗಿದೆ.

ಸಹೀಹ್ ಮುಸ್ಲಿಮಿನಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ಇಬ್ನು ಉಮರ್(ರ) ವರದಿ ಮಾಡುತ್ತಾರೆ: ನನ್ನ ತಂದೆಯ ಮೇಲೆ ಹಲ್ಲೆ ನಡೆದಾಗ ನಾನು ಅವರ ಬಳಿಯಲ್ಲಿ ಇದ್ದೆ. ಜನರು ಅವರನ್ನು ಹೊಗಳಿದರು. **ಜಝಾಕಲ್ಲಾಹು ಖೈರನ್** ಅಲ್ಲಾಹನು ನಿಮಗೆ ಅತ್ಯುತ್ತಮ ಪ್ರತಿಫಲ ನೀಡಲಿ ಎಂದು ಹೇಳಿದರು. ಮತ್ತೆ ಅವರು ಹೇಳಿದರು: ನನಲ್ಲಿ ಆಸಕ್ತಿಯು ಇದೆ ಮತ್ತು ಭಯವೂ ಇದೆ. ನೀವು ಖಲೀಫರನ್ನು ನೇಮಿಸಿ ಎಂದು ಜನರು ಹೇಳಿದರು. ಅವರು(ರ) ಹೇಳಿದರು: ಜೀವನದಲ್ಲಿ ಮತ್ತು ಮರಣದ ನಂತರವೂ ನಾನು ನಿಮ್ಮ ಹೊರೆಯನ್ನು ಹೊರಬೇಕೇ? ಅದರಲ್ಲಿ ನನ್ನ ಪಾಲು ಸಮಾನವಾಗಿರಬೇಕೆಂದು ನಾನು ಬಯಸುತ್ತೇನೆ. ಅಂದರೆ ನನ್ನ ಮೇಲೆ ಹಿಡಿತವು ಇರಬಾರದು ಮತ್ತು ನನಗೆ ಏನೂ ಸಿಗಬಾರದು. ನಾನು ಯಾರನ್ನಾದರೂ ಉತ್ತರಾಧಿಕಾರಿಯನ್ನಾಗಿ ಮಾಡಿದರೆ, ಅವರು ನನಗಿಂತ ಉತ್ತಮವಾದ ಉತ್ತರಾಧಿಕಾರಿಯನ್ನು ಮಾಡಿದ್ದರು, ಅಂದರೆ ಹಝ್ರತ್ ಅಬೂಬಕರ್(ರ). ನಾನು ಮಾಡಿದರೆ ತೊಂದರೆ ಇಲ್ಲ. ನಾನು ಉತ್ತರಾಧಿಕಾರಿಯನ್ನು ನೇಮಿಸದೆ ನಿಮ್ಮನ್ನು ಅಗಲಿರೆ, ನನಗಿಂತ ಉತ್ತಮವಾದ ಉತ್ತರಾಧಿಕಾರಿಯನ್ನು ನೇಮಿಸದೆ ಅವರು ನಿಮ್ಮನ್ನು ತೊರೆದರು. ಅಂದರೆ ಎರಡನೇ ಉದಾಹರಣೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮರದ್ದು ನೀಡಿದರು ಅಂದರೆ ರಸೂಲ್(ಸ)ರವರು ಯಾವ ಉತ್ತರಾಧಿಕಾರಿಯನ್ನು ನೇಮಿಸಿರಲಿಲ್ಲ. ಹಝ್ರತ್ ಅಬ್ದುಲ್ಲಾ(ರ) ಅವರು ಪ್ರವಾದಿ(ಸ) ಬಗ್ಗೆ ಪ್ರಸ್ತಾಪಿಸಿದಾಗ ಅವರು ಉತ್ತರಾಧಿಕಾರಿಯನ್ನು

ನೇಮಿಸುವುದಿಲ್ಲ ಎಂದು ನನಗೆ ತಿಳಿಯಿತು ಎಂದು ಹೇಳುತ್ತಾರೆ. (ಸಾಹೀಹ್ ಮುಸ್ಲಿಂ, ಕಿತಾಬ್ ಅಲ್-ಎಮಾರತ್, ಬಾಬ್ ಅಲ್-ಇಸ್ತಿಕ್ಲಾಫ್ ವಾ ತರ್ಕಾ, ಹದೀಸ್-4713)

ಸಹೀಹ್ ಮುಸಲ್ಮಾನರ ಇನ್ನೊಂದು ವರದಿಯಲ್ಲಿ, ಹಝ್ರತ್ ಇಬ್ನ್ ಉಮರ್(ರ) ಅವರ ವರದಿಯಿದೆ. ನಾನು ಹಝ್ರತ್ ಹಫ್ಸಾ(ರ) ಅವರ ಬಳಿಗೆ ಹೋಗಿದ್ದೆ ಎಂದು ಅವರು ಹೇಳುತ್ತಾರೆ. ಅವರು ಹೇಳಿದರು: ನಿಮ್ಮ ತಂದೆ ಉತ್ತರಾಧಿಕಾರಿಯನ್ನು ನೇಮಿಸುವುದಿಲ್ಲ ಎಂದು ನಿಮಗೆ ತಿಳಿದಿದೆಯೇ? ಅದಕ್ಕೆ ಅವರು ಹೇಳಿದರು ಅವರು ಹಾಗೆ ಮಾಡುವುದಿಲ್ಲ. ಅವರು ಅಂದರೆ ಹಝ್ರತ್ ಹಫ್ಸ(ರ) ಹೇಳಿದರು ಅವರು ಹಾಗೆ ಮಾಡುತ್ತಾರೆ. ಅದಕ್ಕೆ ಅವರು ನಾನು ಹಝ್ರತ್ ಉಮರ್(ರ) ಅವರೊಂದಿಗೆ ಮತ್ತೊಮ್ಮೆ ಮಾತನಾಡುತ್ತೇನೆ ಎಂದು ಪ್ರಮಾಣ ಮಾಡುತ್ತೇನೆ ಎಂದು ಅವರು ಹೇಳುತ್ತಾರೆ. ನಾನು ಬೆಳಿಗ್ಗೆ ತನಕ ಮೌನವಾಗಿದ್ದೆ ಮತ್ತು ನಿಮ್ಮೊಂದಿಗೆ ಏನೂ ಮಾತನಾಡಲಿಲ್ಲ ಎಂದು ಅವರು ಹೇಳುತ್ತಾರೆ. ನನ್ನ ಆಣೆಯ ಕಾರಣದಿಂದ ನಾನು ಬೆಟ್ಟವನ್ನೇರುವ ಸ್ಥಿತಿ ನಿರ್ಮಾಣವಾಗಿತ್ತು ಎನ್ನುತ್ತಾರೆ ಅವರು. ಅದಕ್ಕೆ ನಾನು ಹಿಂತಿರುಗಿ ಅವರ ಬಳಿಗೆ ಹೋದೆ. ಅವರು ಜನರ ಸ್ಥಿತಿಯ ಬಗ್ಗೆ ಕೇಳಿದರು, ಅಂದರೆ ಹಝ್ರತ್ ಉಮರ್(ರ) ಮತ್ತು ಅವರು ಏನು ಹೇಳುತ್ತಾರೆಂದು ನಾನು ನಿಮಗೆ ಹೇಳಿದೆ. ಆಗ ಅವರು ಹೇಳಿದ್ದನ್ನು ನಾನು ಅವರಿಗೆ ಹೇಳಿದೆ. ಆಗ ನಾನು ಹೇಳಿದ್ದೇನೆಂದರೆ, ಜನರು ಒಂದು ಮಾತು ಹೇಳುವುದನ್ನು ನಾನು ಕೇಳಿದ್ದೇನೆ ಮತ್ತು ನಾನು ಅದನ್ನು ನಿಮಗೆ ಹೇಳುತ್ತೇನೆ ಎಂದು ಪ್ರಮಾಣ ಮಾಡಿದ್ದೇನೆ. ನೀವು ಉತ್ತರಾಧಿಕಾರಿಯನ್ನು ನೇಮಿಸುವುದಿಲ್ಲ ಎಂದು ಅವರು ಭಾವಿಸುತ್ತಾರೆ. ವಿಷಯವೇನೆಂದರೆ, ಯಾರಾದರೂ ನಿಮ್ಮ ಒಂಟೆಗಳನ್ನು ಮೇಯಿಸುತ್ತಿದ್ದರೆ ಅಥವಾ ಮೇಕೆಗಳನ್ನು ಮೇಯಿಸುತ್ತಿದ್ದರೆ ಅವರು ನಿಮ್ಮ ಬಳಿಗೆ ಬಂದು ಬಿಡುತ್ತಾರೆ, ಅವನು ಅವುಗಳನ್ನು ವ್ಯರ್ಥಗೊಳಿಸಿದ್ದಾನೆ ಎಂದು ನೀವು ನೋಡುತ್ತೀರಿ. ಆದ್ದರಿಂದ ಜನರ ಬಗ್ಗೆ ಕಾಳಜಿ ವಹಿಸುವುದು ಹೆಚ್ಚು ಮುಖ್ಯವಾಗಿದೆ. ಹಝ್ರತ್ ಉಮರ್(ರ) ನನ್ನ ಮಾತಿಗೆ ಒಪ್ಪಿ ಸ್ವಲ್ಪ ಹೊತ್ತು ತಲೆಬಾಗಿ ನಿಂತರು ಎನ್ನಲಾಗಿದೆ. ನಂತರ ಅವರು ತಮ್ಮ ತಲೆಯನ್ನು ಮೇಲೆತ್ತಿ ನನ್ನತ್ತ ನೋಡಿ ಹೇಳಿದರು: ಸರ್ವಶಕ್ತನಾದ ಅಲ್ಲಾಹನು ಅವನ ಧರ್ಮವನ್ನು ರಕ್ಷಿಸುತ್ತಾನೆ. ನಾನು ಯಾರನ್ನೂ ಖಲೀಫನನ್ನಾಗಿ ಮಾಡದಿದ್ದರೆ, ಪ್ರವಾದಿ(ಸ)ರವರು ಯಾರನ್ನು ಖಲೀಫರನ್ನಗಿ ನೇಮಿಸಲಿಲ್ಲ ಮತ್ತು ನಾನು ಖಲೀಫನನ್ನಾಗಿ ಮಾಡಿದರೆ, ಅಬೂಬಕರ್(ರ) ಖಲೀಫನನ್ನು ಮಾಡಿದರು. ಅವರು ಅಂದರೆ ಹಝ್ರತ್ ಉಮರ್(ರ) ಅವರ ಮಗ ಇಬ್ನ್ ಉಮರ್ ಹೇಳಿದರು: ಆದ್ದರಿಂದ ಅಲ್ಲಾಹನಆಣೆ! ಅವರು, ಅಂದರೆ ಹಝ್ರತ್ ಉಮರ್(ರ), ಪ್ರವಾದಿ(ಸ) ಮತ್ತು ಹಝ್ರತ್ ಅಬೂಬಕರ್(ರ) ಅವರ ಬಗ್ಗೆ ಪ್ರಸ್ತಾಪಿಸಿದಾಗ, ನೀವು ಯಾರನ್ನೂ ಪ್ರವಾದಿ(ಸ) ಗೆ ಸಮಾನರನ್ನಾಗಿ ಮಾಡುವುದಿಲ್ಲ ಮತ್ತು ನೀವು ಯಾರನ್ನೂ ಉತ್ತರಾಧಿಕಾರಿಯನ್ನಾಗಿ ಮಾಡುವುದಿಲ್ಲ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. (ಸಾಹೀಹ್ ಮುಸ್ಲಿಂ, ಕಿತಾಬ್ ಅಲ್-ಎಮಾರತ್, ಬಾಬ್ ಅಲ್-ಇಸ್ತಿಕ್ಲಾಫ್ ವಾ ತರ್ಕಾ, ಹದೀಸ್-4714)

ಹಝ್ರತ್ ಉಮರ್(ರ) ಗಾಯಗೊಂಡಾಗ ಅವರು ನೋವಿನಿಂದ ಚಂಚಲರಾದರು ಎಂದು ಹಝ್ರತ್ ಮಿಸ್ವರ್ ಬಿನ್ ಮಖ್ರಮ ವಿವರಿಸುತ್ತಾರೆ. ಹಝ್ರತ್ ಇಬ್ನ್ ಅಬ್ಬಾಸ್(ರ) ಅವರಿಗೆ ಸಾಂತ್ವನ ಹೇಳಿದಂತೆ ಹೇಳಿದರು. ಅಮೀರ್ ಅಲ್-ಮುಮಿನೀನ್! ಹಾಗಿದ್ದಲ್ಲಿ, ನೀವು ಪ್ರವಾದಿ(ಸ) ಅವರೊಂದಿಗೆ ಕಾಲಕಳೆದಿದ್ದೀರಿ ಮತ್ತು ನೀವು ಅವರನ್ನು ಬಹಳ ಉತ್ತಮವಾಗಿ ಬೆಂಬಲಿಸಿದ್ದೀರಿ. ನಂತರ ಪವಿತ್ರ ಪ್ರವಾದಿ(ಸ) ಅವರೊಂದಿಗೆ ಸಂತೋಷವಾಗಿರುವಂತಹ ಸ್ಥಿತಿಯಲ್ಲಿ ಅವರು ಅವರಿಂದ ಅಗಲಿಹೋದರು. ನಂತರ ಅವರು ಹಝ್ರತ್ ಅಬೂಬಕರ್(ರ) ಅವರೊಂದಿಗೆ ಇದ್ದರು ಮತ್ತು ಅವರನ್ನು ಸಹ ಉತ್ತಮವಾಗಿ ಬೆಂಬಲಿಸಿದರು. ನಂತರ ಅವರು ಸಹ ನಿಮ್ಮೊಂದಿಗೆ ಸಂತೋಷವಾಗಿರುವಂತಹ ಸ್ಥಿತಿಯಲ್ಲಿ ಅಗಲಿ ಹೋದರು. ನಂತರ ನೀವು ನಿಮ್ಮ ಸಹಚರರೊಂದಿಗೆ ಇದ್ದೀರಿ ಮತ್ತು ನೀವು ಅವರನ್ನು ಚೆನ್ನಾಗಿ ಬೆಂಬಲಿಸಿದ್ದೀರಿ ಮತ್ತು ನೀವು ಅವರಿಂದ ಬೇರ್ಪಟ್ಟರೆ ನಿಸ್ಸಂದೇಹವಾಗಿಯು ಅವರು ನಿಮ್ಮೊಂದಿಗೆ ಸಂತೋಷಪಡುವ ರೀತಿಯಲ್ಲಿ ನೀವು ಅವರೊಂದಿಗೆ ಭಾಗವಾಗುತ್ತೀರಿ. ಹಝ್ರತ್ ಉಮರ್(ರ) ಹೇಳಿದರು: ಪ್ರವಾದಿ(ಸ) ಅವರೊಂದಿಗೆ ಒಡನಾಟ ಮತ್ತು ಅವರ ಸಂತೋಷದ ಬಗ್ಗೆ ನೀವು ಪ್ರಸ್ತಾಪಿಸಿರುವುದು ಅಲ್ಲಾಹನ ಕೃಪೆ ಆಗಿದೆ. ಮತ್ತು ಹಝ್ರತ್ ಅಬೂಬಕರ್(ರ) ಅವರ ಒಡನಾಟ ಮತ್ತು ಅವರ ಸಂತೋಷದ ಬಗ್ಗೆ ನೀವು ಪ್ರಸ್ತಾಪಿಸಿರುವುದು ಸಹ ಅಲ್ಲಾಹನು ನನಗೆ ನೀಡಿದ ಕೃಪೆಯಾಗಿದೆ. ಮತ್ತು ನೀವು ನೋಡುತ್ತಿರುವ ನನ್ನ ಆಲೋಚನೆಯು ನಿಮಗಾಗಿ ಮತ್ತು ನಿಮ್ಮ ಸಹಚರರಿಗಾಗಿದೆ. ನಾನು ನನ್ನ ಬಗ್ಗೆ ಚಿಂತಿಸುತ್ತಿಲ್ಲ. ನಿಮ್ಮ ಹಾಗೂ ನಿಮ್ಮ ಸಹಚಾರಿಗಳ ಬಗ್ಗೆ ಕಳಜಿಯಾಗಿದೆ. ಅಲ್ಲಾಹನ ಆಣೆ! ಒಂದು ವೇಳೆ ನನ್ನ ಬಳಿ ಭೂಮಿಯಷ್ಟು ಚಿನ್ನವಿರುತ್ತಿದ್ದರೆ ನಾನು ಖಂಡಿತವಾಗಿಯು ಅಲ್ಲಾಹನ ಶಿಕ್ಷೆಯಿಂದ ಉಳಿದುಕೊಳ್ಳಲು ಅದನ್ನು ಸಂಪೂರ್ಣವಾಗಿ ಅಲ್ಲಹನಿಗೆ ಸಮರ್ಪಿಸುತ್ತಿದ್ದೆ. (ಸ ಹೀಹ್ ಅಲ್-ಬುಖಾರಿ, ಕಿತಾಬ್ ಫಝಾಎಲುಸ್ಸಹಾಬ(ಸ), ಅಧ್ಯಾಯ ಮನಾಕಿಬ್ ಉಮರ್ ಬಿನ್ ಖತ್ತಾಬ್; ಹದೀಸ್ 3692)

**ವಲಯುಬದ್ದಿಲನ್ನಹುಂ ಮಿನ್‌ಬಅ್‌ದಿ ಖೌಫಿಹಿಂ ಅಮ್‌ನಾ** ಎಂಬ ಆಯತ್ತನ್ನು ವ್ಯಾಖ್ಯಾನಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಭಯಗೊಳ್ಳುವಂತಹ ಯಾವುದೇ ವಿಪತ್ತು ಖಲೀಫರಿಗೆ ಬಂದಿಲ್ಲ. ಹಾಗೇನಾದರೂ ಬಂದರೂ ಕೂಡ ಅಲ್ಲಾಹನು ಅದನ್ನು ನೆಮ್ಮದಿಯಾಗಿ ಬದಲಾಯಿಸುತ್ತಾನೆ. ಹಝ್ರತ್ ಉಮರ್(ರ) ಶಹೀದ್ ಆದರು ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ ಆದರೆ ಘಟನೆಗಳನ್ನು ಗಮನಿಸಿದಾಗ ಹಝ್ರತ್ ಉಮರ್(ರ) ಅವರಿಗೆ ಈ ಶಹಾದತ್ತಿನ ಭಯವಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ ಆದರೆ ಅವರು ಹೇ ಅಲ್ಲಾಹ್, ನನಗೆ ಮದೀನದಲ್ಲಿ ಶಹಾದತ್ ನೀಡು ಎಂದು ಹಝ್ರತ್ ಉಮರ್(ರ) ನಿರಂತರವಾಗಿ ದುಆ ಮಾಡುತ್ತಿದ್ದರು. ಆದ್ದರಿಂದ ತನ್ನ ಇಡೀ ಜೀವನವನ್ನು ಓ ಅಲ್ಲಾಹ್ ನನಗೆ ಮದೀನದಲ್ಲಿ ಶಹೀದನ್ನಾಗಿಸು ಎಂದು ಪ್ರಾರ್ಥಿಸಿದ ವ್ಯಕ್ತಿ. ಅವರಿಗೆ ಭಯದ ಸ್ಥಿತಿಯುಂಟಾಗಿತ್ತು ಮತ್ತು ಅಲ್ಲಾಹನು ಅದನ್ನು ನೆಮ್ಮದಿಗೆ ಬದಲಾಯಿಸಿಲ್ಲವೆಂದು ಅವರ ಶಹಾದತಿನ ಕುರಿತು ಹೇಗೆ ಹೇಳಲು ಸಾಧ್ಯ? ಒಂದು ವೇಳೆ ಹಝ್ರತ್ ಉಮರ್(ರ)ರವರು ಶಹಾದತ್ತಿನ ಭಯದಲ್ಲಿ ಹುತಾತ್ಮರಾದರೆ, ಸರ್ವಶಕ್ತನಾದ ಅಲ್ಲಹನು ಅವರ ಭಯವನ್ನು ಶಾಂತಿಗೆ ಬದಲಾಯಿಸಲಿಲ್ಲ ಎಂದು ಹೇಳಬಹುದು ಆದರೆ ಅವರು ಓ ಅಲ್ಲಾಹ್ ನನಗೆ ಮದೀನದಲ್ಲಿ ಶಹಾದತ್ತನ್ನು ನೀಡು ಎಂದು ಪ್ರಾರ್ಥಿಸುತ್ತಲೇ ಇರುತ್ತಿದ್ದರು. ಹಾಗಾದರೆ ಅವರು ಶಹಾದತ್ತಿಗೆ ಹೆದರುತ್ತಿದ್ದರು ಎಂದು ಹೇಗೆ ಸಾಬೀತಾಯಿತು. ಅವರು ಶಹಾದತ್ತಿಗೆ ಹೆದರುತ್ತಿರಲಿಲ್ಲ ಅದರ ಬದಲು ಅವರು ಸರ್ವಶಕ್ತನಾದ ಅಲ್ಲಾಹನಲ್ಲಿ ದುಆ ಮಾಡುತ್ತಿದ್ದರು ಅದನ್ನು ಅಲ್ಲಾಹನು ಸಹ ಅಂಗೀಕರಿಸಿದನು. ಹೀಗಾಗಿ ನಮಗೆ ಈ ಆಯತ್ತಿನಿಂದ ತಿಳಿದು ಬರುವುದೇನೆಂದರೆ ನಾನು ಹೇಳಿದಂತೆ, ಖಲೀಫರು ಭಯಪಡುವುದು ಎಂದಿಗೂ ಸಂಭವಿಸುವುದಿಲ್ಲ ಮತ್ತು ಅಲ್ಲಾಹನು ವಾಗ್ದಾನ ಮಾಡಿರುವುದೇನಂದರೆ ಖಲೀಫರು ಯಾವುದರಿಂದ ಭಯಪಡುತ್ತಾರೋ ಅದನ್ನು ಸಂಭವಿಸುವುದೇ ಇಲ್ಲ ಬದಲಿಗೆ ಆ ಭಯವನ್ನು ಶಾಂತಿಯಿಂದ ಬದಲಾಯಿಸುತ್ತದೆ. ಆದರೆ ಅವರು ಆ ಒಂದು ವಿಷಯಕ್ಕೆ ಹೆದರೇ ಇಲ್ಲ ಅದರ ಬದಲು ಅವರು ಅದನ್ನು ಘನತೆ, ಗೌರವ ಮತ್ತು ಉನ್ನತ ಸ್ಥಾನಕ್ಕೆ ಕಾರಣವಾದ ವಿಷಯ ಎಂದು ಪರಿಗಣಿಸುತ್ತಾರೆ. ಆದ್ದರಿಂದ ಅದನ್ನು ಭಯಯ ವಿಷಯ ಎಂದು ಕರೆಯುವುದು ಮತ್ತು ನಂತರ ಅದನ್ನು ಶಾಂತಿಯಿಂದ ಏಕೆ ಬದಲಾಯಿಸಲಾಗಿಲ್ಲ ಎಂದು ಹೇಳುವುದು ಅರ್ಥಹೀನ ವಿಷಯವಾಗಿದೆ.

ಅವರು ಹೇಳುತ್ತಾರೆ: "ನಾನು ಹಝ್ರತ್ ಉಮರ್(ರ) ಅವರ ಈ ಪ್ರಾರ್ಥನೆಯನ್ನು ಓದಿದಾಗ, ಶತ್ರುಗಳು ಮದೀನಾವನ್ನು ಆಕ್ರಮಿಸಬೇಕು ಮತ್ತು ಅದರ ಆಕ್ರಮಣವು ಎಲ್ಲಾ ಮುಸ್ಲಿಮರನ್ನು ನಾಶಮಾಡುವಷ್ಟು ತೀವ್ರವಾಗಿರಬೇಕು ತದನಂತರ ಕಾಲಘಟ್ಟದ ಖಲೀಫರ ಬಳಿಗೆ ಅವರು ತಲುಪಿ ಅವರನ್ನು ಶಹೀದ್ ಮಾಡಬೇಕು ಎಂದು ನಾನು ನನ್ನ ಮನಸ್ಸಿನಲ್ಲಿ ಭಾವಿಸಿದೆ. ಆದರೆ ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಉಮರ್(ರ) ಅವರ ಪ್ರಾರ್ಥನೆಯನ್ನು ಸ್ವೀಕರಿಸಿದನು ಮತ್ತು ಇಸ್ಲಾಮಿನ ಗೌರವ ಉಳಿಯುವ ರೀತಿಯಲ್ಲಿ ಅದರ ಏರ್ಪಾಡನ್ನು ಮಾಡಿದನು. ಮದೀನದ ಮೇಲೆ ಯಾವುದೇ ಹೊರಗಿನ ಸೈನ್ಯ ಆಕ್ರಮಣ ಮಾಡುವಂತೆ ಆಗುವ ಬದಲಾಗಿ ಒಳಗಿನಿಂದಲೇ ಒಬ್ಬ ಕೆಡುಕನು ಎದ್ದನು ಮತ್ತು ಅವನು ಕಠಾರಿಯಿಂದ ಹಝ್ರತ್ ಉಮರ್‌ರನ್ನು(ರ) ಶಹೀದ್ ಮಾಡಿದನು." (ತಫ್ಸೀರ್ ಕಬೀರ್, ಸಂಪುಟ-6, ಪುಟ-378)

ಗುಲಾಮರನ್ನು ಮುಕ್ತಿಗೊಳಿಸುವುದರ ಕುರಿತು ಇಸ್ಲಾಮಿನ ಪಾಠಗಳನ್ನು ವಿವರಿಸುತ್ತಾ ಹಝ್ರತ್ ಉಮರರ(ರ) ಶಹಾದತಿನ ಕಾರಣವನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಗುಲಾಮರನ್ನು ಯಾವುದೇ ಕಂದಾಯ ವಸೂಲು ಮಾಡದೇ ಸ್ವತಂತ್ರಗೊಳಿಸಲು ಆದೇಶವಿತ್ತು. ಹಾಗೆ ಬಿಡುಗಡೆಗೊಳಿಸಲು ಸಾಧ್ಯವಿಲ್ಲದಿದ್ದರೆ ಮತ್ತು ಗುಲಾಮನಿಗೂ ತೆರಿಗೆ ಪಾವತಿಸಲು ಶಕ್ತಿಯಿಲ್ಲದಿದ್ದರೆ ಅವನು ತನ್ನ ತೆರಿಗೆ ಪಾವತಿಗಾಗಿ ಕಂತುಗಳನ್ನು ನಿಶ್ಚಯಿಸಬಹುದಾಗಿದೆ.

ಹೀಗೆ ಕಂತುಗಳು ನಿಶ್ಚಿತಗೊಂಡ ಒಬ್ಬ ಗುಲಾಮನೇ ಹಝ್ರತ್ ಉಮರ್‌ರನ್ನು ಶಹೀದ್ ಮಾಡಿದ್ದನು. ಒಬ್ಬ ವ್ಯಕ್ತಿಯ ಗುಲಾಮನು ಬಹಳ

ಸಂಪಾದಿಸುತ್ತಿದ್ದನು, ಆದರೆ ಅವನ ಮಾಲಿಕನಿಗೆ ಅಲ್ಪವೇ ನೀಡುತ್ತಿದ್ದನು. ಮೂರುವರೆ ಆಣೆ ಮಾಲಿಕನಿಗೆ ಪಾವತಿಸಬೇಕೆಂದು ಆ ಗುಲಾಮನೊಡನೆ ಹೇಳಲಾಯಿತು. ಇರಾನಿಯಾದ ಕಾರಣದಿಂದ ತನ್ನ ವಿರುದ್ಧ ಮಾಡಲಾದ ತೀರ್ಪಾಗಿದೆ ಇದೆಂದು ಅವನು ಭಾವಿಸಿದನು. ಕೋಪದಿಂದ ಮರುದಿನವೇ ಚೂರಿಯಿಂದ ಹಝ್ರತ್ ಉಮರರ(ರ) ಮೇಲೆ ಹಲ್ಲೆ ನಡೆಸಿದನು. ಅದರಿಂದ ಆದ ಗಾಯಗಳ ಕಾರಣದಿಂದ ಹಝ್ರತ್ ಉಮರ್(ರ) ಶಹೀದ್ ಆದರು. (ಇಸ್ಲಾಮ್ ಕಾ ಇಖ್ತಿಸಾದಿ ನಿಝಾಮ್, ಸನ್ವಾರುಲ್ ಉಲೂಮ್, ಸಂಪುಟ-18, ಪುಟ-28-29)

ಹಝ್ರತ್ ಮುಸ್ಲಿಹ್ ಮೌಊದ್(ರ) ಮತ್ತಷ್ಟು ಹೇಳುತ್ತಾರೆ: "ಪ್ರಪಂಚದಲ್ಲಿ ಸರಿಯಾದ ಮಾರ್ಗಕ್ಕೆ ಕರೆದೊಯ್ಯುವ ಎರಡು ವಿಷಯಗಳಿವೆ, ತೀವ್ರ ದ್ವೇಷ ಅಥವಾ ತೀವ್ರ ಪ್ರೀತಿ. ಒಂದು ಸಣ್ಣ ಘಟನೆಯಿಂದ ವಿಪರೀತ ದ್ವೇಷವು ಹೆಚ್ಚಾಗಿ ಉದ್ಭವಿಸುತ್ತದೆ. ಹಝ್ರತ್ ಉಮರ್(ರ)ರವರ ಕಾಲದಲ್ಲಿ ಇಸ್ಲಾಮಿಕ್ ಜಗತ್ತಿಗೆ ದೊಡ್ಡ ಹಾನಿಯನ್ನುಂಟು ಮಾಡಿದ ಸಣ್ಣ ಘಟನೆಯಿಂದ ಎಷ್ಟು ದ್ವೇಷ ಹೆಚ್ಚಾಗಿದೆ ನೋಡಿ. ಈ ಘಟನೆಯ ಪರಿಣಾಮ ಇನ್ನೂ ಮುಂದುವರೆದಿದೆ ಎಂದು ನಾನು ಭಾವಿಸುತ್ತೇನೆ. ಹಝ್ರತ್ ಉಮರ್(ರ)ರವರ ಸಮಯದಲ್ಲಿ ಅವರಿಗೆ ಒಂದು ಪ್ರಕರಣ ಬಂದಿತು. ಒಬ್ಬ ವ್ಯಕ್ತಿಯ ಗುಲಾಮನು ಬಹಳಷ್ಟು ಸಂಪಾದಿಸುತ್ತಾನೆ ಆದರೆ ಅವನ ಯಜಮಾನನಿಗೆ ಬಹಳ ಕಡಿಮೆ ನೀಡುತ್ತಾನೆ. ಹಝ್ರತ್ ಉಮರ್(ರ) ಈ ಗುಲಾಮನನ್ನು ಕರೆದು ಯಜಮಾನನಿಗೆ ಹೆಚ್ಚಿನದನ್ನು ನೀಡುವಂತೆ ಹೇಳಿದರು. ಆ ಸಮಯದಲ್ಲಿ ಕೆಲವು ವೃತ್ತಿಪರರು ಬಹಳ ಕಡಿಮೆ ಇರುತ್ತಿದ್ದರಿಂದ ಕಮ್ಮಾರರು ಮತ್ತು ಬಡಗಿಗಳು ಹೆಚ್ಚು ಮೌಲ್ಯಯುತರಾಗಿದ್ದರು. ಗುಲಾಮನು ಹಿಟ್ಟಿನ ಗಿರಣಿಯನ್ನು ಮಾಡುತ್ತಿದ್ದನು ಮತ್ತು ಹೀಗೆ ಸಾಕಷ್ಟು ಹಣವನ್ನು ಸಂಪಾದಿಸುತ್ತಿದ್ದನು. ಹಝ್ರತ್ ಉಮರ್(ರ) ಅವರು ಮಾಲೀಕರಿಗೆ ಮೂರೂವರೆ ಆಣೆ ನೀಡುವ ಜವಾಬ್ದಾರಿಯನ್ನು ನೀಡಿದರು. ಇದು ಅಲ್ಪ ಮೊತ್ತದ ಹಣವಾಗಿತ್ತು, ಆದರೆ ಹಝ್ರತ್ ಉಮರ್(ರ)ರವರು ತಪ್ಪು ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಭಾವಿಸಿದನು ಮತ್ತು ಅವನ ಮನಸ್ಸಿನಲ್ಲಿ ದ್ವೇಷವು ಬೆಳೆಯಲು ಪ್ರಾರಂಭಿಸಿತು. ಒಮ್ಮೆ ಹಝ್ರತ್ ಉಮರ್ ಅವರು ನಮಗೂ ಗಿರಣಿ ಮಾಡಲು ಹೇಳಿದರು. ಅದಕ್ಕೆ ಆತನು ಚೆನ್ನಾಗಿ ಕೆಲಸ ಮಾಡುವ ಗಿರಣಿ ಮಾಡಿ ಕೊಡುತ್ತೇನೆ ಎಂದು ಹೇಳಿದನು. ಇದನ್ನು ಕೇಳಿದ ಹಝ್ರತ್ ಉಮರ್‌ಗೆ ಯಾರೋ ಹೇಳಿದರು, "ಅವನು ನಿಮಗೆ ಬೆದರಿಕೆ ಹಾಕುತ್ತಿದ್ದಾನೆ." ಇದು ಮೊದಲ ಘಟನೆಯಾಗಿತ್ತು ಇದರಿಂದ ಇದು ಆ ಘಟನೆಯೇ ಆಗಿರಬಹುದು ಎಂದಾಗುತ್ತದೆ. ಏನೇ ಇರಲಿ ಇದು ಅದೇ ಗುಲಾಮನಿಗೆ ಸೇರಿದ ಘಟನೆಯಾಗಿದೆ. ಹಝ್ರತ್ ಉಮರ್(ರ) ಹೇಳಿದರು, "ಆತನ ಪದಗಳಿಂದ ಹಾಗೇನು ಸ್ಪಷ್ಟವಾಗಿಲ್ಲ." ಮೊದಲ ವರದಿಯಲ್ಲಿ, ಹಝ್ರತ್ ಉಮರ್(ರ) ಅವರು ಬೆದರಿಕೆ ಹಾಕುತ್ತಿದ್ದಾರೆ ಎಂದು ಹೇಳಿದ್ದಾರೆ. ಕೊನೆಗೆ ಒಂದು ದಿನ ಹಝ್ರತ್ ಉಮರ್(ರ) ನಮಾಝ್ ನಿರ್ವಹಿಸುತ್ತಿದ್ದಾಗ ಈ ಗುಲಾಮ ಅವರನ್ನು ಇರಿದು ಸಾಯಿಸಿದನು." ಹಝ್ರತ್ ಮೊಸ್ಲೆಹ್ ಮೌಊದ್(ರ) ಅವರು ಬರೆಯುತ್ತಾರೆ: ಆ ಉಮರ್(ರ) ಕೋಟ್ಯಾಂತ ಮುಸ್ಲಿಮರ ನಾಯಕರಾಗಿದ್ದರು, ಬಹಳ ವಿಸ್ತಾರವಾದ ಪ್ರದೇಶದ ಅರಸರಾಗಿದ್ದರು, ಮುಸ್ಲಿಮರಿಗೆ ಉತ್ತಮ ಮಾರ್ಗದರ್ಶಕರಾಗಿದ್ದರು ಕೇವಲ ಮೂರುವರೆ ಆಣೆಗೆ ಕೊಲ್ಲಪಟ್ಟರು ಆದರೆ ನೈಜ್ಯ ಸಂಗತಿ ಏನೆ? ಯಾರ ಮನಸ್ಸಿನಲ್ಲಿ ದ್ವೇಶ ಅಸೂಯೆ ಇರುತ್ತದೆಯೋ ಅವರು ಮೂರುವರೆ ಆಣೆಯಲ್ಲ ನೋಡುವುದಿಲ್ಲ ಅವರಿಗೆ ಕೇವಲ ತಮ್ಮ ದಾಹವನ್ನು ತೀರಿಸಿಕೊಳ್ಳಬೇಕು ಎಂದಿರುತ್ತದೆ. ಅವರ ಸ್ವಭಾವವು ದುರುದ್ದೇಶಕ್ಕೆ ಮೀಸಲಾಗಿರುತ್ತದೆ. ಆ ಸಂದರ್ಭದಲ್ಲಿ, ಅವರು ನಮಗೆ ಮತ್ತು ಇತರರಿಗೆ ಪರಿಣಾಮಗಳನ್ನು ನೋಡುವುದಿಲ್ಲ. ಹಝ್ರತ್ ಉಮರ್‌ನ ಹಂತಕನನ್ನು ನೀನು ಏಕೆ ಈ ಹೇಯ ಕೃತ್ಯ ಎಸಗಿದ್ದೀಯ ಎಂದು ಕೇಳಿದಾಗ, ಅವರು ನನ್ನ ವಿರುದ್ಧ ನಿರ್ಧಾರ ಕೈಗೊಂಡಿದ್ದರು ಆದ್ದರಿಂದ ನಾನು ಅವರ ಮೇಲೆ ಸೇಡು ತೀರಿಸಿಕೊಂಡಿದ್ದೇನೆ ಎಂದು ಹೇಳಿದನು.

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ವೇದನಾಜನಕ ಘಟನೆಯನ್ನು ಪ್ರಸ್ತಾಪಿಸುತ್ತಾ ಹೇಳುತ್ತಾರೆ: ಇದರ ಪ್ರಭಾವ ಇಸ್ಲಾಮಿನ ಮೇಲೆ ಈಗಲೂ ಇದೆ. ಅದು ಹೇಗೆಂದರೆ, ಮರಣ ಯಾವಾಗಲೂ ಮನುಷ್ಯನ ಜೊತೆಗೆ ಇರುತ್ತದೆ. ಆದರೆ ದೇಹಶಕ್ತಿ ಉತ್ತಮವಾಗಿರುವಾಗ ಮರಣದ ಚಿಂತೆಯಿರುವುದಿಲ್ಲ. ಆದರೆ ತೋಳುಗಳು ಬಲಹೀನವಾಗುವಾಗ ಮತ್ತು ಆರೋಗ್ಯ ಇಳಿಮುಖವಾಗ ಮನುಷ್ಯನ ಮಿದುಳು ಸ್ವತಃ ಮುಂದಿನ ಏರ್ಪಾಡಿನ ಕುರಿತು ಯೋಚಿಸಲು ಶುರುಮಾಡುತ್ತದೆ. ಮನುಷ್ಯನು ಮತ್ತೊಬ್ಬರೊಡನೆ ಈ ಕುರಿತು ಮಾತನಾಡುವುದಿಲ್ಲ. ಆದರೆ ಸ್ವತಃ ಮುಂದಿನ ಏರ್ಪಾಡಿನ ಕುರಿತು ಯೋಚಿಸಲು ಅವನಿಗೆ ಒಲವು ಇರುತ್ತದೆ. ಈ ಕಾರಣದಿಂದ ನೇತಾರನು ಮೃತಪಡುವಾಗ ಜನರು ಜಾಗರೂಕರಾಗುತ್ತಾರೆ. ಹಝ್ರತ್ ಉಮರ್‌ರಿಗೆ(ರ) 63 ವಯಸ್ಸಾಗಿದ್ದರೂ ಅವರ ದೇಹಬಲವನ್ನು ಹೊಂದಿದ್ದರು. ಹಝ್ರತ್ ಉಮರ್(ರ) ಸಹಾಬರಿಂದ ಬೇಗನೇ ಬೇರ್ಪಡುವರು ಎಂದು ಸಹಾಬರು ಯೋಚಿಸಿರಲಿಲ್ಲ. ಆದ್ದರಿಂದ ಮುಂದಿನ ಏರ್ಪಾಡಿನ ಕುರಿತು ಅವರು ಚಿಂತಿಸಿಯೇ ಇರಲಿಲ್ಲ. ಅಚಾನಕ್ಕಾಗಿ ಹಝ್ರತ್ ಉಮರರ(ರ) ಮರಣದ ವಿಪತ್ತು ಬಂತು. ಆ ಸಮಯದಲ್ಲಿ ಮುಸ್ಲಿಮರ ಜಮಾಅತ್ ಬೇರೆ ಯಾರನ್ನೂ ಇಮಾಮನ್ನಾಗಿ ಸ್ವೀಕರಿಸಲು ತಯಾರಾಗಿರಲಿಲ್ಲ. ಮಾನಸಿಕವಾಗಿ ತಯಾರಾಗಿರದ ಕಾರಣದಿಂದ ಇರಬೇಕಾದಷ್ಟು ಬಾಂಧವ್ಯ ಮತ್ತು ಪ್ರೀತಿ ಜನರಿಗೆ ಹಝ್ರತ್ ಉಸ್ಮಾನ್‌ರೊಂದಿಗೆ(ರ) ಉಂಟಾಗಲಿಲ್ಲ. ಇದರ ಕಾರಣದಿಂದ ಇಸ್ಲಾಮಿನ ಸ್ಥಿತಿ ಬಹಳ ದುರ್ಬಲವಾಯಿತು. ಹಝ್ರತ್ ಅಲಿಯವರ(ರ) ಕಾಲದಲ್ಲಿ ಇನ್ನೂ ಹೆಚ್ಚು ದುರ್ಬಲಗೊಂಡಿತು. (ಖುತ್‌ಬಾತೆ ಮಹ್ಮೂದ್, ಸಂಪುಟ-11, ಪುಟ-240-241)

ನಂತರ ಉಂಟಾದ ಕಲಹಕ್ಕೆ ಒಂದು ಕಾರಣ ಇದೂ ಆಗಿರಬಹುದು ಎಂದು ಹಝ್ರತ್ ಮುಸ್ಲಿಹ್ ಮೌಊದ್(ರ) ಅಭಿಪ್ರಾಯಪಡುತ್ತಾರೆ.

ಕಲಹದ ಸಮಯದಲ್ಲಿ, ಕೆಲವು ಜನರು ನಮಾಝಿನ ಸ್ಥಳದಲ್ಲಿ ಕಾವಲು ಕಾಯಬೇಕು. ಇದನ್ನು ಹಝ್ರತ್ ಮೊಸ್ಲಿಹ್ ಮೌಊದ್(ರ) ಕೂಡ ಹೇಳಿದ್ದಾರೆ. ಈ ನಿಟ್ಟಿನಲ್ಲಿ ಹಝ್ರತ್ ಉಮರ್(ರ) ರವರ ಶಹಾದತ್ತಿನ ಘಟನೆಯನ್ನು ವಿವರಿಸಿದ್ದಾರೆ. ಅವರು ಹೇಳುತ್ತಾರೆ, "ಅರ್ಧದಷ್ಟು ಮುಸ್ಲಿಮರು ರಕ್ಷಣೆಗಾಗಿ ನಿಲ್ಲಬೇಕು ಎಂದು ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಆದೇಶಿಸುತ್ತದೆ, ಇದು ಯುದ್ಧದ ಸಂದರ್ಭವಾಗಿದ್ದರೂ ಒಂದು ಜಮಾಅತ್ತನ್ನು ರಕ್ಷಿಸಲು ಅಗತ್ಯವಾದಾಗ ಇದರಿಂದ ಹೀಗೂ ಸ್ಪಷ್ಟಿಸಿಕೊಳ್ಳಬಹುದು. ಸಣ್ಣ ಕಲಹಗಳನ್ನು ತಡೆಯಲು ಬನಾಝಿನ ಸಮಯದಲ್ಲಿ ನಿಂತುಕೊಂಡರೆ ಇದರಲ್ಲಿ ಯಾವುದೇ ಆಕ್ಷೇಪಾರ್ಹ ವಿಷಯವಲ್ಲ ಆದರೆ ಅದು ಅಗತ್ಯವಾಗಿರುತ್ತದೆ." ಅದನ್ನು ಹೇಗೆ ಮಾಡುವುದು? "ಯುದ್ಧದ ಸಮಯದಲ್ಲಿ ಸಾವಿರದಲ್ಲಿ ಐನೂರು ಜನರನ್ನು ರಕ್ಷಣೆಗಾಗಿ ಸಂಗ್ರಹಿಸಬಹುದಾದರೆ, ಸಣ್ಣ ಅಪಾಯದ ಸಮಯದಲ್ಲಿ ಹತ್ತು ಸಾವಿರ ಜನರಲ್ಲಿ ಐದು ಅಥವಾ ಹತ್ತು ಜನರನ್ನು ರಕ್ಷಣೆಗಾಗಿ ಬೆಳೆಸಲಾಗುವುದಿಲ್ಲವೇ?" ಅಪಾಯವು ಅನಿಶ್ಚಿತವಾಗಿರುತ್ತದೆ ಎಂದು ಹೇಳುವುದು ಅಸಂಬದ್ಧವಾಗಿದೆ. ಹಝ್ರತ್ ಉಮರ್(ರ) ಅವರೊಂದಿಗೆ ಏನಾಯಿತು? ಅವರು ನಮಾಝ್ ನಿರ್ವಹಿಸುತ್ತಿದ್ದರು. ಮುಸಲ್ಮಾನರೂ ಸಹ ನಮಾಝಿನಲ್ಲಿ ನಿರತರಾಗಿದ್ದಾಗ ಒಬ್ಬ ರಾಕ್ಷಸನು ಆಕ್ರಮಣ ಮಾಡುವ ಸಮಯ ಎಂದು ಭಾವಿಸಿದನು, ಅವನು ಮುಂದೆ ಹೆಜ್ಜೆ ಹಾಕಿ ಅವರನ್ನು ಇರಿದನು. ಈ ಘಟನೆಯ ನಂತರವೂ, ಒಬ್ಬ ವ್ಯಕ್ತಿಯು ನಮಾಝಿನ ಸಮಯದಲ್ಲಿ ಕಾವಲು ಕಾಯುವುದು ಅವನ ತತ್ವ ಅಥವಾ ಘನತೆಗೆ ವಿರುದ್ಧವಾಗಿದೆ ಎಂದು ಹೇಳಿದರೆ ಇದು ಆತನ ಮೂರ್ಖತನಕ್ಕೆ ಸಾಕ್ಷಿಯಾಗುವುದು. ಇದಕ್ಕೆ ಒಂದು ಉದಾಹರಣೆಯೆಂದರೆ ಓರ್ವ ಮೂರ್ಖ ಯುದ್ಧದಲ್ಲಿ ಸೇರಿಕೊಂಡನು ಆತನಿಗೆ ಒಂದು ಬಾಣ ತಾಗಿ ರಕ್ತ ಹರಿಯಲು ಪ್ರಾರಂಭವಾಯಿತು ಆತನು ಅಲ್ಲಿಂದ ರಕ್ತವನ್ನು ವರೆಸಿಕೊಂಡು ಓಡುತ್ತಾ ಓ ಅಲ್ಲಾಹನೇ ಇದು ಕನಸ್ಸಾಗಲಿ, ಬಾಣ ನನಗೆ ಹೊಡೆದದ್ದು ನಿಜವಾಗದಿರಲಿ.... ಎಂಬುವವನ ಸ್ಥಿತಿಯಾಗಿದೆ. ಇತಿಹಾಸದಿಂದ ತಿಳಿದು ಬರುವುದೇನಂದರೆ ಒಂದು ಸಂದರ್ಭದಲ್ಲಿ ಸಹಾಬರವರು ತಮ್ಮ ರಕ್ಷಣೆಗಾಗಿ ಕಾವಲ ಇರಿಸದಿದ್ದ ಕಾರಣದಿಂದ ಅವರಿಗೆ ಬಹಳ ಹಾನಿ ಉಂಟಾಯಿತು. ಹೀಗೆ ಒಮ್ಮೆ ಹಝ್ರತ್ ಅಮ್ರ್ ಬಿನ್ ಅಲ್-ಆಸ್ ಈಜಿಪ್ಟ್ ವಿಜಯಕ್ಕಾಗಿ ಹೋದಾಗ ಮತ್ತು ಅವರು ಪ್ರದೇಶವನ್ನು ವಿಜಯಗೊಳಿಸಿದ ನಂತರ ಅವರು ನಮಾಝ್ ನಿರ್ವಹಿಸುವಾಗ, ಅವರು ಕಾವಲುಗಾರನನ್ನು ವ್ಯವಸ್ಥೆಗೊಳಿಸಲಿಲ್ಲ. ಈ ಪರಿಸ್ಥಿತಿಯ ಬಗ್ಗೆ ಮುಸ್ಲಿಮರು ಸಂಪೂರ್ಣವಾಗಿ ತಿಳಿದಿರಲಿಲ್ಲ ಎಂದು ಶತ್ರುಗಳು ನೋಡಿದಾಗ, ಅವರು ಒಂದು ದಿನವನ್ನು ನಿಗದಿಪಡಿಸಿದರು ಮತ್ತು ಆ ಸಮಯದಲ್ಲಿ ಕೆಲವು ನೂರು ಶಸ್ತ್ರಸಜ್ಜಿತ ಜನರನ್ನು ಕಳುಹಿಸಿದರು. ಮುಸ್ಲಿಮರು ಸಜದದಲ್ಲಿದ್ದಾಗ ಅವರು ಕತ್ತಿಗಳಿಂದ ಮುಸ್ಲಿಮರ ತಲೆಗಳನ್ನು ಕತ್ತರಿಸಲು ಪ್ರಾರಂಭಿಸಿದರು. ಆ ದಿನ ನೂರಾರು ಸಹಾಬರವರು ಕೊಲ್ಲಲ್ಪಟ್ಟರು ಅಥವಾ ಗಾಯಗೊಂಡರು ಎಂದು ಇತಿಹಾಸ ತೋರಿಸುತ್ತದೆ. ಒಬ್ಬರ ನಂತರ ಒಬ್ಬರು ತಲೆಗಳು ನೆಲಕ್ಕೆ ಬಿದ್ದವು ಮತ್ತು ಇನ್ನೊಂದರ ನಂತರ ಮೂರನೆಯವರ ತಲೆ ಮತ್ತು ಅವನ ಸಹಚರರು ಏನಾಗುತ್ತಿದೆ ಎಂದು ಅವರಿಗೆ ತಿಳಿಯಲಿಲ್ಲ ಹೀಗೆ ಅವರ ಸೈನ್ಯಕ್ಕೆ ತೀವ್ರವಾದ ಹಾನಿ ಉಂಟಾಯಿತು. ಹಝ್ರತ್ ಉಮರ್(ರ) ಅವರಿಗೆ ವಿಷಯ ತಿಳಿದಾಗ, ಅವರು ಅವರನ್ನು ತೀವ್ರವಾಗಿ ಖಂಡಿಸಿದರು ಮತ್ತು ನಿಮಗೆ ಕಾವಲು ಇರಿಸಬೇಕು ಎಂದು ಅರಿವಿರಲಿಲ್ಲವೇ ಎಂದು ಪ್ರಶ್ನಿಸಿದರು. ಈ ಘಟನೆಯ ನಂತರ, ಸಹಾಬರವರು ನಮಾಝ್ ನಿರ್ವಹಿಸುವಾಗ

ಯಾವಾಗಲೂ ಕಾವಲುಗಾರರಾಗಿರಲು ವ್ಯವಸ್ಥೆ ಮಾಡಿದರು.
(ಖುತ್‌ಬಾತ್ ಮಹಮೂದ್, ಸಂಪುಟ-16, ಪುಟಗಳು 68-69)

ಹಝ್ರತ್ ಉಮರ್(ರ) ಅವರ ಸಾಲವನ್ನು ಈಗಾಗಲೇ ಉಲ್ಲೇಖಿಸಲಾಗಿದೆ. ಹಝ್ರತ್ ಉಮರ್(ರ) ಇದರ ಬಗ್ಗೆ ಕೇಳಿದರು ಮತ್ತು ತಮ್ಮ ಮಗನಿಗೆ ಹೇಳಿದರು. ಅವರು ತಮ್ಮ ಮಗನಿಗೆ ಹೇಳಿದರು ಅಬ್ದುಲ್ಲಾ ಬಿನ್ ಉಮರ್, ನಾನು ಎಷ್ಟು ಸಾಲವನ್ನು ಹೊಂದಿದ್ದೇನೆ ನೋಡು. ಎಂಭತ್ತಾರು ಸಾವಿರ ದಿರ್ಹಮ್ ಹೊರಬಂದಿದೆ ಎಂದು ಅವರು ಲೆಕ್ಕ ಹಾಕಿದರು. ಅದಕ್ಕೆ ಅವರು ಹೇಳಿದರು: ಓ ಅಬ್ದುಲ್ಲಾ! ಉಮರ್(ರ) ಅವರ ಕುಟುಂಬದ ಸಂಪತ್ತು ಅವರಿಗೆ ಸಾಕಾಗಿದ್ದರೆ, ಅವರ ಸಂಪತ್ತಿನಿಂದ ನನ್ನ ಈ ಸಾಲವನ್ನು ತೀರಿಸಿ. ಅವರ ಸಂಪತ್ತು ಸಾಕಾಗದಿದ್ದರೆ, ಬನು ಆದಿ ಬಿನ್ ಕಅಬ್ ಅವರನ್ನು ಕೇಳಿ. ಅದು ಸಾಕಾಗದಿದ್ದರೆ, ಖುರೈಷಿಗಳನ್ನು ಕೇಳಿ ಮತ್ತು ಅವರನ್ನು ಹೊರತುಪಡಿಸಿ ಯಾರಿಗೂ ಕೇಳಬೇಡಿ.
(ಅಲ್-ತಬ್ಕತ್ ಅಲ್-ಕುಬ್ರಾ, ಸಂಪುಟ-3, ಪುಟ-257, ದಾರ್ ಅಲ್-ಕಿತಾಬ್ ಅಲ್-ಇಲಮಿಯಾ)

ಸರಳ ಜೀವನ ನಡೆಸುತ್ತಿದ್ದ ನಮ್ಮ ಇಮಾಮ್ ತನಗೆ ಇಷ್ಟು ದುಡ್ಡು ಖರ್ಚು ಮಾಡಲು ಹೋಗುವುದಿಲ್ಲ ಎಂದು ಸಹಾಬಿಗಳಿಗೆ ತಿಳಿದಿತ್ತು. ನಿರ್ಗತಿಕರಿಗೆ ಹಾಗೂ ಬಡವರಿಗಾಗಿ ಅವರು ತುಂಬಾ ಹಣವನ್ನು ಖರ್ಚು ಮಾಡಿದ್ದಾರೆ ಎಂದು ಅವರು ತಿಳಿದಿದ್ದರು. ಆದ್ದರಿಂದ, 'ಅಬ್ದ್ ಅಲ್-ರಹಮಾನ್ ಇಬ್ನ್' ಔಫ್ ಉಮರ್‌ಗೆ ಹೇಳಿದರು, "ನೀವು ಬೈತುಲ್ ಮಾಲ್ ಖಜಾನೆಯಿಂದ ಸಾಲವನ್ನು ತೆಗೆದುಕೊಂಡು ಈ ಸಾಲವನ್ನು ಏಕೆ ಮರುಪಾವತಿ ಮಾಡಬಾರದು?" ಹಝ್ರತ್ ಉಮರ್(ರ) ಹೇಳಿದರು: ನಾವು ಉಮರ್‌ಗಾಗಿ ನಮ್ಮ ಪಾಲನ್ನು ಬಿಟ್ಟಿದ್ದೇವೆ ಎಂದು ನೀವು ಮತ್ತು ನಿಮ್ಮ ಸಹಚರರು ನನ್ನ ನಂತರ ಹೇಳಬೇಕೆಂದು ನೀವು ಬಯಸುತ್ತೀರಾ? ನೀನೀಗ ನನಗೆ ಸಾಂತ್ವನ ಹೇಳುತ್ತಿದ್ದೀಯ ಆದರೆ ಅಂತಹ ವಿಪತ್ತು ನನಗೆ ಬಂದರೆ ಅದನ್ನು ಜಯಿಸದೆ ನನಗೆ ಮೋಕ್ಷದ ಮಾರ್ಗವಿಲ್ಲ. ಆಗ ಹಝ್ರತ್ ಉಮರ್(ರ) ತಮ್ಮ ಮಗ ಅಬ್ದುಲ್ಲಾ ಬಿನ್ ಉಮರ್ ಅವರಿಗೆ ಹೇಳಿದರು. ನನ್ನ ಸಾಲವನ್ನು ಸ್ವೀಕರಿಸು. ಹಾಗಾಗಿ ಅವರು ಜವಾಬ್ದಾರಿಯನ್ನು ಸ್ವೀಕರಿಸಿದರು. ಹಝ್ರತ್ ಉಮರ್(ರ) ಅವರಿಗೆ ಇನ್ನೂ ದಫನ್ ಮಾಡುವುದಕ್ಕೆ ಮುಂಚೆ ಅವರ ಮಗ ಹಝ್ರತ್ ಉಮರ್(ರ)ರವರು ಸಾಲದ ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ ಎಂಬ ಭರವಸೆಗೆ ಶೂರಾ ಸದಸ್ಯರನ್ನು ಮತ್ತು ಕೆಲವು ಅನ್ಸಾರಿಯರನ್ನು ಸಾಕ್ಷಿಯಾಗಿ ಕರೆಸಿದ್ದರು. ಹಝ್ರತ್ ಉಮರ್(ರ)ರವರ ದಫ್ಫೀನ್ ಮಾಡಿ ಒಂದು ಜುಮ್ಮ ಕಳೆದಿರಲಿಲ್ಲ ಆಗ ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) ಸಾಲದ ಮೊತ್ತವನ್ನು ತಂದು ಹಝ್ರತ್ ಉಸ್ಮಾನ್(ರ)ರವರ ಸನ್ನಿಧಿಗೆ ಬಂದು ಕೆಲವು ಸಾಕ್ಷ್ಯಗಳ ಮುಂದೆ ಅದನ್ನು ನೀಡಿದರು.
(ಅತ್ತಬಖಾತುಲ್ ಕುಬ್ರ, ಸಂಪುಟ-3, ಪುಟ-273, ದಾರುಲ್ ಕುತುಬ್ ಇಲ್‌ಮಿಯ)

ಸಾಲವನ್ನು ತೀರಿಸುವ ಬಗ್ಗೆ ಇನ್ನೊಂದು ವರದಿ ಹೀಗಿದೆ. ಕಿತಾಬುಲ್ ವಫಾದಲ್ಲಿ ಹಝ್ರತ್ ಇಬ್ನು ಉಮರ್‌ರಿಂದ ಹೀಗೆ ವರದಿಯಾಗಿದೆ: ಸಾಲಗಳನ್ನು ತೀರಿಸಲು ತನ್ನ ಮನೆಯನ್ನು ಮಾರಾಟ ಮಾಡಲು ಹಾಗೂ ಬನೂಅದ್ದಿ ಮತ್ತು ಖುರೈಶಿಗಳೊಡನೆ ಅಲ್ಲದೇ ಬೇರೆ ಯಾರಿಂದಲೂ ಈ ಸಂಬಂಧವಾಗಿ ಸಹಾಯ ಪಡೆಯದಿರಲು ಹಝ್ರತ್ ಅಬ್ದುಲ್ಲಾಹ್(ರ) ಮತ್ತು ಹಝ್ರತ್ ಹಫ್‌ಸರೊಡನೆ(ರ) ಹಝ್ರತ್ ಉಮರ್(ರ) ಆದೇಶಿಸಿದರು. ಹಝ್ರತ್ ಹಝ್ರತ್ ಮುಆವಿಯರಿಗೆ(ರ) ಆ ಮನೆಯನ್ನು ಮಾರಾಟ ಮಾಡಿ ಅಬ್ದುಲ್ಲಾಹ್ ಬಿನ್ ಉಮರ್(ರ) ಸಾಲವನ್ನು ತೀರಿಸಿದರು. ಆ ಮನೆಯನ್ನು **ದಾರುಲ್‌ಖುಝಾಇ ದೈನಿ ಉಮರ್** ಎಂದು ಕರೆಯಲಾಯಿತು. ಎಂದರೆ, ಹಝ್ರತ್ ಉಮರರ(ರ) ಸಾಲವನ್ನು ತೀರಿಸಲು ಮಾರಾಟ ಮಾಡಲಾದ ಮನೆ. (ವಫಾಉಲ್ ವಫಾ, ಸಂಪುಟ-1, ಭಾಗ-2, ಪುಟ-222)

ಇವರ ಪ್ರಸ್ತಾಪ ಮುಂದುವರೆಯುವುದು ಇನ್‌ಶಾ ಅಲ್ಲಾಹ್.

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಈ ಮಾತು ಇತ್ತು. ಆಥಮನನ್ನು ಕ್ರೈಸ್ತರು ಒಂದು ವೇಳೆ ಛಿದ್ರ ಛಿದ್ರ ಮಾಡಿದರು. ಕೋಯ್ದುಬಿಟ್ಟರು ಆಗಲೂ ಅವರು ಆಣೆವಹಿಸಲಾರರು. ಅಂದಹಾಗೆ ಆಥಮನು ಸತ್ಯದಿಂದ ಮುಖ ತಿರುಗಿಸಿದನು. ಸತ್ಯ ಪ್ರಕಟಿಸ ಬಯಸಲಿಲ್ಲ. ಅಂತೆಯೇ ಅಲ್ಲಾಹನು ತನ್ನ ವಾಗ್ದಾನದನ್ವಯ ಅವನ ಅಸ್ತಿತ್ವವನ್ನು ಅವನ ಸಹಧರ್ಮೀಯರ ದೃಷ್ಟಿಯಿಂದಲೇ ಮಾಯವಾಗಿಸಿದನು. ಅವನ ವಾಗ್ದಾನದಂತೆಯೇ ಪ್ರಕಟವಾಯಿತು. 30 ಡಿಸೆಂಬರ್ 1895 ರವರೆಗೆ ನಮ್ಮ ಕಡೆಯಿಂದ ಅವನಿಗೆ ಸಂದೇಶ ತಲುಪಿಸಲಾಗುತ್ತಿತ್ತು. ಬಹುಶಃ ಅವನು ಅಲ್ಲಾಹನಿಂದ ಭಯಪಟ್ಟು ಸತ್ಯವನ್ನು ನುಡಿಯಬಹುದೆಂದು. ಮತ್ತೆ ನಾವು ಪ್ರಚಾರವನ್ನು ನಿಲ್ಲಿಸಿದೆವು. ಮತ್ತು ಅಲ್ಲಾಹನ ವಾಗ್ದಾನದ ನಿರೀಕ್ಷೆಯಲ್ಲಿದ್ದೆವು. ಅಂದಹಾಗೆ ಆಥಮ್ ಸಾಹಿಬ್ 30 ಡಿಸೆಂಬರ್ 1895 ರಂದು ಇನ್ನು ಏಳು ತಿಂಗಳು ಮುಗಿದಿರಲಿಲ್ಲ. ಗೋರಿಗೆ ತಲುಪಿದನು. (ಅಂಜಾಮ್ ಆಥಮ್, ರೂಹಾನಿ ಖಝಾಇನ್, ಸಂಪುಟ-11, ಪುಟ-3)

**ಆಥಮ್‌ನ ಮರಣವು ಭವಿಷ್ಯವಾಣಿಗಳ ನುಡಿಗಳ ಫಲವೇ ಆಗಿದ್ದವು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಆಥಮನ ಈ ಮರಣವು ಸಾಧಾರಣ ವಿಷಯವಾಗಿರಲಿಲ್ಲ. ಆ ಪೈಕಿ ಪ್ರಬಲ ಸಾಕ್ಷ್ಯದಾರಗಳು ನಮ್ಮ ಕೈಯಲ್ಲಿವೆ. ಆಥಮನ ವಯಸ್ಸು ಸುಮಾರು ನನ್ನಷ್ಟೇ ಇತ್ತು. ನನಗೆ ಹಲವು ರೋಗಗಳು ಅಂಟಿಕೊಂಡಿವೆ, ತಲೆನೋವಿನ ರೋಗ ನನಗೆ ಸುಮಾರು 30 ವರ್ಷಗಳಿಂದಿತ್ತು. ಆದರೆ ಆಥಮನು ಒಬ್ಬ ಸಾಕಿದ ಎತ್ತಿನ ರೀತಿಯಲ್ಲಿ ಕೊಟ್ಟಿದ್ದ ಹಗಲಿರುಳು ಸರಾಯಿ ಕುಡಿಯುವುದು ಮತ್ತು ಉತ್ತಮ ಆಹಾರ ಸೇವನೆಗಿಂತ ಯಾವ ಕೆಲಸವಿರಲಿಲ್ಲ. ಅಂದಹಾಗೆ ಅವನ ಮರಣ ಈ ಭವಿಷ್ಯವಾಣಿಗಳ ಅವತರಣವಾಗಿದೆ. (ಅದೇ ಪುಟ 7, ಟಿಪ್ಪಣಿ)

**ಭವಿಷ್ಯವಾಣಿ ಎರಡು ರೀತಿಯಲ್ಲಿ ಪೂರ್ಣಗೊಂಡಿದೆ.**

**ಅಲ್ಲಾಹನು ಆ ಮೂಲಕ ತನ್ನ ಸೌಂದರ್ಯ ಹಾಗೂ ಪ್ರತಾಪಶಾಲಿ ಎರಡೂ ಗುಣಗಳನ್ನು ತೋರ್ಪಡಿಸಿದನು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಈ ಭವಿಷ್ಯವಾಣಿ ಎರಡು ರೀತಿಯಲ್ಲಿ ಎರಡು ವಿಧದಲ್ಲೂ ಪೂರ್ಣಗೊಂಡಿದೆ. ಮೊದಲನೆಯದಾಗಿ ಆಥಮನ ದುಃಖ ದುಮ್ಮಾನ ಕಾರಣಗಳಿಂದಾಗಿ ಹೇಗೆ ಪೂರ್ಣಗೊಂಡಿದೆ ಎಂದರೆ ಭವಿಷ್ಯವಾಣಿಯ ಶರತ್ತಿನ ಪ್ರಕಾರ ಅವನ ಮರಣದಲ್ಲಿ ತಡೆ ಉಂಟಾಯಿತು. ಮತ್ತೆ ಆಥಮನ ಉದ್ಧಟತನದಿಂದಾಗಿ ಮತ್ತು ಸತ್ಯ ತಿರಸ್ಕಾರದಿಂದಾಗಿ ಯಾವ ರೀತಿ ಪೂರ್ಣಗೊಂಡಿದೆ ಎಂದರೆ ಅಲ್ಲಾಹನು ತನ್ನ ವಾಗ್ದಾನದಂತೆ ಅವನಿಗೆ ಮರಣವನ್ನು ನೀಡಿದನು. ಹೀಗೆ ಈ ಪವಿತ್ರ ಭವಿಷ್ಯವಾಣಿಯಲ್ಲಿ ಅಲ್ಲಾಹನು ತನ್ನ ಗುಣಗಳಾದ ಸೌಂದರ್ಯ ಮತ್ತು ಪ್ರತಾಪ ಎರಡನ್ನೂ ವ್ಯಕ್ತಪಡಿಸಿದನು. ಅಲ್ಪಬುದ್ಧಿಯವರಾದ ಕ್ರೈಸ್ತರು ಮತ್ತು ನಾಲಾಯಕ್ ಮೌಲ್ವಿಗಳಿಗೆ ಅಪಮಾನದ ಮೇಲೆ ಅಪಮಾನ ಉಂಟಾಯಿತು. ಇಸ್ಲಾಮಿನ ಹೆಸರು ಉತ್ತುಂಗಕ್ಕೆ ಏರಿತು. ಶವಾರಾಧಕ ಪಾದರಿಗಳು ಮತ್ತು ಕಪಟ ಯಹೂದಿ ಗುಣವುಳ್ಳ ಮೌಲ್ವಿಗಳು ಘೋರ ರೀತಿಯ ಅಪಮಾನಕ್ಕೆ ಒಳಗಾದರು. ಈಗಲೂ ಅವರು ಸತ್ಯದೆಡೆ ಮರಳಬಾರದೆ, ಇಲ್ಲ ಖಂಡಿತ ಇಲ್ಲ. (ಅದೇ ಪುಟ 23 ಟಿಪ್ಪಣಿ)

**ಎರಡು ಸಾವಿರ ರೂಪಾಯಿಗಳ ವೈಭವಯುತ ಬಹುಮಾನದ ಪಂಥಾಹ್ವಾನ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಗ್ರಂಥ ಅನ್ವಾರುಲ್ ಇಸ್ಲಾಂ, ಝಿಯಾಉಲ್ ಹಖ್, ರೂ. ಖ ಸಂ 9 ರಲ್ಲಿ ಈ ಭವಿಷ್ಯವಾಣಿಯ ಸತ್ಯತೆಯನ್ನು ಹಗಲಿನ ರೀತಿ ಉಜ್ವಲಪಡಿಸಿದರು. ಆಥಮನ ಸತ್ಯದೆಡೆ ರುಜುವಾದ ಕುರಿತು ಕೂಲಂಕುಶವಾಗಿ ಚರ್ಚೆ ಮಾಡಿದ್ದಾರೆ. ಭವಿಷ್ಯವಾಣಿಯ ಮೇಲೆ ಬಂದ ಆರೋಪಗಳಿಗೆ ಉತ್ತರವನ್ನು ನೀಡಿದ್ದಾರೆ, ಯಾರೇ ಆಗಲಿ ಈ ಎರಡು ಗ್ರಂಥಗಳ ಅಧ್ಯಯನ ಮಾಡಿದರೆ, ಅವರಿಗೆ ಈ ಭವಿಷ್ಯವಾಣಿಯ ಸತ್ಯತೆ ದೃಢಪಡುವುದು, ಈ ಭವಿಷ್ಯವಾಣಿಯ ಗೌರವ ಘನತೆಯು ಅವರ ಮೇಲೆ ಪ್ರಕಟವಾಗುವುದು. ಏಕೆಂದರೆ ಹಿಂದಿನ ಹತ್ತು ಸಂಚಿಕೆಗಳಲ್ಲಿ (ಏಪ್ರಿಲ್ ಒಂದರಿಂದ ಜೂನ್ 3 ರವರೆಗೆ) ಈ ವಿಷಯದ ವಿವರಗಳು ಲಭ್ಯವಿದೆ. ಆದುದರಿಂದ ಇಲ್ಲಿ ಇನ್ನೂ ಹೆಚ್ಚು ಬರೆಯದೇ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಬಹುಮಾನದ ಪಂಥಾಹ್ವಾನ ಪ್ರಸ್ತುತಪಡಿಸುತ್ತಿದ್ದೇವೆ. ಅವರು ನುಡಿದರು.

ಈಗಲೂ ಕ್ರೈಸ್ತರು ಒಪ್ಪದಿದ್ದರೆ ಅವರು ನಮ್ಮೊಡನೆ ಸೇರಿ ಮುಬಾಹಲ ಮಾಡಲು ಮೈದಾನಕ್ಕೆ ಬರುವುದು ಉತ್ತಮ. ಅಲ್ಲಾಹನಿಂದ ನ್ಯಾಯ ಯಾಚಿಸಬಹುದು. ಎದುರಾಳಿ ಪಕ್ಷದೊಡನೆ ಸ್ಪರ್ಧಿಸದೇ ಶಾಪ ಹಾಕುವುದು ಯಾವ ಧರ್ಮದಲ್ಲೂ ಸಮ್ಮತವಲ್ಲ, ನಮ್ಮಲ್ಲಿ ಆಗಲಿ ಕ್ರೈಸ್ತರಲ್ಲಾಗಲಿ, ಯಹೂದ್ಯರಲ್ಲಾಗಲಿ. ಅದೇ ಕಾರಣದಿಂದ ಪಾದರಿ ಬಾಯಿಟ್ ಬರಾಕ್ ಶಿಮ್ಲಾ ಹೋಗುವುದಕ್ಕಿಂತ ಕೆಲ ಅವಧಿ ಮುಂಚೆಯೇ ತನ್ನ ಕೆಲ ಸಂಗಡಿಗೊಂದಿಗೆ ಖಾದಿಯಾನಿನಲ್ಲಿ ನನ್ನ ಬಳಿಗೆ ಬಂದರು ಮತ್ತು ನನ್ನೊಡನೆ ಹೇಳಿದರು ಆಥಮನು ಸಾಯಲಿಲ್ಲ. ನಾನು ಹೇಳಿದೆ. ಅವನು ಇಸ್ಲಾಮಿ ಭವಿಷ್ಯವಾಣಿಯಿಂದ ಭಯಗೊಂಡು ಭವಿಷ್ಯವಾಣಿಯ ಶರತ್ತಿನಿಂದ ಪ್ರಯೋಜನ ಪಡೆದಿದ್ದಾನೆ. ಸ್ವಯಂ ಅವನೇ ಒಪ್ಪಿಕೊಂಡಿದ್ದಾನೆ ನಾನು ಭಯಭೀತನಾಗಿದ್ದೆ ಮತ್ತು ಆ ಆಕ್ರಮಣಗಳಿಗೆ ಸಾಕ್ಷ್ಯ ನೀಡಲಾಗಿಲ್ಲ. ಅದೇ ಭಯಕ್ಕೆ ಕಾರಣವಾಯಿತು. ವಾಯಿಟನು ಹೇಳಿದನು. "ಲಾನತುಲ್ ಅಲಲ್ ಕಾಝಿಬೀನ್" ಸುಳ್ಳುಗಾರರ ಮೇಲೆ ಶಾಪವಿರಲಿ. ನಾನು ಹೇಳಿದೆನು. ನಿಸ್ಸಂಶಯವಾಗಿಯೂ ಸುಳ್ಳುಗಾರರ ಮೇಲೆ ಶಾಪ ಎರಗಿಬರುವುದು. ಆಥಮನು ಸುಳ್ಳುಗಾರ ಅಥವಾ ನಾನಾ ಎಂದು ಅಲ್ಲಾಹನು ತೀರ್ಪು ನೀಡುವನು. ಅಂದಹಾಗೆ ಕೆಲ ಅವಧಿಯಲ್ಲಿಯೇ 7 ಈ ಶಾಪದ ಪರಿಣಾಮ ಆಥಮನ ಮೇಲಾಯಿತು. ನಾಲ್ಕು ದಿನದವರೆಗೆ

ಘೋರ ಜೀವಹಾನಿಯ ಸಂಕಟ ಅನುಭವಿಸಿ ಶಾಶ್ವತವಾದ ಶಿಕ್ಷಾರೂಪದ ಸೆರೆವಾಸ ಅನುಭವಿಸಿದರು. ಪಾದರಿ ವಾಯಿಟ್‌ಬರ್‌ನಿಗೆ ದೇವಭಯವಿದ್ದರೆ ತಿಳಿಯಬಹುದು. ನಮ್ಮಿಬ್ಬರಲ್ಲಿ ಅಂದರೆ ಆಥಮ ಮತ್ತು ನಾನು ಇಬ್ಬರಲ್ಲಿ ಯಾರು ಶಾಪಗ್ರಸ್ತನಾಗಿದ್ದರು?

ಈಗ ಈ ಘಟನೆ ಬರೆಯಲು ಕಾರಣವೆಂದರೆ ಪಾದರಿ ವಾಯಿಟ್ ಖರೀಖ್ತನು ಸಹ ಸುಳ್ಳುಗಾರನ ಮೇಲೆ ಶಾಪವನ್ನು ಬಯಸಿದ್ದನು. ಅಂದಹಾಗೆ ಆಥಮನು ಸುಳ್ಳುಗಾರನಾದ ಕಾರಣ ಅವನ ಮೇಲೆ ಶಾಪ ಎರಗಿತು. ಆದುದರಿಂದ ನಾನು ಹೇಳುವೆನು. ಆಥಮನ ವಿಷಯದಲ್ಲಿ ಯಾವ ಪಾದರಿಗೆ ಆಗಲಿ ಅಥವಾ ಇನ್ನಾರೋ ಕ್ರೈಸ್ತನೊಬ್ಬನಿಗೆ ಸಂಶಯವಿದ್ದರೆ ಮತ್ತು ಭವಿಷ್ಯವಾಣಿ ಪೂರ್ಣಗೊಂಡಿಲ್ಲ ಎಂಬ ಭಾವನೆ ಇದ್ದರೆ ನನ್ನೊಡನೆ ಮುಬಾಹಲ ಮಾಡಿಕೊಳ್ಳುವುದು ಅನಿವಾರ್ಯವಾಗಿರುತ್ತದೆ.

ವಿರೋಧಿಗಳ ಮೇಲೆ ಶಾಪದ ಕುರಿತು ಸ್ವಯಂ ಯೇಸು ಹೇಳಿದರು. ಯಹೂದಿಯರ ಮೇಲೆ ದುಃಖಗಳು ಬರಲು ಯೇಸುವಿನ ಗ್ರಂಥದಲ್ಲಿ ಬರುತ್ತದೆ. ದುಃಖಗಳು ಮತ್ತು ಶಾಪ ಒಂದೇ ಆಗಿದೆ. ಯೇಸು ವಿರೋಧಿಗಳಿಗಾಗಿ ಶಿಕ್ಷೆಯ ಭವಿಷ್ಯವಾಣಿಯ ನುಡಿದಿದ್ದರು. ಹೀಗಿರುವಾಗ ಕ್ರೈಸ್ತರ ಗುರುಗಳಾದವರು ಬಳಸಿದ ಪದಗಳ ಮೇಲೆ ಆಕ್ಷೇಪ ಎತ್ತುವುದು ಅತ್ಯಂತ ಗಂಭೀರ ಅಪಮಾನವಾಗಿದೆ. ಅದಾಗ್ಯೂ ಶಾಪದ ಬಳಸಲು ಇಚ್ಛಿಸದಿದ್ದರೆ ಶಿಕ್ಷೆ ಅಥವಾ ಪರಿಹಾರದ ಪದಗಳನ್ನು ಬಳಸಬಹುದಾಗಿದೆ ಒಂದು ವರ್ಷ ತನಕ ಇಂತಹ ಮನುಷ್ಯನು, ಅವನು ಮುಬಾಹಲದ ಮೈದಾನದಲ್ಲಿ ಬಂದರೆ ದೈವಿಕ ಪ್ರತಾಪದಿಂದ ಶಿಕ್ಷೆ ಉಂಟಾಗದಿದ್ದರೆ ನಾನು ಬರೆದುಕೊಡುವೆನು. ನಿಸ್ಸಂಶಯವಾಗಿಯೂ ನನ್ನ ಭವಿಷ್ಯವಾಣಿ ಸುಳ್ಳಾಗಿದೆ, ಯಾರೂ ಸಹ ನನ್ನ ಎದುರಿಗೆ ಬಾರದಿದ್ದಲ್ಲಿ ಪ್ರೇಕ್ಷಕರು ತಿಳಿದುಕೊಳ್ಳಲಿ, ಕ್ರೈಸ್ತರೆಡೆ ಸತ್ಯ ಇಲ್ಲದ ಕಾರಣ ಪಲಾಯನ ಮಾಡಿದ್ದಾರೆ.

ಅದನ್ನು ಉಚಿತ ಎನ್ನಲು ಇನ್ನೊಂದು ಕಾರಣ ಕ್ರೈಸ್ತರಲ್ಲಿ ಧಾರ್ಮಿಕ ದ್ವೇಷ ತಾರಕಕ್ಕೆ ಏರಿದೆ. ಆದುದರಿಂದ ಈ ದಿನನಿತ್ಯದ ಜಗಳ ನಿವಾರಿಸಲು ಇಸ್ಲಾಂ ಮತ್ತು ಕ್ರೈಸ್ತರ ಮುಬಾಹಲ ನನ್ನೊಡನೆ ಮಾಡಿಕೊಳ್ಳಲಿ. ಕ್ರೈಸ್ತರು ಶಾಪ (ಲಅನತ್) ಪದದಿಂದ ದ್ವೇಷ ಉಳ್ಳವರಾದರೆ ಆ ಪದವನ್ನು ಬಿಟ್ಟುಬಿಡಿರಿ. ಅಲ್ಲದೇ ಉಭಯ ಪಕ್ಷಗಳು ಹೀಗೆ ಪ್ರಾರ್ಥಿಸಲಿ. ಓ ಜಗತ್ಪಾಲಕನೇ ಇಸ್ಲಾಂ ಶಿಕ್ಷಣ ನೀಡುವುದೇನೆಂದರೆ ತ್ರಿತ್ವ ಅಪ್ಪಟ ಮಿಥ್ಯವಾಗಿದೆ ಮತ್ತು ಶೈತಾನನ ವಿಧಾನವಾಗಿದೆ ಮರಿಯಮನ ಪುತ್ರ ಖಂಡಿತವಾಗಿಯೂ ದೇವಪುತ್ರನಲ್ಲ. ಬದಲು ಒಬ್ಬ ಮನುಷ್ಯನು ಮತ್ತು ಪ್ರವಾದಿ ಹಾಗೂ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಅಲ್ಲಾಹನ ಸತ್ಯ ಪ್ರವಾದಿ ಮಾರ್ಗದರ್ಶಕರು ಹಾಗೂ ಖಾತಮುಲ್ ಅಂಬಿಯಾ ಆಗಿದ್ದರು. ಪವಿತ್ರ ಖುರ್‌ಆನ್‌ನ ಅಲ್ಲಾಹನ ಗ್ರಂಥವಾಗಿದೆ ಅದು ಎಲ್ಲ ನ್ಯೂನತೆಗಳಿಂದಲೂ ದುರ್ಮಾರ್ಗಗಳಿಂದಲೂ ಪವಿತ್ರವಾಗಿದೆ. ಕ್ರೈಸ್ತರು ಪ್ರಸ್ತುತಪಡಿಸುವ ಶಿಕ್ಷಣವೆಂದರೆ ಮರಿಯಮ್ಮನ ಪುತ್ರ ಯೇಸುವೇ ವಾಸ್ತವದಲ್ಲಿ ದೇವನಾಗಿದ್ದ ಭೂಮ್ಯಾಕಾಶ ಸೃಷ್ಟಿಸಿದವನೂ ಅವನೇ ಆಗಿದ್ದ. ಅವನ ರಕ್ತದಿಂದಲೇ ಮುಕ್ತಿ ದೊರೆಯಿತು. ದೇವನು ಮೂರು ಅಸ್ತಿತ್ವ ಹೊಂದಿದ್ದಾನೆ. ತಂದೆ, ಪುತ್ರ, ರೂಹುಲ್ ಖುದೂಸ್, ಯೇಸು ಈ ಮೂರರ ಪರಿಪೂರ್ಣ ದೇವನಾಗಿದ್ದಾನೆ. ಈಗ ಓ ಸರ್ವಶಕ್ತನೇ ಈ ಎರಡೂ ಪಕ್ಷಗಳಲ್ಲಿ ಹೀಗೆ ತೀರ್ಪನ್ನು ನೀಡು. ನಮ್ಮ ಉಭಯ ಪಕ್ಷಗಳಲ್ಲಿ (ಈ ಸಮಯ ಮೈದಾನದಲ್ಲಿ ಹಾಜರಿರುವ) ಯಾವ ಪಕ್ಷವು ಸುಳ್ಳು ವಿಶ್ವಾಸಗಳನ್ನು ಹೊಂದಿದೆ. ಅದನ್ನು ಒಂದು ವರ್ಷದೊಳಗೆ ಘೋರವಾದ ಶಿಕ್ಷೆಯಿಂದ ನಾಶಪಡಿಸು. ಏಕೆಂದರೆ ಎಲ್ಲಾ ಲೋಕಗಳ ಮುಕ್ತಿಗಾಗಿ ಕೆಲ ಜನರ ಮರಣವು ಉತ್ತಮವಾಗಿದೆ.

ಹೀಗೆ ಪ್ರತಿಯೊಂದು ಪಕ್ಷವು ತಮ್ಮ ಬಗ್ಗೆ ಪ್ರಾರ್ಥಿಸಲಿ. ಮೊದಲು ಒಂದು ಪಕ್ಷ. ಹೀಗೆ ಪ್ರಾರ್ಥಿಸಲಿ ಮತ್ತು ದ್ವಿತೀಯ ಪಕ್ಷವು ಆಮೀನ್ ಎಂದು ಹೇಳಲಿ. ಮತ್ತೆ ಎರಡನೆಯ ಪಕ್ಷವು ಪ್ರಾರ್ಥಿಸಲಿ. ಮೊದಲ ಪಕ್ಷವು ಆಮೀನ್ ಎಂದು ಹೇಳಲಿ. ಮತ್ತು ಒಂದು ವರ್ಷತನಕ ಅಲ್ಲಾಹನ ತೀರ್ಪನ್ನು ನಿರೀಕ್ಷಿಸಲಿ. ನಾನು ಈ ಸಮಯ ಧರ್ಮಸಂಹಿತೆಯ ಪ್ರಕಾರ ವಚನ ನೀಡುತ್ತೇನೆ. ಇವೆರಡೂ ಮುಬಾಹಲಗಳಲ್ಲಿ ಎರಡು ಸಾವಿರ ರೂಪಾಯಿಗಳನ್ನು ಕ್ರೈಸ್ತರಿಗಾಗಿ ಜಮೆ ಮಾಡುವೆನು. ಯಾರು ನನ್ನ ಎದುರಿನಲ್ಲಿ ಮುಬಾಹಲಕ್ಕಾಗಿ ಮೈದಾನಕ್ಕೆ ಬರುವರೋ. ಅವರಿಗೆ ಅನಿವಾರ್ಯವೆಂದರೆ ಜೀವಂತ ಹಾಗೂ ಸರ್ವಶಕ್ತ ದೇವನು ನಮ್ಮ ಜೊತೆಯಲ್ಲಿದ್ದಾನೆ ಎಂದು ಸಾಭಿತು ಪಡಿಸಬೇಕಾಗಿದೆ.

ಇದೀಗ ಈ ಮುಬಾಹಲದಿಂದ ಪ್ರಬಲ ಉಪಯೋಗವೇನೆಂದರೆ ಆ ದೇವನು ಯಾವ ಸಮುದಾಯದೊಡನೆ ಇದ್ದಾನೆಂದು ಸಾರ್ವಜನಿಕರು ತಿಳಿದುಕೊಳ್ಳುವರು. ಒಂದು ವೇಳೆ ಕ್ರೈಸ್ತರು ಅದನ್ನು ಸ್ವೀಕರಿಸದಿದ್ದರೆ ಶಾಪ (ಲಅನತ್) ಗಳ ಸಂಗ್ರಹ ಅವರಿಗಾಗಿ ಆಕಾಶದಲ್ಲಿ ಮಾಡಲಾಗುವುದು. ಜನರು ತಿಳಿಯಬಹುದು. ಅವರು ಸುಳ್ಳುಗಾರರಾಗಿದ್ದಾರೆ ಎಂದು. ನಮ್ಮ ಸಂಭೋಧಕರು, ಡಾಕ್ಟರ್, ಕ್ಲರ್ಕ್, ಪಾದರಿ ಮಾಮುದ್ದೀನ್ ಹಿಸಾಮುದ್ದೀನ್ ಸಂಪಾದಕರು, ಕಶ್ಫಲ್ – ಹಖಾಯಖ್, ಮುನ್ಶಿ ಸಫ್ದರ್ ಅಲಿ ಭಂಡಾರ, ಪಾದರಿ ಫತಹ ಮಸೀಹ್ ಮತ್ತು ಪ್ರತಿಯೊಬ್ಬ ಇಸ್ಲಾಮ್ ದ್ವೇಷಿಯೂ ಪ್ರಾರ್ಥಿಸಲಿ. ಈ ವಿಧಾನವು ಉತ್ತಮವಾಗಿದೆ. ಅದರಿಂದ ಲೋಕವು ದಿನನಿತ್ಯದ ಜಗಳಗಳಿಂದ ಮುಕ್ತವಾಗುವುದು. "ತಾಸಿಯಾ ರೂಯೆ ಶವದ್ ಹರ್‌ಕೆ ದರೋಗಶ್ ಬಾಶದ್! ವಸ್ಸಲಾಮು ಅಲಾ ಮನಿತ್ತಬಅಲ್‌ಹುದಾ. (ಅಂಜಾಮೇ ಆಥಮ್, ರೂಹಾನಿ ಖಝಾಈನ್, ಸಂಪುಟ–11, ಪುಟ–31)

ಮುಂದಿನ ಸಂಚಿಕೆಯಲ್ಲಿ ನಾವು ಇನ್‌ಶಾಅಲ್ಲಾಹ್ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥಾಹ್ವಾನ ಓದುಗರಿಗೆ ಪ್ರಸ್ತುತಪಡಿಸುವೆವು. **(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 11ರ ಉಳಿದ ಭಾಗ)*

ಜಿಬ್ರೀಲ್ ಹೋದನಂತರ ಅವರು ತಮ್ಮ ಸಹಾಬರ ಬಳಿಗೆ ಬರುತ್ತಿದ್ದರು. ಹಾಗೂ ಅವತರಣಗೊಂಡ ವಚನಗಳನ್ನು ತಕ್ಷಣ ಕಂಠಸ್ಥ ಮಾಡಿಸುತ್ತಿದ್ದರು. ಹೀಗೆ ಪ್ರಾರಂಭದಿಂದಲೇ ಪವಿತ್ರ ಖುರ್‌ಆನ್‌ನ ಸಹಾಬರ ಕಂಠಸ್ಥಿಕೆ ಮೂಲಕ ಸಹಾಬರ ಎದೆಯಲ್ಲಿ ಸಂರಕ್ಷಿತವಾಗುತ್ತಿತ್ತು. ಸಹಾಬರ ಎದೆಯಲ್ಲಿ ಸುರಕ್ಷಿತಗೊಂಡ ಪವಿತ್ರ ಖುರ್‌ಆನ್ ಅವರ ಅನುಯಾಯಿಗಳಿಗೆ, ಅವರಿಂದ ಅವರ ಅನುಯಾಯಿಗಳಿಗೆ ಹೀಗೆ ಒಂದು ಎದೆಗಯಿಂದ ಇನ್ನೊಂದು ಎದೆಯಲ್ಲಿ ಸುರಕ್ಷಿತಗೊಳ್ಳುತ್ತ ಹೋಯಿತು. ಅದೇ ಪವಿತ್ರ ಖುರ್‌ಆನ್ ಪೀಳಿಗೆಯಿಂದ ಪೀಳಿಗೆಗೆ ಎದೆಯಿಂದ ಎದೆಗೆ ಇಲ್ಲಿಯವರೆಗೆ ಮುಸಲ್ಮಾನರ ಕಂಠದಲ್ಲಿ ಸುರಕ್ಷಿತವಾಗಿದೆ. ಹೀಗೆ ಪೀಳಿಗೆ ನಂತರ ಇನ್ನೊಂದು ಪೀಳಿಗೆಗೆ ವರ್ಗಾವಣೆಯಾಗುತ್ತು ಇದೆ. ಇಸ್ಲಾಮಿನ ಇತಿಹಾಸ ಪ್ರಕಾರ ಸಯ್ಯದ್‌ನಾ ಮುಹಮ್ಮದ್(ಸ) ಅವರು ತಮ್ಮ ಪವಿತ್ರ ಜೀವಿತದಲ್ಲಿ ಅಂತಿಮ ಹಜ್ಜ್ ನೆರವೇರಿಸುವ ಸಂಧರ್ಭ ಹೇಳಿದರು. ಅದರಲ್ಲಿ ಸುಮಾರು (1,24,000) ಸಹಾಬರು ಹಾಜರಿದ್ದರು. ಅದೊಂದು ಸಹಜ ಹಾಗೂ ದೈವಿಕ ಮಾತಿತ್ತು. ಅವರಲ್ಲಿ ಒಂದು ದೊಡ್ಡ ಸಂಖ್ಯೆ ಪವಿತ್ರ ಖುರ್‌ಆನ್ ಕಂಠಸ್ತ ಮಾಡಿದವರದ್ದಾಗಿತ್ತು. ಅವರ ಎದೆಗಳಲ್ಲಿ ಪವಿತ್ರ ಖುರ್‌ಆನ್ ಸುರಕ್ಷಿತವಾಗಿತ್ತು. ಅದಲ್ಲದೇ ಮತ್ತೆ ಪವಿತ್ರ ರಂಝಾನ್‌ನಲ್ಲಿ ತರಾವೀಹ್ ನಮಾಝಿನ ಸ್ಮರಣೆ ಪ್ರಾರಂಭವಾಯಿತು. ಪವಿತ್ರ ರಂಝಾನ್‌ನಲ್ಲಿ ದೊಡ್ಡ ದೊಡ್ಡ ಮಸೀದಿಗಳಲ್ಲಿ ಸಂಪೂರ್ಣ ಪವಿತ್ರ ಖುರ್‌ಆನ್ ಹಾಫಿಝ್ (ಇಮಾಮ್) ದೊಡ್ಡ ಧ್ವನಿಯಲ್ಲಿ ಪವಿತ್ರ ಖುರ್‌ಆನ್ ಪಠಿಸುತ್ತಿದ್ದರು. ಇನ್ನೊಬ್ಬ ಹಾಫಿಝ್ ಹಿಂದೆ ನಿಂತುಕೊಳ್ಳುತ್ತಿದ್ದ, ಆಕಸ್ಮಾತ್ತಾಗಿ ಏನಾದರೂ ಮರೆತರೆ ಅವನು ಹೇಳಿಕೊಡುತ್ತಿದ್ದನು. ತರಾವೀಹ್ ನಮಾಝಿನ ಈ ಸ್ಮರಣೆ ಇಂಡೋನೇಷಿಯಾದಿಂದ ಚೀನಾ ಮತ್ತು ಆಫ್ರಿಕಾ, ಯೂರೋಪ್, ಮತ್ತು ಅಮೇರಿಕಾ ಉಪಖಂಡ, ಇಂಡೋ ಪಾಕ್ ಮತ್ತು ಅರಬ್‌ಗಳಲ್ಲಿ ಜಾರಿಯಲ್ಲಿತ್ತು. ಎದೆಯಿಂದ ಎದೆಗೆ ಸುರಕ್ಷಿತವಿದ್ದ ಪವಿತ್ರ ಖುರ್‌ಆನ್‌ನ ಪಠಣದಲ್ಲಿ ವ್ಯತ್ಯಾಸ ಕಂಡುಬಂದಿಲ್ಲ. ಅದು ಅಲ್ಲಾಹನ ವಾಗ್ದಾನದ ಬಹುದೊಡ್ಡ ಸಾಕ್ಷ್ಯಕ್ಕೆ ಸತ್ಯಕ್ಕೆ ಕಾರಣವಾಗಿದೆ. ಹಿಂದಿನ ಹದಿನಾಲ್ಕು ಶತಮಾನಗಳಿಂದ ಪವಿತ್ರ ಖುರ್‌ಆನ್ ಎದೆಯಿಂದ ಎದೆಗೆ ಪೀಳಿಗೆಯಿಂದ ಪೀಳಿಗೆಗೆ ಅತಿ ಉತ್ತಮ ರೀತಿಯಲ್ಲಿ ಸುರಕ್ಷಿತವಾಗಿ ವರ್ಗಾವಣೆಯಾಗುತ್ತಿದೆ. ಲೋಕದಲ್ಲಿ ಎಲ್ಲೂ ಯಾವ ಗ್ರಂಥಕ್ಕೂ ಇಂತಹ ಉದಾಹರಣೆ ದೊರೆಯದು. ಸುರಕ್ಷತೆಯ ಈ ಅಚ್ಚುಕಟ್ಟಿನ ವ್ಯವಸ್ಥೆಯನ್ನು ಕಡೆಗಣಿಸಿ ಆರೋಪ ಮಾಡುವುದು ಮೂರ್ಖತನದ ಪರಮಾವಧಿಯಾಗಿದೆ.

**ಪವಿತ್ರ ಖುರ್‌ಆನ್ ಸುರಕ್ಷತೆಗಿರುವ ಎರಡನೆಯ ವಿಧಾನ:**

ಹಝ್ರತ್ ರಸೂಲುಲ್ಲಾಹ್(ಸ) ರವರು ಪವಿತ್ರ ಖುರ್‌ಆನ್ ವಚನಗಳು ಅವತರಣ ಗೊಳ್ಳುತ್ತಿದ್ದಂತೆಯೇ ಅದನ್ನು ಜೊತೆ ಜೊತೆಯಲ್ಲಿಯೇ ಬರೆಸುತ್ತಿದ್ದರು. ಅಲ್ಲಾಹನ ಇಂಗಿತದನ್ವಯ ಕ್ರಮಾನುಸಾರ ಖುದ್ದಾಗಿ ನಿಗದಿಪಡಿಸುತ್ತಿದ್ದರು. ಈ ಬಗ್ಗೆ ಹಲವು ಹದೀಸುಗಳಿವೆ. ಅವುಗಳಲ್ಲಿ ಕೆಲವು ಉದಾಹರಣೆ ರೂಪದಲ್ಲಿ ಈ ಕೆಳಗೆ ಪ್ರಸ್ತುತಪಡಿಸಲಾಗುತ್ತಿದೆ.

ಅನ್ಇಬ್ಬನು ಅಬ್ಬಾಸ್....... (ತಿರ್ಮಿದಿ, ಅಬೂದಾವೂದ್ ಮತ್ತು ಮುಸ್ನದ್ ಅಹ್ಮದ್, ಉಲ್ಲೇಖ ಅಬ್ವಾಬ್ ಫಝಾಏಲುಲ್ ಖುರ್‌ಆನ್)

ಅನುವಾದ; ಹಝ್ರತ್ ಇಬ್ನು ಅಬ್ಬಾಸ್ ಅವರು ಹಝ್ರತ್ ರಸೂಲುಲ್ಲಾಹ್(ಸ) ರವರ ಸಹೋದರ ಸಂಬಂಧಿಯಾಗಿದ್ದರು. ಅವರು ವರದಿ ಮಾಡುತ್ತಾರೆ. ಹಝ್ರತ್ ಉಸ್ಮಾನ್ ತೃತೀಯ ಖಲೀಫರು (ಅವರು ಹಝ್ರತ್ ರಸೂಲುಲ್ಲಾಹ್ ಅವರ ಕಾಲಘಟ್ಟದಲ್ಲಿ ಅವತರಣಗೊಂಡ ವಚನಗಳನ್ನು ಬರಹರೂಪಕ್ಕೆ ತರುತ್ತಿದ್ದರು) ಹೇಳುತ್ತಾರೆ. ಹಝ್ರತ್ ರಸೂಲುಲ್ಲಾಹ್(ಸ) ರವರ ಮೇಲೆ ಕೆಲ ವಚನಗಳು ಅವತರಣಗೊಂಡಾಗ ಅವರು ತಮ್ಮ ಬರಹಗಾರರಲ್ಲಿ ಒಬ್ಬರಿಗೆ ಈ ವಚನಗಳನ್ನು ಆಯಾ ಅಧ್ಯಾಯದಲ್ಲಿ ಇಂತಹ ಸ್ಥಳದಲ್ಲಿ ಬರೆಯಿರಿ ಎಂದು ಹೇಳುತ್ತಿದ್ದರು.

ಒಂದೇ ಒಂದು ವಚನ ಅವತರಣ ಗೊಂಡರೂ ಮತ್ತೆ ಅದೇ ರೀತಿ ದೇವವಾಣಿಯ ಬರಹಗಾರರನ್ನು ಕರೆದು ಸ್ಥಳ ತೋರಿಸಿ ಅದನ್ನು ಬರೆಯಲು ಹೇಳುತ್ತಿದ್ದರು.

ಯಾವ ಸಹಾಬರು ದೇವವಾಣಿ ಬರೆಯುವ ಕಾರ್ಯ ಕೈಗೊಳ್ಳುತ್ತಿದ್ದರೋ ಅವರ ಹೆಸರುಗಳು ಮತ್ತು ಗಟಣೆಯ ವಿವರಗಳು ಇತಿಹಾಸದಲ್ಲಿ ಸುರಕ್ಷಿತಗೊಂಡಿದೆ. ಅವರಲ್ಲಿ ಹೆಚ್ಚಿನ ಹೆಸರು ಪಡೆದವರು ನಿಕಟವರ್ತಿ ಸಹಾಬರಾಗಿದ್ದರು. ಹಝ್ರತ್ ಅಬೂಬಕರ್, ಹಝ್ರತ್ ಉಮರ್, ಹಝ್ರತ್ ಉಸ್ಮಾನ್, ಹಝ್ರತ್ ಅಲಿ, ಹಝ್ರತ್ ಝುಬೇರ್ ಬಿನ್ ಅನಾಮ್, ಹಝ್ರತ್ ಅಬಿ ಬಿನ್ ಕಅಬ್ ಮತ್ತು ಹಝ್ರತ್ ಝೈದ್ ಬಿನ್ ನಾಬಿತ್. (ಫತಹಲ್ ಬಾರಿ ಸಂಪುಟ-9, ಪುಟ-19, ವಝ್ರಖಾನಿ, ಸಂಪುಟ-4, ಪುಟ-311-326)

ಈ ಪಟ್ಟಿಯಿಂದ ತಿಳಿದುಬರುವುದೇನೆಂದರೆ, ಹಝ್ರತ್ ರಸೂಲುಲ್ಲಾಹ್(ಸ) ರವರಿಗೆ ಪ್ರಾರಂಭದಿಂದಲೇ ಒಂದು ಆದರಣೀಯ ಜಮಾಅತ್ (ಸಮೂಹ) (ಖುರ್ಆನ್‌ನ) ದೇವವಾಣಿ ಬರೆಯಲು ಸಿದ್ಧವಾಗಿತ್ತು. ಹೀಗೆ ಪವಿತ್ರ ಖುರ್ಆನ್ ಅವತರಣದ ಜೊತೆ ಜೊತೆಯಲ್ಲೇ ಕೇವಲ ಬರಹ ರೂಪದಲ್ಲಿ ಮಾತ್ರವಲ್ಲದೆ ಜೊತೆ ಜೊತೆಯಲ್ಲೇ ಆದರ ಪ್ರಸ್ತುತ ಕ್ರಮವೂ ಕೆಲವು ಯುಕ್ತಿಯ ಕಾರಣಗಳಿಂದ ಅವತರಣ ಕ್ರಮದಿಂದ ಬೇರ್ಪಡಿಸಲಾಗಿತ್ತು. ಸ್ಥಾಪನೆಯಾಯಿತು. ಹಝ್ರತ್ ರಸೂಲುಲ್ಲಾಹ್(ಸ) ರವರ ನಿಧನದ ನಂತರ ಪವಿತ್ರ ಖುರ್ಆನ್‌ನ ಅವತರಣಿಕೆ ಸಂಪೂರ್ಣ ಮುಗಿದು ಹೋಗಿತ್ತು. ಪ್ರಥಮ ಖಲೀಫ಼ರಾದ ಹಝ್ರತ್ ಅಬೂಬಕರ್‌ರವರು, ಹಝ್ರತ್ ಉಮರ್ ಅವರ ಸಲಹೆಯ ಮೇರೆಗೆ ಹಝ್ರತ್ ರಸೂಲುಲ್ಲಾಹ್(ಸ) ರವರ ದೇವವಾಣಿಯ ಬರಹಗಾರರಾಗಿದ್ದ ಹಝ್ರತ್ ಝೈದ್ ಬಿನ್ ಸಾಬಿತ್ ಅನ್ಸಾರಿ ಅವರಿಗೆ ಪವಿತ್ರ ಖುರ್ಆನ್‌ನ್ನು ಕ್ರಮಬದ್ಧವಾಗಿ ಒಂದು ಗ್ರಂಥದ ರೂಪದಲ್ಲಿ ಏಕತ್ರಗೊಳಿಸಿ ಸುರಕ್ಷಿತಗೊಳಿಸಲು ಆಜ್ಞೆ ಮಾಡಿದರು. ಅಂದಹಾಗೆ ಝೈದ್ ಬಿನ್ ಸಾಬಿತ್ ತುಂಬಾ ಶ್ರಮವಹಿಸಿ ಪ್ರತಿಯೊಂದು ವಚನದ ಬಗ್ಗೆ ಮೌಖಿಕವಾಗಿ ಹಾಗೂ ಬರಹ ರೂಪದಲ್ಲಿ ಎರಡೂ ರೀತಿಯ ಬಲ್ಲ ಸಾಕ್ಷ್ಯಗಳನ್ನು ಪಡೆದು ಅದನ್ನು ಒಂದು ಕ್ರಮಬದ್ಧವಾಗಿ ಗ್ರಂಥದ ರೂಪದಲ್ಲಿ ಏಕತ್ರಗೊಳಿಸಿದರು. (ಬುಖಾರಿ ಕಿತಾಬ್ ಫಝಾಮಲ್ ಖುರ್ಆನ್, ಬಾಬ್ ಕಿತಾಬುನ್ನಬಿ)

ಅನಂತರ ಇಸ್ಲಾಂ ಧರ್ಮವು ವಿಭಿನ್ನ ದೇಶಗಳಲ್ಲಿ ಹರಡಿದಾಗ ಮತ್ತೆ ಹಝ್ರತ್ ಉಸ್ಮಾನ್ ತೃತಿಯ ಖಲಿಫರ ಆಜ್ಞೆಯಂತೆ ಝೈದ್ ಬಿನ್ ಸಾಬಿತ್ ಏಕತ್ರಗೊಳಿಸಿದ ಗ್ರಂಥದಂತೆ ಪವಿತ್ರ ಖುರ್ಆನ್‌ನ ಹಲವು ಅಧಿಕೃತ ಗ್ರಂಥಗಳನ್ನು ಬರೆಸಿ ಎಲ್ಲ ಇಸ್ಲಾಮಿ ರಾಷ್ಟ್ರಗಳಿಗೆ ಕಳುಹಿಸಿಕೊಟ್ಟರು. (ಬಹವಾಲ ಬುಖಾರಿ.)

ಸುರಕ್ಷತೆಯ ಈ ಎರಡನೆಯ ವಿಧಾನ ನಂತರ ಆಕ್ಷೇಪಗಾರನ ಆಕ್ಷೇಪ ಮಿಥ್ಯ ಮತ್ತು ಆಧಾರರಹಿತ ಎಂಬುದು ಬಟ್ಟ ಬಯಲಾಗುತ್ತದೆ. ಅದಾಗ್ಯೂ ಪವಿತ್ರ ಖುರ್ಆನ್ ನಂತರ ಮಾಡಲ್ಪಟ್ಟಿತು ಎಂಬ ವಾದ ಹುರುಳಿಲ್ಲದ್ದು, ಆಶ್ಚರ್ಯಕರ ಮತ್ತು ಅವರ ಅಲ್ಪಜ್ಞಾನಕ್ಕೆ ಸಾಕ್ಷ್ಯವಾಗಿದೆ. ಆಕ್ಷೇಪಗಾರನು ತಿಳಿದುಕೊಳ್ಳಬೇಕು, ಕಿತಾಬ್ ಎಂಬ ಪದ (ಕತಬ, ಯಕ್‌ತುಬು, ಕಿತಾಬನ್) ಯಿಂದ ಆಯ್ದುಕೊಳ್ಳಲಾಗಿದೆ. ಅಲ್ಲಾಹನು ಅಲ್‌ಬಖರ ಪ್ರಾರಂಭಿಕ ಅಧ್ಯಾಯದಲ್ಲಿಯೇ ಪ್ರತಿಯೊಬ್ಬ ಓದುಗನಿಗೆ ಈ ಸುವಾರ್ತೆ ನೀಡಿದೆ. "ಝಾಲಿಕಲ್ ಕಿತಾಬು" ಅದು ಪರಿಪೂರ್ಣ ಗ್ರಂಥ ಎಂದು ಸಂಬೋಧಿಸಲಾಗಿದೆ. ಆಕ್ಷೇಪ ಮಾಡುವವನು ಕಿತಾಬು ಪದದ ಮೇಲೆ ಗಮನವಹಿಸಬೇಕು. ಈ ಗ್ರಂಥ ಸಯ್ಯಿದ್‌ನಾ ಮುಹಮ್ಮದ್(ಸ) ರವರ ಪವಿತ್ರ ಕಾಲಘಟ್ಟದಲ್ಲಿ ಇರುತ್ತಿರಲಿಲ್ಲ ಎಂದಾದರೆ ಆ ಸಮಯಕ್ಕೆ ಹಾಜರಿದ್ದ ಕಪಟ ವಿಶ್ವಾಸಿಗಳು ಮತ್ತು ವಿರೋಧಿಗಳು ಈ ಪ್ರಶ್ನೆಯನ್ನು ಎತ್ತಬಹುದಾಗಿತ್ತು. ಯಾವುದನ್ನು ನೀವು ದೈವಗ್ರಂಥ ಎನ್ನುತ್ತೀರಿ. ಅದು ಎಲ್ಲಿದೆ? ಅದು ಗ್ರಂಥರೂಪದಲ್ಲಿ ನಾವು ಕಾಣುತ್ತಿಲ್ಲ? ಅವರ ಮೌನದಿಂದ ಸ್ಪಷ್ಟವಾಗುವುದೇನೆಂದರೆ ಆ ಸಮಯದಲ್ಲೇ ಅಧಿಕೃತ ರೀತಿಯಲ್ಲಿ ಪವಿತ್ರ ಖುರ್ಆನ್ ಬರಹರೂಪದಲ್ಲಿ ಇತ್ತು. ಅದಲ್ಲದೇ ಅದರ ಮೇಲೆ ಅಲ್ಲಾಹನು ಸ್ಪಷ್ಟಪಡಿಸಿದನು. ಲಾ ರೈಬ ಫೀಹಿ ಈ ಗ್ರಂಥದ ಸಂದೇಹವೇನೂ ಇಲ್ಲ. ಸಂದೇಹಕ್ಕೆ ಅಸ್ಪದ ಇಲ್ಲ. ಸಂದೇಹದ ಭಯವು ಇಲ್ಲ. ಓ ಖುರ್ಆನ್ ಪಠಿಸುವವರೆ ಪೂರ್ಣ ದೃಢತೆಯಿಂದ ವಿಶ್ವಾಸದಿಂದ ಪಠಿಸು ಮತ್ತು ಅದರ ಅಧ್ಯಯನ ಮಾಡು. ಬರಬಹುದಾದ ಆಕ್ಷೇಪಗಳಿಗೆಲ್ಲ ಅಲ್ಲಾಹನು ಪ್ರಾರಂಭದ ಎರಡು ಪದಗಳಿಂದಲೇ ಅದನ್ನು ನಿವಾರಿಸಿಬಿಟ್ಟನು.

**(ಶೇಷ)**

**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**
**Love for All, Hatred for None**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ವಚನದ ಮೊದಲ ಭಾಗ ಎರಡೂ ಸಮಯಕ್ಕೆ ಸಾಕ್ಷ್ಯವಾಗಿರುತ್ತದೆ. ಭೂಮ್ಯಾಕಾಶಗಳ ರಚನೆ ಅಂತ್ಯಕ್ಕೂ ಸಾಕ್ಷ್ಯವಾಗಿದೆ. ಪ್ರವಾದಿಗಳ ಯಶಸ್ಸು ಮತ್ತು ಅವರ ಶತ್ರುಗಳ ವಿನಾಶ ಸಹ.

ಅಂತ್ಯ ದಿನವು ಇಹಲೋಕಕ್ಕಾಗಿಯೇ ಸೀಮಿತವಾಗಿರುತ್ತಿದ್ದರೆ, ಅಷ್ಟೊಂದು ಬೃಹತ್ ಬ್ರಹ್ಮಾಂಡ ಕೇವಲ ಮನುಷ್ಯನು ಹುಟ್ಟಿ ಊಟೋಪಚಾರಕ್ಕಾಗಿ ಬದುಕುವಂತಾದರೆ ಮತ್ತು ಹಾಗೆಯೇ ಸತ್ತು ಹೋಗುವಂತಾದರೆ ಅಂತಹ ಕಲ್ಪನೆ ವಿವೇಕಕ್ಕೆ ದೂರವಾದುದಾಗಿದೆ. ಅಷ್ಟೊಂದು ಬೃಹತ್ ಗಾತ್ರದ ಬ್ರಹ್ಮಾಂಡ ಸೃಷ್ಟಿಸಿದ್ದು ಒಂದು ಮಹತ್ವ ಉದ್ದೇಶಕ್ಕಾಗಿಯೇ ಆಗಿರುತ್ತದೆ. ಆ ಉದ್ದೇಶ ಇಹಲೋಕದಲ್ಲಿ ಪೂರ್ಣಗೊಳ್ಳುವಂತೆ ಕಾಣುವುದಿಲ್ಲ. ಆದುದರಿಂದ ಮನುಷ್ಯನ ಜೀವನ ಇಹಲೋಕಕ್ಕೆ ಸೀಮಿತವಾಗಿರಬಾರದು. ಈ ವ್ಯವಸ್ಥೆಯ ಘನತೆ ನೋಡಿದರೆ ಅದು ದೀರ್ಘ ಕಾಲದವರೆಗೆ ಹೋಗುವಂತಿರಬೇಕು. ಅದಕ್ಕನುಗುಣವಾಗಿ ಉನ್ನತ ಸ್ಥಾನ ಪಡೆಯುವಂತಾಗಬೇಕು.

ಚೆನ್ನಾಗಿ ಅವಲೋಕಿಸಿ ನೋಡಿದರೆ ಇಡೀ ಲೋಕದ ವ್ಯವಸ್ಥೆ ಒಂದೆಡೆ ಇರಲಿ. ಅವನು ಸೃಷ್ಟಿಸಿದ ಸಣ್ಣ ಸಣ್ಣ ವಸ್ತುಗಳಲ್ಲಿಯೂ ಸಹ ಎಂತಹ ಗುಣಗಳು ಗೌಪ್ಯವಾಗಿವೆ ಎಂದರೆ ಅದು ಅಂತ್ಯಗೊಳ್ಳುವುದಿಲ್ಲ, ಮಾನವ ಶರೀರವನ್ನೇ ತೆಗೆದುಕೊಳ್ಳಲಿ. ಅದರ ರಚನೆ ಎಷ್ಟೊಂದು ಅದ್ಭುತವಾಗಿದೆ ಸಾವಿರ ಲಕ್ಷೋಪ ವೈದ್ಯರು ಮತ್ತು ಶಿಕ್ಷಣ ತಜ್ಞರು ಅದರ ವಾಸ್ತವ ಸಂಶೋಧಿಸುವುದರಲ್ಲಿ ತೊಡಗಿದ್ದಾರೆ. ಆದರೆ ಇಲ್ಲಿಯವರೆಗೂ ಪೂರ್ಣ ಮಾಹಿತಿ ಪಡೆಯಲಾಗಲಿಲ್ಲ. ಪವಿತ್ರ ಖುರ್ಆನ್‌ನ ಅವತರಣದ ನಂತರ ಯೂರೋಪ್, ವಿಜ್ಞಾನದಲ್ಲಿ ಬಹಳಷ್ಟು ಪ್ರಗತಿ ಸಾಧಿಸಿದೆ. ಆದರೂ ಇಲ್ಲಿಯವರೆಗೆ ಮಾನವ ಶರೀರದ ಬಗ್ಗೆ ಪೂರ್ಣ ಮಾಹಿತಿ ಪಡೆಯಲಾಗಲಿಲ್ಲ. ಅಷ್ಟೊಂದು ವಿಶಾಲವಾದ ತತ್ವಗಳ ಮೇಲೆ ಬುನಾದಿ ಹೂಡಿದ ಈ ಲೋಕದ ಸೃಷ್ಟಿಯ ಉದ್ದೇಶ ಲಘುವಾಗಿರಲು ಸಾಧ್ಯವೇ?

ಅದೇ ರೀತಿ ಈ ವ್ಯವಸ್ಥೆ ಪ್ರವಾದಿಗಳ ಯಶಸ್ಸು ಮತ್ತು ಅವರ ಶತ್ರುಗಳ ವಿನಾಶದ ಮೇಲೆ ನಿಂತಿದೆ. ಭೂಮಿಯನ್ನು ಆಕಾಶದಿಂದ ಬೇರ್ಪಡಿಸಿದರೆ ಅದರ ಸ್ಥಿತಿ ಹೇಗಾಗಿರಬಹುದು. ಒಂದು ದಿನವು ನಿಲ್ಲಲು ಸಾಧ್ಯವಿಲ್ಲ. ಅಂದ ಮೇಲೆ ಆಧ್ಯಾತ್ಮಿಕ ಆಕಾಶದಿಂದ ಬೇರ್ಪಟ್ಟರೆ ಉಳಿಯಬಹುದು ಎಂದು ಭಾವಿಸುವರು ಎಂತಹ ಮೂರ್ಖರಿರಬಹುದು. ಯಾವ ರೀತಿ ಈ ಪರಿಪೂರ್ಣ ಐಹಿಕ ಲೋಕದ ಸಕಲ ವ್ಯವಸ್ಥೆಗಳಿಗೆ ಭೂಮಿ ಸಂಬಂಧಿಸಿದೆಯೋ, ಅದೇ ರೀತಿ ಆಧ್ಯಾತ್ಮಿಕ ವ್ಯವಸ್ಥೆಯಲ್ಲಿ ಮನುಷ್ಯನು ಸಂಬಂಧ ಹೊಂದಿದರೆ ಮಾತ್ರ ವಿನಾಶದಿಂದ ಉಳಿಯಬಹುದಾಗಿದೆ. ಇಲ್ಲದಿದ್ದರೆ ಅವನ ಉಳಿಯುವಿಕೆಗೆ ಯಾವ ಮಾರ್ಗವೂ ಇಲ್ಲ. ವಿಶೇಷವಾಗಿ ಈ ವ್ಯವಸ್ಥೆಯ ಮೇಲೆ ಆಕ್ರಮಣವಾದರೆ ಅವನ ಮುಕ್ತಿ ಎಂದೂ ಸಾಧ್ಯವಿಲ್ಲ. ಆದುದರಿಂದ ನಬಿ ಕರೀಂ(ಸ) ರವರನ್ನು ಧಿಕ್ಕರಿಸುವವರಿಗೆ ತಿಳಿ ಹೇಳಲಾಯಿತು. ಆಧ್ಯಾತ್ಮಿಕ ಆಕಾಶದೊಂದಿಗೆ ಸಂಬಂಧವಿಲ್ಲದಿದ್ದರೆ ಅದರ ಯಾವ ಸಾಮಗ್ರಿಗಳು ಏನೂ ಕೆಲಸ ಮಾಡದು. ಅಲ್ಲದೇ ಈಗ ಅದರ ವಿನಾಶ ಮತ್ತು ಮುಸಲ್ಮಾನರ ಅಭಿವೃದ್ಧಿಯ ಸಮಯ ಬಂದಾಗಿದೆ. **(ತಫ್ಸೀರ್ ಕಬೀರ್, ಸಂಪುಟ-4, ಪುಟ-107, ಮುದ್ರಣ ಖಾದಿಯಾನ್)**

**ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್**

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ನಂಪುಟ-1 ರೂಹಾನಿ ಖಝಾಇನ್ ಸಂಪುಟ 17, ಪುಟ 345)***

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

# ಅಲ್ಲಾಹನು ಪವಿತ್ರ ಖುರ್‌ಆನ್‌ನ ರಕ್ಷಕನಾಗಿದ್ದಾನೆ.

**(ಪವಿತ್ರ ಖುರ್‌ಆನ್‌ನ 26 ವಚನಗಳ ಕುರಿತು ಎತ್ತಿದ ಆಕ್ಷೇಪದ ಉತ್ತರ)**

**ಮುಹಮ್ಮದ್ ಹಮೀದ್ ಕೌಸರ್,**
**ನಾಝಿರ್ ದಾವತ್ ಇಲಲ್ಲಾಹ್ ಉತ್ತರ ಭಾರತ, ಖಾದಿಯಾನ್.**

## ಭಾಗ-1

ಪವಿತ್ರ ಖುರ್‌ಆನ್ ಅಂತ್ಯ ದಿನದವರೆಗೂ ಅಲ್ಲಾಹನ ಗ್ರಂಥವಾಗಿದೆ ಎಂಬುದು ಈ ಭೂಮಂಡಲದಲ್ಲಿ ವಾಸಿಸುತ್ತಿರುವ ಕೋಟ್ಯಾಂತರ ಮುಸ್ಲಿಮರ ದೃಢವಾದ ವಿಶ್ವಾಸ ಆಗಿದೆ. ಅದು ಅವತರಿಸಿದ ದಿನದಿಂದಲೇ ಅಲ್ಲಾಹನು ಅದನ್ನು ತನ್ನ ರಕ್ಷಣೆಯಲ್ಲಿ ಇರಿಸಿಕೊಂಡಿದ್ದಾನೆ ಮತ್ತು ಅಂತ್ಯ ದಿನದವರೆಗೂ ಸಂರಕ್ಷಿಸುವನು. ಹಿಂದಿನ ಹದಿನಾಲ್ಕು ಶತಮಾನಗಳಿಂದ ಶೈತಾನ ಶಕ್ತಿಗಳು, ಅಧರ್ಮಿಗಳು ಈ ದೇವಗ್ರಂಥ ಕುರಿತು ನೂರಾರು ಸಲ ತಮ್ಮ ಆತಂಕ ಶಂಕೆಗಳನ್ನು ವ್ಯಕ್ತಪಡಿಸುತ್ತ ಬಂದಿದ್ದಾರೆ. ಅದು ಇಲ್ಲಿಯವರೆಗೂ ಜಾರಿಯಲ್ಲಿದೆ. ಸಧ್ಯದಲ್ಲೇ ಲಕ್ನೌ ನಿವಾಸಿಯಾದ ವಸೀಮ್ ರಿಜ್ವಿ ಹೆಸರಿನ ಓರ್ವ ವ್ಯಕ್ತಿ ಭಾರತದ ಉಚ್ಚ ನ್ಯಾಯಾಲಯದಲ್ಲಿ (Supreme Court) ಒಂದು ಅರ್ಜಿಯನ್ನು ಸಲ್ಲಿಸಿದರು. ಆ ಮೂಲಕ 26 ಖುರ್‌ಆನ್‌ನ ವಚನಗಳನ್ನು ತೆಗೆದುಹಾಕಲು ಕೋರಿದರು. ಅವರ ಅನಿಸಿಕೆ ಪ್ರಕಾರ ಈ ವಚನಗಳು ಭಯೋತ್ಪಾದನೆ ಹಾಗೂ ಉಗ್ರವಾದದ ಶಿಕ್ಷಣವಾಗಿದೆ. ಇದು ಯುವಕರಿಗೆ ಭಯೋತ್ಪಾದ ಕೃತ್ಯ ನಡೆಸಲು ಇಂಬು ನೀಡುತ್ತಿದೆ. ಅವರ ಹೇಳಿಕೆಯ ಪ್ರಕಾರ ಈ ವಚನಗಳು ಹಝ್ರತ್ ಮುಹಮ್ಮದ್(ಸ) ರವರ ಜೀವಿತ ಅವಧಿಯಲ್ಲಿ ಖುರ್‌ಆನ್‌ನ ಭಾಗ ಆಗಿರಲಿಲ್ಲ. ಬದಲು ಖಲೀಫ ರಾಶಿದೀನ್‌ನ ಮೊದಲ ಮೂರು ಖಲೀಫರುಗಳು ಅವುಗಳನ್ನು ಪವಿತ್ರ ಖುರ್‌ಆನ್‌ನಲ್ಲಿ ಸೇರಿಸಿದ್ದಾರೆ.

ಅಲ್ಹಮ್ದುಲಿಲ್ಲಾಹ್ ದಿನಾಂಕ: 12 ಏಪ್ರಿಲ್ 2021 ರಂದು ಉಚ್ಚ ನ್ಯಾಯಾಲಯ ಸದರಿ ಅರ್ಜಿಯನ್ನು ವಜಾಗೊಳಿಸಿತು ಮತ್ತು ಆ ಬಗ್ಗೆ ತನ್ನ ಅಸಂತೋಷ ವ್ಯಕ್ತಪಡಿಸುತ್ತ 50 ಸಾವಿರ ರೂಪಾಯಿಗಳ ದಂಡ ಹಾಕಿತು. ಆದ್ದರಿಂದ ಆ ಬಗ್ಗೆ ದಿನಪತ್ರಿಕೆಯಾದ ಹಿಂದ್ ಸಮಾಚಾರ್‌ನ ದಿನಾಂಕ: 13 ಏಪ್ರಿಲ್ 2021 ರಂದು ಹೀಗೆ ಸುದ್ದಿ ಪ್ರಕಟಿಸಿತು.

ನವದೆಹಲಿ: 12 ಏಪ್ರಿಲ್ (UNI) ಉಚ್ಚ ನ್ಯಾಯಾಲಯವು ಸೋಮವಾರದಂದು ಪವಿತ್ರ ಖುರ್‌ಆನ್‌ನ 26 ವಚನಗಳನ್ನು ತೆಗೆಯಬೇಕೆಂಬ ಅರ್ಜಿಯು ವಜಾ ಮಾಡಿತು. ಜಸ್ಟಿಸ್ ಕೋಹಲಿಗ್ವನ್ ಸ್ಕಾಲಿ ನಶೀಮನ್‌ರವರ ಉಸ್ತುವಾರಿಯ ಬೆಂಚ್ ಉತ್ತರಪ್ರದೇಶ ಶಿಯಾ ವಕ್ಫ್ ಬೋರ್ಡ್‌ನ ಮಾಜಿ ಚೇರ್‌ಮನ್ ವಸೀಮ್ ರಿಜ್ವಿರವರ ಅರ್ಜಿ ವಜಾಗೊಳಿಸಿತು. ಮತ್ತು ಅವರ ಮೇಲೆ 50,000/- ರೂಪಾಯಿಗಳ ದಂಡ ಹಾಕಿತು. ಜಸ್ಟಿಸ್ ನಾರಿಮನ್ ಹೇಳಿದರು. ಇದು ಸಂಪೂರ್ಣ ಬೇಜವಾಬ್ದಾರಿಯ ರಿಟ್ ಪಿಟಿಷನ್ ಆಗಿದೆ. ಕೇಸ್ ಆಲಿಸುವ ಮಧ್ಯೆ ಜಸ್ಟಿಸ್ ನಾರಿಮನ್ ಕೇಳಿದರು. ಅರ್ಜಿದಾರನು ಈ ಅರ್ಜಿಯ ಮೇಲೆ ವಿವೇಕ ಹೊಂದಿದ್ದಾನೆಯೇ? ಅವರು ಹೇಳಿದರು. ನೀವು ಅರ್ಜಿಯನ್ನು ಆಲಿಸಲು ಒತ್ತಾಯಿಸುವರೆ? ನೀವು ನಿಜವಾಗಿಯೂ ವಿವೇಕ ಹೊಂದಿರುವಿರೋ?

ಪವಿತ್ರ ಖುರ್‌ಆನ್‌ನ ವಿರುದ್ಧ ಆಲಾಪಿಸುವ ವಸೀಮ್ ರಿಜ್ವಿಯ ಪರ ವಕೀಲರಾದ Senior Advocate ಆರ್.ಕೆ ರಾಯ್‌ರವರ ವಾದ ಉತ್ತರ ನೀಡಿದರು. ಅವರು ಶಾಲಾ ಶಿಕ್ಷಣದ ಅನುಶಾಸನಕ್ಕೆ ಸೀಮಿತವಾಗಿ ತನ್ನ ಅರ್ಜಿ ಸೀಮಿತಗೊಳಿಸುತ್ತಿದ್ದಾರೆ. ಅನಂತರ ಅವರು ತಮ್ಮ ಕಕ್ಷಿದಾರನ ಅಭಿಪ್ರಾಯ ಮಂಡಿಸಿದರು. ಅದಕ್ಕೆ ಬೆಂಚ್ ತೃಪ್ತನಾಗಿಲ್ಲ ಮತ್ತು 50 ಸಾವಿರ ರೂಪಾಯಿಗಳ ದಂಡವನ್ನು ಹಾಕುವ ಮೂಲಕ ಅರ್ಜಿ ವಜಾಗೊಳಿಸಿದರು.

ಗಮನವಿರಲಿ ರಿಜ್ವಿ ಅರ್ಜಿಯಲ್ಲಿ ಹೇಳಿದ್ದನು. ಈ ವಚನಗಳಲ್ಲಿ ಮಾನವೀಯತೆಯ ಮೂಲಭೂತ ಸಿದ್ಧಾಂತಗಳನ್ನು ಕಡೆಗಣಿಸಲಾಗಿದೆ. ಮತ್ತು ಅದು ಧರ್ಮದ ಹೆಸರಿನಲ್ಲಿ ದ್ವೇಷ, ಹತ್ಯೆ, ರಕ್ತಪಾತ ಹರಿಸುವಂತಿದೆ. ಅದಲ್ಲದೇ ಅದರ ಜೊತೆಯಲಿಲ ಈ ವಚನಗಳು ಭಯೋತ್ಪಾದನೆಗೆ ಇಂಬು ನೀಡುವಂತಿದೆ. ರಿಜ್ವಿಯ ಅಂಬೋಣ ಹೀಗೂ ಇತ್ತು. ಈ ಖುರ್‌ಆನ್‌ನ ವಚನಗಳನ್ನು ಶಾಲೆಗಳಲ್ಲಿ ಮಕ್ಕಳಿಗೆ ಬೋಧಿಸಲಾಗುತ್ತಿದೆ. ಅದು ಅದರಲ್ಲಿ ಕಟ್ಟರವಾದ ಬೆಳೆಸುತ್ತದೆ. ಖುರ್‌ಆನ್‌ನ ಈ 26 ವಚನಗಳಲ್ಲಿ ಹಿಂಸೆಯ ಶಿಕ್ಷಣ ನೀಡಲಾಗಿದೆ. ಭಯೋತ್ಪಾದನೆಗೆ ಇಂಬು ನೀಡುವಂತ ಇಂಥ ಶಿಕ್ಷಣವನ್ನು ತಡೆಯಬೇಕಾಗಿದೆ. (ಹಿಂದ್ ಸಮಾಚಾರ್, ಜಾಲಂಧರ್, ಪಂಜಾಬ್ ದಿನಾಂಕ: 13, ಏಪ್ರಿಲ್ 2021, ಪುಟ 1, 2)

ಅಲ್ಹಮ್ದುಲಿಲ್ಲಾಹ್ 26 ವಚನಗಳನ್ನು ತೆಗೆಯಲಿರುವ ಅರ್ಜಿಯು ವಜಾಗೊಂಡಿತು. ಆದರೆ ಅರ್ಜಿದಾರನು ಮತ್ತು ಅವನ ಸಂಗಡಿಗರು ಸದರಿ ವಚನಗಳನ್ನು ಬುಖಾರಿಯ ಕೆಲ ಹದೀಸುಗಳ ಮಾಧ್ಯಮವಾಗಿ ಪವಿತ್ರ ಖುರ್‌ಆನ್‌ನ ಕುರಿತು ಗೊಂದಲ ಆ ಶಂಕೆಗಳನ್ನು ಮಾಧ್ಯಮಗಳ ಮೂಲಕ ಹಚ್ಚು ಹಾಕಲು ಪ್ರಯತ್ನ ಮಾಡಿದರು. ಅದರಿಂದ ಕೆಲ ಅಮುಸ್ಲಿಮರ ವಿಚಾರದಲ್ಲಿ ಈ ಪ್ರಶ್ನೆ ಮಾಡುವಂತಾಯಿತು.

1) ಮುಸಲ್ಮಾನನಾದವನೆ ಖುರ್‌ಆನ್‌ನ ಕೆಲವು ಆಯತ್ತಿನ ರದ್ದು ಹಾಗೂ ಬದಲಾವಣೆಯ ಆರೋಪ ಮಾಡಿದ್ದಾನೆ ಎಂದರೆ ಯಥಾರ್ಥತೆ ಏನಿರಬಹುದು?

2) ಎರಡನೆಯದಾಗಿ ಮುಸ್ಲಿಮರ ಹೊಸ ಪೀಳಿಗೆಯ ಮುಸಲ್ಮಾನರು ಅರ್ಜಿದಾರನು ಮಾಡಿದ ಆರೋಪಗಳ ಉತ್ತರವನ್ನು ಬಯಸುತ್ತವೆ. ಆ ಮೂಲಕ ಅವರು ಸ್ವಯಂ ತೃಪ್ತಿ ಹೊಂದಿದವರಿಗೆ ತಮ್ಮ ಅಮುಸ್ಲಿಮ್ ಮಿತ್ರರಿಗೂ ಪವಿತ್ರ ಖುರ್‌ಆನ್‌ನ ಸತ್ಯತೆಯನ್ನು ಮನವರಿಕೆ ಮಾಡಿಕೊಡಬಹುದು.

ಸದರಿ ಕಾರಣಗಳಿಗಾಗಿ ವಸೀಮ್ ರಿಜ್ವಿ ಬರೆದ ಆರೋಪಗಳಿಗೆ ಉತ್ತರಗಳನ್ನು ಬರೆಯಲಾಗಿದೆ. ಈ ಉತ್ತರಗಳು ಮುಸಲ್ಮಾನರಿಗೆ ಮತ್ತು ಅನ್ಯಧರ್ಮಗಳ ಸಜ್ಜನ ಮಿತ್ರರ ಹೃದಯಗಳಲ್ಲಿ ಮೂಡಿದ ಆತಂಕಗಳು ದೂರವಾಗಲಿ ಎಂದು ಅಲ್ಲಾಹನೊಡನೆ ಪ್ರಾರ್ಥಿಸುತ್ತೇನೆ ಆಮೀನ್. ಅಲ್ಲದೇ ಅಲ್ಲಾಹನು ಪವಿತ್ರ ಖುರ್‌ಆನ್‌ನ ಬಗ್ಗೆ ಅವರ ವಿಶ್ವಾಸ ನಂಬಿದವರಲ್ಲಿ ಇನ್ನಷ್ಟು ದೃಢತೆ ನೀಡಲಿ ಆಮೀನ್.

### ಆಕ್ಷೇಪ-1

ರಸೂಲುಲ್ಲಾಹ್(ಸ) 632 ರಲ್ಲಿ ನಿಧನಗೊಂಡರು. ಅಲ್ಲಾಹನು ಅವರಿಗೆ ಮಾನವೀಯತೆಗೋಸ್ಕರ ಒಂದು ಸಂದೇಶವನ್ನು ನೀಡಿದ್ದನು. ಈ ಖುರ್‌ಆನ್ ಅವರ ಜೀವನದಲ್ಲಿ ತಯಾರಾಗಲಿಲ್ಲ. ಬದಲು ಅವರ ಅಗಲಿಕೆಯ ನಂತರ ತಯಾರಾಗಿದೆ.

### ಉತ್ತರ

ಈ ಲೋಕವನ್ನು ಸೃಷ್ಟಿಸಿದ ಸೃಷ್ಟಿಕರ್ತನು ಸಯ್ಯದ್‌ನಾ ಮುಹಮ್ಮದ್(ಸ) ರವರ ಮೇಲೆ ಸುಮಾರು 23 ವರ್ಷಗಳ ಅವಧಿಯಲ್ಲಿ ಪವಿತ್ರ ಖುರ್‌ಆನ್‌ನ್ನು ಇಳಿಸಿದ್ದಾನೆ ಎಂದು ಪ್ರತಿಯೊಬ್ಬ ಸತ್ಯಸಂಧಕ ಮತ್ತು ನೈಜ ಮುಸಲ್ಮಾನನು ಚೆನ್ನಾಗಿ ಬಲ್ಲವನಾಗಿದ್ದಾನೆ ಮತ್ತು ಧೃಢವಾದ ವಿಶ್ವಾಸ ಹೊಂದಿದ್ದಾನೆ. ಅದನ್ನು ಇಳಿಸಿದ ಅಲ್ಲಾಹನೇ ಅದೇ ಖುರ್‌ಆನ್‌ನಲ್ಲಿ ಘಂಟಾಘೋಷವಾಗಿ ಅಂತ್ಯ ತೀರ್ಮಾನ ದಿನದವರೆಗೆ ಈ ವಚನವನ್ನು ನೀಡಿದ್ದಾನೆ.

(1) **ಇನ್ನಾ ನಹನು ನಝ್ಝಲ್‌ನಝ್ಝಿಕ್‌ರ ವ ಇನ್ನಾ ಲಹೂ ಲಹಾಫಿಝೂನ್** (ಸೂರಃ ಅಲ್‌ಹಿಜ್ರ್ -ವಚನ 10)

ಅನುವಾದ: ದಿಟವಾಗಿಯೂ ನಾವೇ ಈ ಉಪದೇಶವನ್ನು ಅವತೀರ್ಣಗೊಳಿಸಿದ್ದು, ಖಂಡಿತವಾಗಿಯೂ ನಾವೇ ಅದನ್ನು ಸಂರಕ್ಷಿಸುವೆವು. ಈ ಪವಿತ್ರ ವಚನದಲ್ಲಿ ಅಲ್ಲಾಹನು ವಾಗ್ದಾನ ನೀಡಿರುವನು. ನಾವೇ ಪವಿತ್ರ ಖುರ್‌ಆನ್‌ನ್ನು ಅವತರಣಗೊಳಿಸಿದ್ದು ಮತ್ತು ನಾವೇ ಅದನ್ನು ಸಂರಕ್ಷಿಸುವೆವು. ಭೂಮಿಯಲ್ಲಿ ನೆಲೆಸುವ ಯಾವ ಮನುಷ್ಯನಿಗೆ ಅದರಲ್ಲಿ ಹೆಚ್ಚು ಕಡಿಮೆ ಮಾಡುವ ಶಕ್ತಿ ಇಲ್ಲ. ಈ ವಾಗ್ದಾನದಿಂದ ತಿಳಿದುಬರುವುದೇನೆಂದರೆ ಯಾರಾದರೂ ತಿದ್ದುಪಡಿ ಮಾಡುವ ಸಾಹಸಕ್ಕೆ ಕೈ ಹಾಕಿದರೆ ಆ ಸರ್ವಶಕ್ತನಾದ ಅಲ್ಲಾಹನು ಖಂಡಿತವಾಗಿಯೂ ಹಾಗೆ ಮಾಡಲು ಬಿಡಲಾರನು ಅದಕ್ಕೆ ಹಿಂದಿನ 14 ಶತಮಾನಗಳೇ ಸಾಕ್ಷ್ಯವಾಗಿದೆ.

### ಪವಿತ್ರ ಖುರ್‌ಆನ್ ಅವತರಣ ಮತ್ತು ಅದರ ಕ್ರೋಡೀಕರಣದ ಇತಿಹಾಸ

ಒಂದು ಅಂದಾಜಿನ ಪ್ರಕಾರ ಪವಿತ್ರ ಖುರ್‌ಆನ್‌ನ ಅವತರಿಕೆ 24ನೇ ರಂಝಾನ್ (20 ಆಗಸ್ಟ್ 610) ರಂದು ಪ್ರಾರಂಭಗೊಂಡಿತು. ಹಝ್ರತ್ ಮುಹಮ್ಮದ್(ಸ) ರವರು 1 ರಬಿಉಲ್ ಅವ್ವಲ್, 11 ಹಿಜರಿ, 26 ಮೇ 632 ರವರೆಗೆ ನಿಧನಗೊಳ್ಳುವವರೆಗೂ ವಿವಿಧ ಸಮಯಗಳಲ್ಲಿ ಅವತರಿಸುತ್ತ ಇತ್ತು. ಈ ಲೆಕ್ಕದಿಂದ ಅವರ ನುಬುಅತ್ತಿನ ದಿನಗಳು ಸುಮಾರು 7 ಸಾವಿರ ಒಂಬೈನೂರ ಎಪ್ಪತ್ತು (7970) ಆಗುತ್ತವೆ. ಪವಿತ್ರ ಖುರ್‌ಆನ್‌ನ ಒಟ್ಟು ಪದಗಳ ಸಂಖ್ಯೆ: (77924) ಆಗುತ್ತವೆ. ಅದರನ್ವಯ ದಿನನಿತ್ಯ ಅವತರಿಕೆಯು ಸರಾಸರಿ ಅಂದಾಜು 9 ಶಬ್ದಗಳಾಗುತ್ತವೆ. ಇತಿಹಾಸದಿಂದ ತಿಳಿದುಬರುವುದೇನೆಂದರೆ ಕೆಲ ಸಂದರ್ಭಗಳಲ್ಲಿ ಕಡಿಮೆ. ಹಝ್ರತ್ ರಸೂಲುಲ್ಲಾಹ್(ಸ) ರವರು ಎಷ್ಟೇ ವಚನಗಳು ಅವತರಣಗೊಂಡರೂ ತಕ್ಷಣ ಸಹಾಬರಿಗೆ (ಶಿಷ್ಯಂದರಿಗೆ) ಕಂಠಸ್ಥ ಮಾಡಿಸಿ ಬಿಡುತ್ತಿದ್ದರು. ಖುರ್‌ಆನ್ ಅವತರಣಗೊಂಡ ಪ್ರಾರಂಭದಿಂದಲೇ ಹಝ್ರತ್ ಜಿಬ್ರೇಲ್ ಸಯ್ಯದ್‌ನಾ ಹಝ್ರತ್ ಮುಹಮ್ಮದ್(ಸ) ರವರ ಬಳಿಯಿಂದ ಅವರಿಗೆ ಅವತರಣಗೊಂಡ ವಚನಗಳು ಕಂಠಸ್ಥ ಆಗುವವರೆಗೆ ಮರಳುತ್ತಿರಲಿಲ್ಲ.

***(ಪುಟ ಸಂಖ್ಯೆ-09 ರಲ್ಲಿ ಮುಂದುವರಿಸಲಾಗಿದೆ)***

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.02, Thursday, 18 November 2021, Issue No. 46

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)

**(ಬದರ್ ಸಂಚಿಕೆ 45ರ ವರದಿಯ ಉಳಿದ ಭಾಗ)**

* ಅನಂತರ 12.50 ಗಂಟೆಗೆ ಮಾನ್‌ಟೆಗೋರೋ ದೇಶದಿಂದ ಬಂದ ತಂಡದ ಹುಝೂರ್(ಅತಬಿಅ) ಅವರೊಂದಿಗೆ ಭೇಟಿ ಮಾಡುವ ಭಾಗ್ಯ ಪಡೆದರು.

ಈ ತಂಡದಲ್ಲಿ ರಾಗಿಬ್ ಶಪ್ತಾಫಿ ಸಾಹಿಬ್, ಅಲಿ ಕೊವಾಚಿ ಸಹಿಬ್ ಶಾಮೀಲಾಗಿದ್ದರು. ರಾಗಿಬ್ ಸಾಹಿಬ್ ಜಲ್ಸ ಸಾಲಾನ ಜರ್ಮನಿಗೆ ಬಂದದ್ದು, ದ್ವಿತೀಯ ಸಲವಾಗಿತ್ತು. ಅವರು ಹೇಳಿದರು. ಈ ವರ್ಷದ ಜಲ್ಸದಲ್ಲಿ ಅಸಾಮಾನ್ಯ ವ್ಯತ್ಯಾಸ ಕಂಡುಬಂದಿದೆ, ವ್ಯವಸ್ಥೆಯ ದೃಷ್ಟಿಯಿಂದಾಗಲಿ, ಸಂಖ್ಯೆಯ ದೃಷ್ಟಿಯಿಂದಾಗಲಿ, ಭಾಷಣಗಳ ದೃಷ್ಟಿಯಿಂದಾಗಲಿ, ವಿಶೇಷವಾಗಿ ಹುಝೂರರ ಭಾಷಣಗಳು ತುಂಬಾ ವಿಶ್ವಾಸವರ್ಧಕವಾಗಿದ್ದವು.

ಅವರು ಹೇಳಿದರು. ಹಿಂದಿನ ವರ್ಷವು ಈ ಜಲ್ಸದಲ್ಲಿ ಭಾಗವಹಿಸಿದ್ದೆ. ಮರಳಿ ಹೋದ ನಂತರ ತಮ್ಮ ಕ್ಷೇತ್ರದ ಹಲವು ಜನರೊಂದಿಗೆ ಸಂಪರ್ಕ ಬೆಳೆಸಿದೆ. ತಮ್ಮ ನಗರದ ಮೇಯರ್‌ನಿಂದ ಮತ್ತು ಉಪ ಮೇಯರ್‌ರವರನ್ನು ಸಹ ಸಂಪರ್ಕಿಸಿದ್ದೆ. ಅಲ್ಲದೇ ಮೋನ್ಟೆನೇಗ್ರೋವಿನ ಓರ್ವ ಮಾಜಿ ಮಂತ್ರಿಗಳೊಡನೆಯೇ ಸಂಪರ್ಕಿಸಿ ಜಮಾಅತಿನ ಬಗ್ಗೆ ಹೇಳಿದೆನು.

ಅವರು ಹೇಳಿದರು. ಈ ಸಮಯ ಎರಡು ತೊಡಕುಗಳು ಕಂಡುಬರುತ್ತಿವೆ. ಒಂದನೆಯದಾಗಿ ಮುಸ್ಲಿಮ್ ವರ್ಗ ಜಮಾಅತಿಗೆ ವಿರೋಧವಾಗಿದ್ದಾರೆ. ಅವರು ಹತ್ತಿರ ಬರುವುದಿಲ್ಲ. ಎರಡನೆಯದಾಗಿ (ಅಮುಸ್ಲಿಮ್) ಅನ್ಯಧರ್ಮದವರು ಹತ್ತಿರ ಬರುವುದಿಲ್ಲ.

ಆಗ ಹುಝೂರ್(ಅತಬಿಅ) ಹೇಳಿದರು. ಮುಸ್ಲಿಮರಂತೂ ತಮ್ಮ ಸ್ವಹಿತ ನೋಡುವವರಾಗಿದ್ದಾರೆ. ಅಹ್ಮದಿಯಾ ಜಮಾಅತ್ ಏನು ಬಯಸುತ್ತದೆ, ಅವರ ಶಿಕ್ಷಣವೇನೆಂದು, ಖುದ್ದಾಗಿ ಯೋಚಿಸುವುದಿಲ್ಲ. ಪಾಕಿಸ್ತಾನಿ ಮುಲ್ಲಾಗಳು ಏನು ಹೇಳುತ್ತಾರೋ ಅದನ್ನೇ ನಂಬುತ್ತಾರೆ ಮತ್ತು ಅದರ ಹಿಂದೆಯೇ ನಡೆಯುತ್ತಾರೆ. ಅದೇ ನಿಕೃಷ್ಟ ಉಲಮಾಗಳು ಇಸ್ಲಾಮ್‌ನ ರೂಪ ಬದಲಾಯಿಸಿದ್ದು. ಅದನ್ನು ಅಂತ್ಯಗೊಳಿಸಲೆಂದೇ ಇಮಾಮ ಮಹದಿಯವರಿಗೆ ಆಗಮಿಸಬೇಕಿತ್ತು.

* ರಾಗಿಬ್ ಸಾಹಿಬ್ ಹೇಳಿದರು. ಮಾನ್‌ಟೇಗೇರೋ ಮುಸ್ಲಿಮರಲ್ಲಿ ಸಾಮಾನ್ಯವಾಗಿ ಅಹ್ಮದಿ ಜಮಾಅತ್ ನೌಝುಬಿಲ್ಲಾಹ್ ಹಝ್ರತ್ ರಸೂಲುಲ್ಲಾಹ್(ಸ) ರವರನ್ನು ನಂಬುವುದಿಲ್ಲ ಎಂಬ ಭಾವನೆಯಿದೆ. ಆದರೆ ಯಾವ ವ್ಯಕ್ತಿ ಜಮಾಅತ್‌ನ್ನು ಸಮೀಪದಿಂದ ನೋಡುವನೋ ಅವನಿಗೆ ತಕ್ಷಣ ಅರಿವಾಗುತ್ತದೆ. ಇದು ಸುಳ್ಳು ಮಾತ್ರವಾಗಿದೆ.

ಆಗ ಹುಝೂರ್(ಅತಬಿಅ) ಹೇಳಿದರು. ನಾವು ನಬಿ ಕರೀಂ(ಸ) ರವರನ್ನು ನಂಬುವುದಿಲ್ಲ ಎಂಬ ಮಾತು ನೌಝುಬಿಲ್ಲಾಹ್ ಅತ್ಯಂತ ಮಿಥ್ಯ ಆರೋಪವಾಗಿದೆ. ಅಂದ ಹಾಗೆ ನಾವಂತೂ ಅವರಿಗೆ ಬಂದು ನೋಡಲು ಕರೆ ನೀಡುತ್ತೇವೆ. ನಮ್ಮೊಡನೆ ಖಾತಮನ್ನಬೀಯೀನ್ ನಿಜ ಅರ್ಥದಲ್ಲಿ ಚರ್ಚಿಸಲಿ. ಇಡೀ ಲೋಕಕ್ಕೆ ತಿಳಿಯುವುದು ಯಾರು ತಪ್ಪು ಹಾದಿಯಲ್ಲಿದ್ದಾರೆ ಮತ್ತು ಯಾರು ಸತ್ಪಥದಲ್ಲಿ? ಆದರೆ ವಿರೋಧಿಗಳು ನಮ್ಮೊಡನೆ ಚರ್ಚಿಸಲು ಸಿದ್ಧರಾಗುವುದಿಲ್ಲ. ಏಕೆಂದರೆ ಅವರ ಬಳಿ ಯಾವ ಪುರಾವೆಯೂ ಇಲ್ಲ. ಅವರು ಹೇಳಿದರು. ಈ ವಿಷಯದಲ್ಲಿ ಹುಝೂರ್(ಅತಬಿಅ) ನೀಡಿದ ಖುತುಬ ಜಮುಅ ನನ್ನನ್ನು ತುಂಬ ಪ್ರಭಾವಿತಗೊಳಿಸಿದೆ. ಜನರು ಹೇಳುತ್ತಾರೆ. ಅಹ್ಮದಿಯರು ಹಜ್‌ರತ್ ರಸೂಲುಲ್ಲಾಹ್‌ರವರಿಂದ ಬೇರ್ಪಟ್ಟಿದ್ದಾರೆ. ಆದರೆ ಹುಝೂರ್(ಅತಬಿಅ)ರ ಖುತ್‌ಬ ಕೇಳಿದ ನಂತರ ನನ್ನ ಮನಸ್ಸಿನಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ರವರ ಪ್ರೀತಿ ಮನೆ ಮಾಡಿದೆ. ಅವರು ಹೇಳಿದರು. ಅವರು ಜಮಾಅತಿನ ಸತ್ಯತೆಯನ್ನು ಒಪ್ಪಿಕೊಂಡಿದ್ದಾರೆ. ಜಲ್ಸದ ಕೊನೆಯ ದಿನ ಅವರಿಗೆ ಬೈಅತ್‌ನಲ್ಲಿ ಭಾಗವಹಿಸಲು ಆಗಲಿಲ್ಲ. ಅದಕ್ಕೆ ಕಾರಣ ಅವರು ಅಸ್ವಸ್ಥರಾಗಿದ್ದರು. ಬ್ಲಡ್ ಪ್ರಶರ್ ಹೈ ಆಗಿತ್ತು. ಆದರೆ ಈಗ ಅವರು ತನ್ನನ್ನು ಅಹ್ಮದಿ ಎಂದು ಭಾವಿಸುತ್ತಾರೆ. ಈ ಕುರಿತು ಅವರು ಹೇಳಿದರು. ಅವರು ಅಸ್ವಸ್ಥರಾದಾಗ ಅವರನ್ನು ವಿಚಾರಿಸಲು ಉಪಸ್ಥಿತರಿದ್ದ 4 ವಿಭಿನ್ನ ವೈದ್ಯರು ಅವರನ್ನು ಚೆನ್ನಾಗಿ ನೋಡಿಕೊಂಡರು. ಇದರಿಂದಲೂ ಅವರು ತುಂಬ ಪ್ರಭಾವಿತರಾದರು.

* ಈ ತಂಡದಲ್ಲಿ ಶಾಮಿಲಾಗಿದ್ದ ಅಲಿ ಕೊವಾಚಿ ಸಾಹೇಬ್ ಹೇಳಿದರು. ನಾನು ಮೊದಲ ಬಾರಿಗೆ ಜಲ್ಸದಲ್ಲಿ ಬಂದಿರುತ್ತೇನೆ. ನಾನು ಈ ಮೊದಲು ಏಕೆ ಬರಲಿಲ್ಲ ಎಂದು ಎಣಿಸಿ ತುಂಬ ವಿಷಾದ ಎನಿಸುತ್ತದೆ. ಏಕೆ ನನ್ನಿಂದ ತಡವಾಯಿತು. ಮತ್ತು ಅವರು ಹೇಳುತ್ತಾರೆ. ನಾನು ಜಲ್ಸದಲ್ಲಿ ಬಂದುದಕ್ಕೆ ತುಂಬ ಸಂತುಷ್ಟನಾಗಿದ್ದೇನೆ. ನನ್ನ ಮನಸ್ಸಿಗೆ ನೆಮ್ಮದಿ ದೊರೆತಿದೆ. ಆತಿಥ್ಯವೂ ತುಂಬಾ ಚೆನ್ನಾಗಿತ್ತು. ಲೋಕದಲ್ಲಿ ಇಂದು ಕೇವಲ ಜನಗಳ ಬಿನ್ನತೆಯಿದೆ. ಆದರೆ ನಿಮ್ಮಲ್ಲಿ ಇರುವಂತಹ ಏಕತೆ ಲೋಕದಲ್ಲಿ ಎಲ್ಲೂ ಕಂಡುಬರುತ್ತಿಲ್ಲ. ಮತ್ತು ಹೇಳಿದರು. ನನಗೆ ಈ ಜಲ್ಸದ ಕುರಿತು ಹೇಳುತ್ತಿದ್ದಾಗ ಏನೋ ಒಂದು ಅಂದಾಜು ಮಾಡಿದ್ದೆ, ಆದರೆ ಇಷ್ಟು ಭವ್ಯವಾಗಿರುತ್ತದೆ ಎಂದು ಯೋಚಿಸಿರಲಿಲ್ಲ. ಸಣ್ಣ ವಿಷಯ ಉದ್ಭವವಾದರೂ ಅಲ್ಲಿದ್ದ ಕಾರ್ಯಕರ್ತರು ಬಂದು ಉತ್ತಮ ರೀತಿಯಲ್ಲಿ ಪರಿಹರಿಸುತ್ತಾರೆ. ಇಷ್ಟು ದೊಡ್ಡ ಸಂಖ್ಯೆಯ ಊಟೋಪಚಾರ ವ್ಯವಸ್ಥೆ ಬೆರಗಾಗುವಂತೆ ಮಾಡುತ್ತದೆ. ಜನರು ಇಲ್ಲಿ ಬರುವ ಅವಶ್ಯತೆ ಇದೆ. ಇಲ್ಲಿ ಬರಬೇಕು. ಇಸ್ಲಾಮಿನ ನಿಜವಾದ ರೂಪ ನೋಡಬೇಕು. ಮತ್ತು ಆಧ್ಯಾತ್ಮಿಕತೆಯ ಹೊಸ ಲೋಕ ನೋಡಬೇಕು ಮತ್ತು ಅವರು ಹೇಳಿದರು. ಮೊಂಟೋಗೋದಲ್ಲಿ ಜಮಾಅತ್ ಸ್ಥಾಪನೆ ಮತ್ತು ಕೇಂದ್ರದ ತುಂಬ ಅವಶ್ಯಕತೆ ಇದೆ. ಆಗ ಹುಝೂರ್(ಅತಬಿಅ) ಹೇಳಿದರು. ಅಲ್ಲಿ ಜಮಾಅತ್ ಅಧಿಕೃತ ದಾಖಲೆ ಪಡೆದಾಗ ಮತ್ತು ಕೇಂದ್ರ ಸ್ಥಾಪನೆಯಾದಾಗ ಜನರು ಸ್ವಯಂ ನೋಡಬಹುದು.

ಹುಝೂರ್ ಅನ್ವರ್(ಅತಬಿಅ) ಹೇಳಿದರು. ಮೋನ್‌ಟೆನೀಗರ್‌ದಲ್ಲಿ ನಮ್ಮ ಸಾಹಿತ್ಯ ಪ್ರಚಾರಪಡಿಸಿರಿ. ಸಾಧ್ಯವಾದ ರೀತಿಯಲ್ಲಿ ಇಸ್ಲಾಮಿನ ಪ್ರಚಾರ ಮಾಡುವುದು ನಮ್ಮ ಕರ್ತವ್ಯವಾಗಿದೆ. ಹಝ್ರತ್ ಅಖ್‌ದಸ್ ಮಸೀಹ್ ಮೌಊದ್(ಅ) ರವರ ಕಾಲಘಟ್ಟ ಪರಿಪೂರ್ಣ ರೀತಿಯಲ್ಲಿ ಪ್ರಚಾರ ಮಾಡುವ ಕಾಲವಾಗಿದೆ. ಮಾರ್ಗದರ್ಶನ (ಹಿದಾಯತ್) ಮೊದಲೇ ಪೂರ್ಣಗೊಂಡಿದೆ. ಇದೀಗ ಇಸ್ಲಾಮಿನ ಪ್ರಚಾರ ಸಂದೇಶ ಪರಿಪೂರ್ಣ ರೀತಿಯಲ್ಲಿ ಗೊಳಿಸುವ ಕಾಲ ಇದಾಗಿದೆ. ಮೌಲ್ವಿಗಳಂತೂ ಧರ್ಮವನ್ನು ಕೆಡಿಸಿಬಿಟ್ಟಿದ್ದಾರೆ. ಪ್ರತಿಯೊಬ್ಬ ಮೌಲ್ವಿ ಹೇಳುವುದು ನನ್ನ ಮತ ಎಲ್ಲರಿಗಿಂತ ಚೆನ್ನಾಗಿದೆ. ಆದರೆ ನಿಜವಾದ ಮತ ಪವಿತ್ರ ಖುರ್‌ಆನ್ ಆಗಿದೆ, ಹದೀಸುಗಳಾಗಿವೆ, ಹಝ್ರತ್ ರಸೂಲುಲ್ಲಾಹ್(ಸ) ರವರ ಸುನ್ನತ್ ಆಗಿದೆ. ಇಸ್ಲಾಂ ಇದಾಗಿದೆಯೇ ಹೊರತು ಮೌಲ್ವಿ ಸೃಷ್ಟಿಸಿದ್ದು ಅಲ್ಲ.

**(ಮುಂದುವರಿಯುವುದು)**

## 126 ನೇ ಜಲ್ಸಾ ಸಾಲಾನ ಖಾದಿಯಾನ್

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 126ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 24, 25 ಮತ್ತು 26ನೇ ಡಿಸೆಂಬರ್ 2021 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ.

**ಜಝಾಕುಮುಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.